ಜನಶಕ್ತಿ

ಕನ್ನಡ ವಾರಪತ್ರಿಕೆ

Blog: janashakthi.wordpress.com e-mail: js_weekly@yahoo.com

ಸಂಪುಟ 07, ಸಂಚಿಕೆ 35
ಸೆಪ್ಟೆಂಬರ್ 1, 2013

ಪುಟ 16 ರೂ. 10/-






ಮಡೆಸ್ನಾನ–ಪಂಕ್ತಿಬೇಧ : ಪುರೋಹಿತಶಾಹಿ ಲಾಭಕ್ಕಾಗಿ

ನಿಷೇಧಕ್ಕಾಗಿ ರಾಜ್ಯ ಸಮಾವೇಶದ ಆಗ್ರಹ

...ಕಾಗಿರುವುದು :
...ರ್ಯಾಯ 'ನೇತಾರ' ಅಲ್ಲ
...ರ್ಯಾಯ 'ಧೋರಣೆಗಳು'






ಕಲ್ಲಿದ್ದಲು ಹಗರಣ –
ಕಡತಗಳೇ ಕಾಣೆ!!

ಐಎಂಎಫ್ :
ಬಾಯಲ್ಲಿ ಬೆಲ್ಲ ಎಡೆಯಲ್ಲಿ ಕತ್ತರಿ...

ಜನಶಕ್ತಿ
ಕನ್ನಡ ವಾರಪತ್ರಿಕೆ

ಯುರೋಪಿಯನ್ ಆರ್ಥಿಕತೆಯಲ್ಲಿ ಗಂಭೀರ ಬಿಕ್ಕಟ್ಟು –



ಎಂ. ರತ್ನಾಕರ ಶೆಟ್ಟಿ. ಭಾಗ–2

ಬಂಡವಾಳಶಾಹಿ ಅಭಿವೃದ್ಧಿಯ 'ಸ್ವರ್ಗ'ವೆಂದು ಬಿಂಬಿಸಲಾಗುತ್ತಿದ್ದ, ಭಾವಿಸಲಾಗುತ್ತಿದ್ದ ಯುರೋಪ್ ದೇಶಗಳು ಇಂದು ಒಂದೊಂದಾಗಿ ಆಳವಾದ ಬಿಕ್ಕಟ್ಟಿನತ್ತ ಜಾರುತ್ತಿವೆ. ಇಡೀ ಯರೋಪ್ ತೀವ್ರ ಬಿಕ್ಕಟ್ಟಿನ ಹಿಡಿತಕ್ಕೆ ಸಿಕ್ಕಿಬಿದ್ದಿದೆ. ಈ ಗಂಭೀರ ಬಿಕ್ಕಟ್ಟಿನ ಮೂಲವೇನು ? ಈ ಬಿಕ್ಕಟ್ಟಿನ ತೀವ್ರತೆ ಎಷ್ಟು ? ಅದು ಜಗತ್ತಿನ ಮೇಲೆ ಮತ್ತು ಭಾರತದ ಮೇಲೆ ಬೀರಬಹುದಾದ ಪರಿಣಾಮಗಳೇನು ? ಈ ಬಿಕ್ಕಟ್ಟನ್ನು ಪರಿಹರಿಸಬಹುದಾದ ದಾರಿಯಾವುದು ? ಸ್ಪೈನ್ ದೇಶದ ಪಾಳುಬಿದ್ದ ಬೃಹತ್ ಐಶಾರಾಮಿ ಅಪಾರ್ಟ್‌ಮೆಂಟ್ ಹಾಗೂ ದೈತ್ಯ ವಿಮಾನ ನಿಲ್ದಾಣಗಳ ಕುರಿತು ಕಳೆದ ವಾರದ ಲೇಖನದಲ್ಲಿ ಓದಿದ್ದೀರಿ. ಈ ಬಿಕ್ಕಟ್ಟಿಗೆ ಕಾರಣವಾದ ಐಎಂಎಫ್ ಮತ್ತು ವಿಶ್ವಬ್ಯಾಂಕ್ ಪ್ರೇರಿತ ನೀತಿಗಳ ಕುರಿತ ಒಂದು ಅವಲೋಕನ –ಲೇಖನ ಮಾಲೆಯ ಎರಡನೆಯ ಕಂತು ನಿಮಗಾಗಿ.

– ಅಲ್ಲಿ ಮರೀಚಿಕೆಗಳ ಮಾರಾಟ –
'ಅವರ ಬಾಯಲ್ಲಿ ಬೆಲ್ಲ–ಎದೆಯಲ್ಲಿ ಕತ್ತರಿ...'


ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಈ ವರ್ಷದ ಜನವರಿ ತಿಂಗಳಲ್ಲಿ ಹೊರತಂದ ತನ್ನ "ಅಭಿವೃದ್ಧಿಯ ಮುನ್ನೋಟ'ದ ವರದಿಯಲ್ಲಿ ವಿಶ್ವದ ಆರ್ಥಿಕತೆ ಈ ವರ್ಷದಲ್ಲಿ ಶೇ 3.5 ರಷ್ಟು ವೃದ್ಧಿ ಹೊಂದಲಿದೆ ಎಂದು ಹೇಳಿತ್ತು. ನಂತರ ಏಪ್ರಿಲ್ ತಿಂಗಳಲ್ಲಿ ತನ್ನ ಅಂದಾಜನ್ನು ಶೇ. 3.3 ಕ್ಕೆ ಪರಿಷ್ಕರಿಸಿತ್ತು. ಆದರೆ ಇತ್ತೀಚಿನ, ಅಂದರೆ ಜುಲೈ ತಿಂಗಳ ತನ್ನ ವರದಿಯಲ್ಲಿ ಅದು ಈ ಅಂದಾಜನ್ನು ಶೇ 3.1 ಕ್ಕೆ ಇಳಿಸಿದೆ. ಮುಂದಿನ ವರದಿಯಲ್ಲಿ ಅದು ಇನ್ನಷ್ಟು ಕುಂಠಿತವಾದರೆ ಆಶ್ಚರ್ಯಪಡಬೇಕಾಗಿಲ್ಲ. ಏಕೆಂದರೆ ಆರ್ಥಿಕ ಬೆಳವಣಿಗೆಯ ಬಗ್ಗೆ ಸಾಧ್ಯವಾದಷ್ಟು ಅವಾಸ್ತವಿಕ ಅಂದಾಜನ್ನು ಮಾಡುವುದು ಐಎಂಎಫ್‌ನ ಜಾಯಮಾನವಾಗಿಬಿಟ್ಟಿದೆ. ಎಷ್ಟಾದರೂ ಜಾಗತಿಕ ಆರ್ಥಿಕ ಬೆಳವಣಿಗಾಗಿ ಅದು, ವಿಶ್ವಬ್ಯಾಂಕ್ ಹಾಗೂ ವಿಶ್ವವ್ಯಾಪಾರ ಸಂಘಟನೆ (ಐಎಂಎಫ್)ಗಳ ಜತೆ ಸೇರಿ, ಹಾಕಿಕೊಟ್ಟ ಮಾರ್ಗದರ್ಶಕ ನೀತಿಗಳನ್ನೇ ಅಲ್ಲವೇ ಜಗತ್ತಿನಾದ್ಯಂತ ಆಳುವ ಸರ್ಕಾರಗಳು ಬಹು ವಿಧೇಯತೆಯಿಂದ ಚಾಚೂ ತಪ್ಪದೆ ಪಾಲಿಸಿಕೊಂಡು ಬಂದಿರುವುದು. ಆ ದೆಶೆಯಲ್ಲಿ ನಡೆದರೆ 'ಉಜ್ವಲ ಭವಿಷ್ಯ ನಿಶ್ಚಿತ' ಎಂದಲ್ಲವೇ ಈ ತ್ರಿಮೂರ್ತಿಗಳು ಸಾರುತ್ತಾ ಬಂದಿರುವುದು. ಈಗ ಭವಿಷ್ಯ ಉಜ್ವಲವಾಗಿರುವುದು ಬಿಡಿ, ವರ್ತಮಾನದಲ್ಲೇ ಜಗತ್ತಿನ ಆರ್ಥಿಕತೆ ವಿನಾಶದ ಅಂಚಿಗೆ ತೆವಳುತ್ತಿರುವಾಗ, ಆ ವಾಸ್ತವವನ್ನು ಜನತೆಯೆದುರು ತೆರೆದಿಡಲು ಅದಕ್ಕೆ ಬಹಳ ಮುಜುಗರವಾಗುತ್ತಿರುವುದು ಸಹಜವೇ. ಅದಕ್ಕಾಗಿಯೇ ಅಭಿವೃದ್ಧಿಯ ಇಳಿಮುಖದ ಲಕ್ಷಣಗಳನ್ನು ಸ್ಪಷ್ಟವಾಗಿಯೇ ಹೇಳುವುದರ ಬದಲು, ಕಂತಿನಲ್ಲಿ ಸ್ವಲ್ಪ ಸ್ವಲ್ಪವಾಗಿಯೇ ಬಯಲು ಮಾಡುವುದು ಸೂಕ್ತ ಎಂಬ ಹುನ್ನಾರ ಅದರದ್ದು.

ಅಷ್ಟಕ್ಕೂ ಜಾಗತಿಕ ಆರ್ಥಿಕ ಬೆಳವಣಿಗೆಯ ಮುನ್ನೋಟದ ಬಗ್ಗೆ ಅದರ ವರದಿಗೆ ಆಧಾರವಾದರೂ ಎಲ್ಲಿಂದ? ಜಗತ್ತಿನಾದ್ಯಂತ ದೇಶಗಳ ಅಭಿವೃದ್ಧಿಯ ದರವನ್ನು ಅಂದಾಜಿಸಿ, ಅದರ ಮೂಲಕ ಜಾಗತಿಕ ಸರಾಸರಿಯನ್ನು ನಿರ್ಧರಿಸಬೇಕಲ್ಲವೇ? ಇದನ್ನು ಪ್ರಾಮಾಣಿಕವಾಗಿ ಮತ್ತು ನಿಖರವಾಗಿ ಮಾಡುವ ಪ್ರಯತ್ನದಲ್ಲಿ ಐಎಂಎಫ್ ತೆ–ಡಗಿದೆ ಎಂದೇ ಭಾವಿಸಿಕೊಳ್ಳೋಣ. ಆದರೆ ಅದರೊಂದಿಗೆಯೇ ಜಾಗತಿಕ ಆರ್ಥಿಕ ಬಿಕ್ಕಟ್ಟು ತಂದೊಡ್ಡಿರುವ ಯಾತನಾಮಯ ಸಂಕಟಗಳನ್ನು, ಬಿಕ್ಕಟ್ಟು ದಿನೇ ದಿನೇ ಇನ್ನಷ್ಟು ತೀವ್ರವಾಗುತ್ತಿರುವ ಲಕ್ಷಣಗಳನ್ನು, ಬಿಕ್ಕಟ್ಟಿನ ಪರಿಣಾಮವಾಗಿ ಜನಸಮೂಹಗಳು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳು ಜಗತ್ತಿನೆಲ್ಲೆಡೆ ಇನ್ನಷ್ಟು ಉಲ್ಬಣವಾಗುತ್ತಿರುವ ವಾಸ್ತವಗಳನ್ನು ಗಮನಿಸಿದಾಗ, ಐಎಂಎಫ್‌ನ ಕಳಕಳಿಯ ಹಿಂದಿರುವ ವಂಚಕತನ ಬಯಲಾಗುತ್ತದೆ. ಏಕೆಂದರೆ, ಬಿಕ್ಕಟ್ಟಿನಿಂದ ತತ್ತರಿಸುತ್ತಿರುವ ದೇಶಗಳಿಗೆ ಪರಿಹಾರ ಒದಗಿಸುವ ನೆಪದಲ್ಲಿ ಮತ್ತಷ್ಟು ಜನವಿರೋಧಿ, ಕಾರ್ಮಿಕ ವಿರೋಧಿ ಶರತ್ತುಗಳನ್ನು ಅಮಾನವೀಯವಾಗಿ ಹೇರುತ್ತಿರುವುದು ಇದೇ ಐಎಂಎಫ್ ಮತ್ತು ಅದರ ದುಷ್ಟಕೂಟವಲ್ಲವೇನು?

ಬಿಕ್ಕಟ್ಟಿನ ಭೀಕರ ಪರಿಣಾಮಗಳು ಹತ್ತು ಹಲವಾರು ದೇಶಗಳ ಆರ್ಥಿಕತೆಯನ್ನೇ ನೆಲಕಚ್ಚುವಂತೆ ಮಾಡಿರುವ ಕಟು ವಾಸ್ತವ ಎದುರಿಗಿದ್ದಾಗ್ಯೂ ಸಹ, ಬಿಕ್ಕಟ್ಟಿನಿಂದ ಪಾರಾಗುವ ಮತ್ತು ಜನ ಸಮುದಾಯದ ಸಂಕಷ್ಟಗಳಿಗೆ ಪರಿಹಾರ ಒದಗಿಸುವ ಪರ್ಯಾಯ ದಾರಿಗಳ ಬದಲಾಗಿ, ಕೇವಲ ಉಳ್ಳವರ ಬಗ್ಗೆ ಒಲವು ತೋರುವ ತನ್ನ ಹಳೆಯ ಕೆಟ್ಟ ನೀತಿಗಳನ್ನೇ ಪುನಃ ಪುನಃ ಹೇರುವ ಅದರ ಚಾಳಿ ಇನ್ನೂ ಮುಂದುವರೆದಿದೆ.

ನಿರುದ್ಯೋಗ, ವೇತನ ಕಡಿತ, ಉದ್ಯೋಗ ನಾಶ, ಬಡತನ, ಬೆಲೆಏರಿಕೆಗಳಿಂದಾಗಿ ಬದುಕೇ ಅತಂತ್ರವಾಗಿರುವ ಕೋಟ್ಯಾಂತರ ಜನರ ಬವಣೆಯ ನಡುವೆಯೇ, ಜಗತ್ತಿನ ಅತ್ಯಂತ ಶ್ರೀಮಂತ ಕುಳಗಳ ಆದಾಯ ಕಳೆದ ವರ್ಷ ಶೇ.10 ಕ್ಕೂ ಮೀರಿ ಹೆಚ್ಚಾಗಿದೆ ಎಂದ ಮೇಲೆ ಐಎಂಎಫ್ ಪ್ರತಿಪಾದಿಸುವ ನೀತಿಗಳು ಯಾರ ಪರವಾಗಿವೆ ಎಂಬುದನ್ನು ಅರ್ಥಮಾಡಿಕೊಳ್ಳಲು ವಿಶೇಷವಾದ ವ್ಯವಹಾರ ಜ್ಞಾನವೇನೂ ಬೇಕಾಗಿಲ್ಲ.

ಐಎಂಎಫ್ ಮತ್ತದರ ದುಷ್ಟಕೂಟ ಬಲವಂತವಾಗಿ ಹೇರಿರುವ ನವ ಉದಾರವಾದಿ ಆರ್ಥಿಕ ನೀತಿಗಳಿಂದಾಗಿ ಸಾಕಷ್ಟು ಕಹಿ ಉಂಡಿರುವ ಮತ್ತು ಬಹಳಷ್ಟು ಕಂಗೆಟ್ಟಿರುವ ಭಾರತದ ಕಾರ್ಮಿಕವರ್ಗ ಹಾಗೂ ಸಾಮಾನ್ಯ ಜನತೆ, ಈ ನೀತಿಗಳ ಹಿಂದಿರುವ ಹೂರಣಗಳನ್ನು ತಡವಾಗಿಯಾದರೂ, ಸರಿಯಾಗಿಯೇ ಅರ್ಥ ಮಾಡಿಕೊಳ್ಳುತ್ತಿವೆ. ಬೆಳೆದು ಬರುತ್ತಿರುವ ವಿಶಾಲಸ್ತರದ, ವಿಶಾಲ ವಿಸ್ತಾರದ ಐಕ್ಯ ಹೋರಾಟಗಳೇ ಇದ–ಕ್ಕೆ ಸಾಕ್ಷಿ. ಆದರೆ ಜನಪರ ಪರ್ಯಾಯ ನೀತಿಗಳು ಜಾರಿಗೆ ಬರಬೇಕಾದರೆ, ಇಂತಹ ಹೋರಾಟಗಳು ಇನ್ನಷ್ಟು ತೀವ್ರವಾಗಬೇಕು. ಮತ್ತಷ್ಟು ವಿಶಾಲವಾಗಬೇಕು. ಜನ ಸಮುದಾಯದ ಇನ್ನಷ್ಟು ಹೊಸ ಹೊಸ ವಿಭಾಗಗಳನ್ನು ಆವರಿಸಿಕೊಳ್ಳಬೇಕು. ಪ್ರಚಾರ ಪ್ರಕ್ಷೋಭೆಗಳ ಅಲೆಗಳನ್ನು ಹರಿಯಬಿಡಬೇಕು. ವರ್ತಮಾನದ ಸಂಕಷ್ಟಗಳನ್ನು ಪರಿಹರಿಸಿಕೊಂಡು ಭವಿಷ್ಯದ ಸುಂದರ ಬದುಕನ್ನು ರೂಪಿಸಿಕೊಳ್ಳಲೋಸುಗ ಬೃಹತ್ ಆಂದೋಲನವನ್ನು ನಡೆಸುವ ನಿಟ್ಟಿನಲ್ಲಿ ಅವರನ್ನು ಸಜ್ಜುಗೊಳಿಸಬೇಕು. ಕಾರ್ಮಿಕವರ್ಗ ಹಾಗೂ ಪ್ರಜ್ಞಾವಂತ ಜನಸಮುದಾಯದ ಎದುರು ಎದ್ದುನಿಂತಿರುವ ದೊಡ್ಡ ಸವಾಲು ಇದು.



ಸ್ವಂತ ಅನುಭವಗಳಲ್ಲದೇ, ಅನ್ಯರ ಅನುಭವಗಳಿಂದಲೂ ಕಲಿಯುವುದರ ಮೂಲಕವೇ ಮಾನವ ಸಮಾಜ ಬೆಳೆದು ಬಂದಿರುವುದು. ಜಾಗತಿಕ ಬಿಕ್ಕಟ್ಟಿನ ಈ ವಿಷಮ ಪರಿಸ್ಥಿತಿಯಲ್ಲಿ ಜಗತ್ತಿನಾದ್ಯಂತ ಬೆಳೆದು ಬರುತ್ತಿರುವ ಹೋರಾಟಗಳ ಪರಿಚಯ ಮಾಡಿಕೊಳ್ಳುವ ಅಗತ್ಯ ಇಂದು ಹಿಂದೆಂದಿಗಿಂತಲೂ ಹೆಚ್ಚು. ಆ ನೆಲೆಯಲ್ಲೇ, ಯೂರೋಪಿಯನ್ ಸಮುದಾಯದ ದೇಶಗಳು ಒಟ್ಟಾರೆಯಾಗಿ ಹಾಗೂ ಬಿಡಿಬಿಡಿಯಾಗಿ ಅನುಭವಿಸುತ್ತಿರುವ ಭೀಕರ ತಲ್ಲಣಗಳ ಬಗ್ಗೆ ಬೆಳಕು ಚೆಲ್ಲುವ ಪ್ರಯತ್ನ ಮಾಡಬೇಕೆಂಬ ಆಶಯ ನಮ್ಮದು. ನಿಜ, ಅತ್ಯಂತ ವಿವರ ಪೂರ್ಣ ಚಿತ್ರಣವನ್ನು ನೀಡಲು ಸೀಮಿತವಾದ ಈ ಪುಟಗಳು ಖಂಡಿತವಾಗಿಯೂ ಸಾಕಾಗಲಾರವು. ಆದರೆ ಬಿಕ್ಕಟ್ಟಿನ ಪ್ರಮುಖ ಆಯಾಮಗಳ ಬಗ್ಗೆ ಮತ್ತು ಅದರಿಂದಾಗಿಯೇ ಬೆಳೆದು ಬರುತ್ತಿರುವ ಹೋರಾಟದ ಅಲೆಗಳ ಸ್ಥೂಲ ಅಂಶಗಳನ್ನು ಕಿಂಚಿತ್ತಾದರೂ ರೂಪದಲ್ಲಿ ತಿಳಿದುಕೊಳ್ಳ ಸಹಕಾರಿಯಾಗುವ ನಿಖರ ಮಾಹಿತಿಗಳನ್ನು ನೀಡಲು ಸಾಧ್ಯ.

ಕೋಟ್ಯಾಧಿಪತಿಗಳಿಗೆ ಸಂಪತ್ತು
ಕೋಟ್ಯಾಂತರ ಜನರಿಗೆ ಸಂಕಷ್ಟ

ಇಡೀ ಯೂರೋಪನ್ನು ಆವರಿಸಿಕೊಂಡಿರು
ಬಿಕ್ಕಟ್ಟಿನಿಂದಾಗಿ ಜನಸಮುದಾಯ ಅಪಾ
ಸಂಕಷ್ಟಗಳನ್ನು ಎದುರಿಸುತ್ತಿರುವಾಗ
ಕೋಟ್ಯಾಧಿಪತಿಗಳ (ಡಾಲರ ಮಿಲಿಯ
ಧೀಶರು – ಅಂದರೆ 6 ಕೋಟಿ ರೂಗಳಿಗ
ಹೆಚ್ಚು ಆಸ್ತಿ ಇರುವವರು) ಸಂಖ್ಯೆ 2012ರ
34.1 ಲಕ್ಷಕ್ಕೇರಿದೆ ಎಂದು ವಿಶ್ವಸ್ವಾ
ವರದಿ ಹೇಳಿದೆ. ಕಳೆದ ವರ್ಷಕ್ಕಿಂ
ಇದು ಶೇ. 7.5 ರಷ್ಟು ಹೆಚ್ಚು. ಅವ
ಆಸ್ತಿಯ ಪ್ರಮಾಣವನ್ನು ಲೆಕ್ಕ ಹಾಕುವಾ
ವೈಯುಕ್ತಿಕ ಆಸ್ತಿಗಳಾದ ವಾಸದ ಮ
ಗೃಹಪಯೋಗಿ ಉಪಕರಣಗಳು, ಬಳಕೆಂ
ವಸ್ತುಗಳು ಮತ್ತು ಸಂಗ್ರಾಹ್ಯ ಪರಿಕರಗಳನ
ಗಣನೆಗೆ ತೆಗೆದುಕೊಳ್ಳುವುದಿಲ್ಲ ಎಂಬುದನ
ಗಮನಿಸಬೇಕು. ಜರ್ಮನಿಯೊಂದರಲ್ಲ
10.15 ಲಕ್ಷ ಇಂತಹ ಅತೀ ಶ್ರೀಮಂತರಿದ್ದಾ
ಬ್ರಿಟನ್ನಿನಲ್ಲಿ 4.65 ಲಕ್ಷ, ಫ್ರಾನ್ಸ್‌ನಲ್ಲಿ 4.3
ಲಕ್ಷ, ಸ್ವಿಝರ್‌ಲ್ಯಾಂಡಿನಲ್ಲಿ 2.82 ಲಕ್ಷ ಮತ
ಇಟಲಿಯಲ್ಲಿ 1.72 ಲಕ್ಷ.

ಈ ಶ್ರೀಮಂತ ಕುಳಗಳ ಸಂಖ್ಯೆ ಮತ
ಆಸ್ತಿ ಹೆಚ್ಚು ಆದಂತೆಯೇ, ಯೂರೋಪಿ
ಉಳಿದೆಲ್ಲಾ ಜನ ವಿಭಾಗಗಳ ಕೌಟಂಬಿ
ಆಸ್ತಿಯಲ್ಲಿ ಶೇ 14 ರಷ್ಟು ಇಳಿತ ಕಂಡ
ಬಂದಿದೆ ಎಂದೂ ಈ ವರದಿ ಹೇಳುತ್ತದ
ಇದು ಸಹಜವೇ. ಏಕೆಂದರೆ ಕೋಟ್ಯಾಂತ
ಜನ "ತ್ಯಾಗ" ಮಾಡಿದರೆ ತಾನೇ
ಬಡಪಾಯಿ ಕೋಟ್ಯಾಧಿಪತಿಗಳ ಆ
"ವೃದ್ಧಿ"ಯಾಗುವುದು!

ಜನಶಕ್ತಿ
ಕನ್ನಡ ವಾರಪತ್ರಿಕೆ

ರಸ್ಪಾಡಕ್ಕೀಯ

"ಬಡವರು ಸತ್ತರೆ ಸುಡಲಾಕ ಸೌದಿಲ್ಲ
ಬಡವರಿಗೆ ಸಾವ ಕೊಡಬ್ಯಾಡೋ."

ಂಗಳೂರು ಜಯನಗರ ಬಳಿಯ ಸೋಮೇಶ್ವರ ನಗರದಲ್ಲಿ ನಿರ್ಮಾಣ ಹಂತದಲ್ಲಿದ್ದ ಾರ್ಟ್‌ಮೆಂಟ್ ಕಟ್ಟಡ ಕುಸಿದು ಸಾವನ್ನಪ್ಪಿದವರಲ್ಲಿ ಹೊರ ರಾಜ್ಯದ ಇಬ್ಬರು ಕಾರ್ಮಿಕರ ತ್ಯಕ್ರಿಯೆ ನಗರದಲ್ಲಿಯೇ ನಡೆಯಿತು. "ಶವಗಳನ್ನು ತವರೂರಿಗೆ ಕೊಂಡೊಯ್ಯಲು ಕಾಸಿನ ಸಮಸ್ಯೆ ಉಂಟಾಗಿದ್ದರಿಂದ ಇಲ್ಲಿಯೇ ಶವ ಸಂಸ್ಕಾರ ಮಾಡಿದ್ದೇವೆ" ಎಂದು ತರ ಸಂಬಂಧಿಕರು ಹೇಳಿದ್ದಾರೆ.

ಕಟ್ಟಡದ ಅವಶೇಷಗಳಡಿ ಸಿಲುಕಿ ಪ್ರಾಣಕಳೆದುಕೊಂಡ ಮೂವರ ಮೃತದೇಹಗಳನ್ನು ರತೆಗೆಯಲಾಗಿತ್ತು. ಬಿಹಾರ ಮೂಲದ ನೇಪಾಳ ಪಾಸ್ವಾನ್ (28), ಕೊಲ್ಕತ್ತಾ ಮೂಲದ ಂಜನ್ ಮೊಹಾಂತಿ (24) ಮತ್ತು ರಾಯಚೂರು ಜಿಲ್ಲೆಯ ನಾಗಮ್ಮ (45) ಎಂಬವರು ವನ್ನಪ್ಪಿದ್ದರು. ಮರಣೋತ್ತರ ಪರೀಕ್ಷೆ ನಂತರ ಶವಗಳನ್ನು ಕುಟುಂಬ ಸದಸ್ಯರಿಗೆ ಸ್ತಾಂತರಿಸಲಾಗಿತ್ತು. ಮೃತರ ಪೈಕಿ ನಾಗಮ್ಮ ಅವರ ಅಂತ್ಯಕ್ರಿಯೆ ಮಾನ್ವಿ ತಾಲೂಕಿನ ಂಬ್ಡಿಹೊಸೂರು ಗ್ರಾಮದಲ್ಲಿ ನಡೆಯಿತು. ಆದರೆ ಪಾಸ್ವಾನ್ ಮತ್ತು ಮೊಹಾಂತಿ ಅವರ ಗಳ ಅಂತ್ಯಕ್ರಿಯೆಯನ್ನು ಅವರ ಕುಟುಂಬದ ಸದಸ್ಯರು ಶಾಂತಿನಗರ ಸಮೀಪದ ಖಾಲಿ ಲ್ಲಿ ನಡೆಸಿದರು.

ನಿರಂಜನ್ ಮೊಹಾಂತಿ ಐದು ತಿಂಗಳ ಹಿಂದಷ್ಟೇ ಮದುವೆಯಾಗಿದ್ದ. ಪತ್ನಿ ಹಾಗೂ ಯಿಯೊಂದಿಗೆ ಊರಲ್ಲೇ ಇರುವಂತೆ ಹೇಳಿದರೂ ಕೇಳದೆ ತಂದೆಯ ಜೊತೆಯಲ್ಲಿ ಡಿಯಲು ಬೆಂಗಳೂರಿಗೆ ಬಂದಿದ್ದ. ಅಗಸ್ಟ್ 19 ರ ಬೆಳಿಗ್ಗೆ ಆತನ ತಂದೆ ಕಾಂತೆ ಹಾಂತಿ ಚಹ ಕುಡಿಯಲು ಕಟ್ಟಡದಿಂದ ಹೊರಬಂದಿದ್ದ. ವಾಪಸ್ ಬರುವ ವೇಳೆಗೆ ಡ ಕುಸಿದಿತ್ತು. ಶವವನ್ನು ಕೊಲ್ಕತ್ತಾಕ್ಕೆ ಕೊಂಡೊಯ್ಯಲು ಖಾಸಗಿ ಅಂಬುಲೆನ್ಸ್ ಲಿಕರು 80 ಸಾವಿರ ರೂ. ಕೇಳಿದರಂತೆ. ವಿಮಾನದಲ್ಲಿ ಕೊಂಡೊಯ್ಯಲು 20 ಸಾವಿರ . ಬೇಕಿತ್ತು. ಅಷ್ಟೊಂದು ಹಣವನ್ನು ಅವರು ಒಟ್ಟಾಗಿ ಎಂದೂ ನೋಡಿದವರೇ ಅಲ್ಲ. ್ಕ ತೋಚದೆ ನಗರದಲ್ಲೇ ಅಂತ್ಯಕ್ರಿಯೆ ನಡೆಸಿದರು.

ಮತ್ತೊಬ್ಬ ಕಾರ್ಮಿಕ ನೇಪಾಳ್ ಪಾಸ್ವಾನ್ ಸಹೋದರ ಅಜಯ್ ಪಾಸ್ವಾನ್ ಣ್ಣಿಸಿದ್ದು ಹೀಗೆ. "ಊರಿನಲ್ಲಿ ಬೆಳೆ ಕೈಕೊಟ್ಟಿತ್ತು. ಪೋಷಕರು ಅನಾರೋಗ್ಯದಿಂದ ಸಿಗೆ ಹಿಡಿದಿದ್ದರು. ಹೀಗಾಗಿ ಎಂಟು ಮಂದಿ ಸಂಬಂಧಿಕರ ಜೊತೆ ಕೂಲಿ ಸಕ್ಕೆಂದು ನಗರಕ್ಕೆ ಬಂದಿದ್ದೆವು. ಕಟ್ಟಡ ಕುಸಿದು ಅಣ್ಣ ಸಾವನಪ್ಪಿದನು. ನಾನೂ ಸೇರಿ ಳಿದವರು ಗಾಯಗೊಂಡಿದ್ದೆವು. ಇದೀಗ ಕಟ್ಟಡದ ಮೇಸ್ತ್ರಿ ಹಾಗೂ ಮಾಲೀಕರು ಕೂಡ ಪತ್ತೆಯಾಗಿದ್ದಾರೆ. ಊರಿಗೆ ವಾಪಸ್ ಹೋಗಲೂ ನಮ್ಮ ಬಳಿ ಹಣವಿಲ್ಲ. ಅಣ್ಣನ ಶವ ಂಡೊಯ್ಯಲು ಸಾಧ್ಯವಾಗದೇ ಸಹಕಾರ್ಮಿಕರ ನೆರವಿನಿಂದ ಇಲ್ಲಿಯೇ ಅಂತ್ಯಕ್ರಿಯೆ ಂಗಿಸಿದೆ."

ಎಂತಹ ವಿಪರ್ಯಾಸ! ಮಹಾನ್ ಪ್ರಜಾಪ್ರಭುತ್ವ ಎನ್ನಲಾದ ಈ ನಮ್ಮ ದೇಶದಲ್ಲಿ ತಿದಿನ ಅದೆಷ್ಟೋ ಜನ ಇದೇ ರೀತಿ ಸಾವನಪ್ಪುತ್ತಾರೆ ಮತ್ತು ಅನಾಥರೆಂಬಂತೆ ಅವರ ಯೆ ಜರಗುತ್ತಿರುತ್ತದೆ. ಬೆಂಗಳೂರು ಎಂಬ ಈ ಮಹಾನಗರದ ನಿರ್ಮಾಣಕ್ಕಾಗಿ, ರ ಅಭಿವೃದ್ಧಿಗಾಗಿ ಪ್ರಾಣ ಕಳೆದುಕೊಂಡವರು ಎಷ್ಟು ಜನರಾಗಿರಬಹುದು? ಅವರು ್ನಡಿಗರು, ಮಾತ್ರವಲ್ಲ. ದೇಶದ ಮೂಲೆ ಮೂಲೆಗಳಿಂದ ಬಂದ ನಮ್ಮ ದೇಶಬಾಂಧವರು. ಟ್ಟೆಪಾಡಿಗಾಗಿ ಬಂದವರು, ಉದ್ಯೋಗ ಹುಡುಕಿಕೊಂಡು ಬಂದವರು ಇಲ್ಲಿಯೇ ಣ್ಣಾಗುತ್ತಾರೆ!

ಒಂದು ನಗರದ ಅಭಿವೃದ್ಧಿಗಾಗಿ ಪ್ರಾಣ ತೆತ್ತವರಿಗೆ ನಾವು ಸಲ್ಲಿಸುವ ಗೌರವವೆಷ್ಟು? ಷ್ಟ ಮೃತಪಟ್ಟ ಕಾರ್ಮಿಕರ, ಕೂಲಿಕಾರರ ಶವಗಳನ್ನು ಅವರ ತವರೂರಿಗೆ ಂಡೊಯ್ದು ಅವರ ಸಂಬಂಧಿಕರಿಗೆ ಒಪ್ಪಿಸುವ ವ್ಯವಸ್ಥೆ ಸಹ ನಮ್ಮಲಿಲ್ಲ. ಬೆಂಗಳೂರಿನ ನತೆ ತುಂಬಾ ಸುಶಿಕ್ಷಿತ, ಎಂದು ಹೇಳಲಾಗುತ್ತದೆ. ಇದೇ ರೀತಿ ದಿಕ್ಕಿಲ್ಲದೆ ಸಾಯುವ ರ್ಮಿಕ, ಕೂಲಿಕಾರರ ಬಗ್ಗೆ ಬೆಂಗಳೂರಿನ ಜನತೆ ಕನಿಷ್ಠ ಶೋಕವನ್ನಾದರೂ ಕ್ತಪಡಿಸುತ್ತಾ? ನಗರದ ಮೆಟ್ರೋ ಕಾಮಗಾರಿ ಎಷ್ಟೊಂದು ಪರರಾಜ್ಯಗಳ ಕಾರ್ಮಿಕರನ್ನು ಲಿತೆಗೆದುಕೊಂಡಿಲ್ಲ? ಅವರ ಶವಸಂಸ್ಕಾರಕ್ಕೆ ಸರ್ಕಾರವಾಗಲಿ. ಬಿಬಿಎಂಪಿಯಾಗಲಿ ರ್ಥಿಕ ನೆರವು ನೀಡಿದೆಯಾ? ಗಾಯಗೊಂಡು ಆಸ್ಪತ್ರೆಗಳಲ್ಲಿ ದಾಖಲಾದಾಗ ಅವರ ಶ್ರೂಸೆಗೆ ವ್ಯವಸ್ಥೆ ಮಾಡಲಾಗಿದೆಯಾ? ಅವರಿಗೆ ಕಾನೂನು ಪ್ರಕಾರ ಸಿಗಬೇಕಾದ ರಿಹಾರವನ್ನು ವಿಳಂಬವಿಲ್ಲದೆ ತಲುಪಿಸಲಾಗಿದೆಯಾ? ಹೊಟ್ಟೆಪಾಡಿಗಾಗಿ ಕೂಲಿನಾಲಿ ರಸಿಬರುವ ಜನಗಳ ಜೀವನಕ್ಕೆ ಬೆಲೆಯೇ ಇಲ್ಲವೇ? ಇದೆಂತಹ ಸಮಾಜ! ಇಂತಹ ಬದಲಾಗಬೇಕಲ್ಲವೇ? ಈ ಸಮಾಜವನ್ನು ಒಂದು ಮಾನವೀಯ ಸಮಾಜವನ್ನಾಗಿ ರಿವರ್ತಿಸುವುದು ಅಗತ್ಯವಿದೆ. ಇಲ್ಲಿ ನಿರ್ಗತಿಕರಾಗಿ ಸಾಯುವಂತಹ, ಅನಾಥರಾಗಿ ಂತ್ಯಕ್ರಿಯೆಗೆ ಒಳಪಡುವಂತಹ ಪರಿಸ್ಥಿತಿ ಯಾರಿಗೂ ಬರಬಾರದು. ಅಲ್ಲವೆ?

ಉತ್ಸಾಹ ಸೃಷ್ಟಿಸದ ಉಪ ಚುನಾವಣೆ: ಸಂದರ್ಭಸಾಧಕತೆಯ ಉರವಣಿಗೆ


ಇಬ್ಬರು ಸಂಸದರು ವಿಧಾನಸಭಾ ಚುನಾವಣೆಯಲ್ಲಿ ಆಯ್ಕೆಯಾದದ್ದರಿಂದ ತೆರವಾಗಿದ್ದ ಮಂಡ್ಯ ಮತ್ತು ಬೆಂಗಳೂರು ಗ್ರಾಮಾಂತರ ಪಾರ್ಲಿಮೆಂಟ್‌ನ ಎರಡು ಸ್ಥಾನಗಳಿಗೆ ನಡೆದ ಮರು ಚುನಾವಣೆಯಲ್ಲಿ ಮತದಾನ(ಆ.21) ಮುಗಿದಿದೆ. ನಾಳೆ (24ರಂದು) ಎಣಿಕೆ. ಫಲಿತಾಂಶದ ಬಗ್ಗೆ ಸ್ಪರ್ದಿಸಿರುವವರು ತೋರುವಷ್ಟು ಆಸಕ್ತಿಯನ್ನು ಮತದಾರರು ತೋರುತ್ತಿಲ್ಲ. ಆದರೆ ಕೋಟ್ಯಾಂತರ ರೂ.ಬೆಟ್ಟಿಂಗ್–ಬಾಜಿ ಕಟ್ಟಿ ಕಾಸು ಗಿಟ್ಟಿಸಿಕೊಳ್ಳುವವರಿಗೇನೂ ಕೊರತೆ ಇಲ್ಲ.

ಅನಾದರ

ಮತದಾನದ ಪ್ರಮಾಣ ಸರಾಸರಿ ಶೇ.56 ರನ್ನು ಮೀರಿಲ್ಲ. ಮಂಡ್ಯ ಶೇ.58.6ಆಗಿದ್ದರೆ ಬೆಂಗಳೂರು ಗ್ರಾಮಾಂತರ ಶೇ.51. (ಮತದಾನದ ದಿನ ಜಿಲ್ಲಾಧಿಕಾರಿಯವರು ಹೇಳಿದ್ದಕ್ಕಿಂತ ಈಗ ಕಡಿಮೆ ಇದೆ ಅಂತಿದ್ದಾರೆ) ಕಳೆದ ಚುನಾವಣೆಯಲ್ಲಿ ಈ ಕ್ಷೇತ್ರದಲ್ಲಿ ಆದ ಮತದಾನಕ್ಕಿಂತ ಕಡಿಮೆ. ಶೇ.44–45ರಷ್ಟು ಜನರಿಂದ ಮತದಾನದ ನಿರಾಕರಣೆ ಗಂಭೀರ ಸಂಗತಿ. ಈ ಬಾರಿ ಮತದಾರರಲ್ಲಿ ನಿರುತ್ಸಾಹ ಇನ್ನಷ್ಟು ಹೆಚ್ಚಿಗೆ ಕಂಡಿರುವುದು ನಿಚ್ಚಳ. ಈಗ ಸ್ಪರ್ಧಿಸಿರುವ ಕಾಂಗ್ರೆಸ್, ಜೆಡಿ ಎಸ್ ಅಲ್ಲದೇ ಬಿಜೆಪಿಯಂತಹ ಇತರೆ ಪ್ರಮುಖ ಪಕ್ಷಗಳು ಮತದಾನದ ಕುಸಿತದ ಬಗ್ಗೆ ತಲೆ ಕೆಡಿಸಿಕೊಳ್ಳುವುದಕ್ಕೆ ಹೋಗಿಲ್ಲ. ಬದಲಾಗಿ ಕಡಿಮೆ ಮತದಾನದಿಂದ ಯಾರಿಗೆ, ಎಲ್ಲಿ ಲಾಭವಾಗಬಹುದು ಎಂಬ ಲೆಕ್ಕಾಚಾರದಲ್ಲೇ ಮಗ್ನವಾಗಿವೆ! ಜನತೆ ದೊಡ್ಡ ರೀತಿಯಲ್ಲಿ ಈ ಪ್ರಕ್ರಿಯೆಯಲ್ಲಿ ತೊಡಗುವುದರ ಮೂಲಕ ಪ್ರಜಾಪ್ರಭುತ್ವವನ್ನು ಬಲಗೊಳಿಸುವುದಕ್ಕಿಂತ ತಾವು ಗೆದ್ದರೆ ಅದೇ ಪ್ರಜಾಪ್ರಭುತ್ವವನ್ನು ಬಲಗೊಳಿಸಿದಂತೆ ಎಂದೇ ಭಾವಿಸಿವೆ. ಇಲ್ಲವಾದರೆ ಮತದಾರರು ಹೀಗೆ ನಿರುತ್ಸಾಹಗೊಳ್ಳುವ ಬಗ್ಗೆ ಗಂಭೀರ ಚಿಂತನೆ ನಡೆದು ತಮ್ಮ ಬಗ್ಗೆ, ಚುನಾವಣೆ ಬಗೆಗಿನ ಅನಾದರ ಕುರಿತು ಏನಾದರೂ ಕ್ರಮ ವಹಿಸಬೇಕಿತ್ತು , ತಿದ್ದಿಕೊಳ್ಳಬೇಕಿತ್ತು.

ಸಂದರ್ಭ ಸಾಧಕತೆ – ಮತ್ತೇ

ಈ ಬಾರಿ ಜನತೆ ನಿರುತ್ಸಾಹಗೊಂಡಿರಲು ಹಲವು ಕಾರಣಗಳಿವೆ. ಈ ಪಕ್ಷಗಳು ಜನತೆಗೆ ವಿಶ್ವಾಸ ಹುಟ್ಟಿಸುವಲ್ಲಿ ವಿಫಲವಾಗಿವೆ. ವಿಶೇಷವಾಗಿ ಇದೀಗ ರಾಜ್ಯದ ವಿಧಾನಸಭೆಗೆ ಚುನಾವಣೆ ನಡೆದು ಮೂರು ತಿಂಗಳಾಗಿದೆ. ಆ ಚುನಾವಣೆಯಲ್ಲಿ ಕಾಂಗ್ರೆಸ್, ಬಿಜೆಪಿ, ಜೆಡಿ ಎಸ್, ಕೆಜೆಪಿ ಎಂದು ಪರಸ್ಪರ ಹಣಾಹಣಿ ನಡೆಸಿಯೂ ಆಗಿದೆ. ಆದರೆ ಈಗ ದಿಢೀರನೇ ಕಾಂಗ್ರೆಸ್ ಸೋಲಿಸುವ ಹೆಸರಿನಲ್ಲಿ ಅಂದು ಶತೃಗಳಂತೆ ಕಾದಾಡಿದ್ದ ಬಿಜೆಪಿ, ಜೆಡಿ ಎಸ್, ಕೆಜೆಪಿ ಪಕ್ಷಗಳ ನಡುವೆ ಮೈತ್ರಿ ಏರ್ಪಟ್ಟಿದ್ದಕ್ಕೆ ರಾಜಕೀಯವಾಗಿ ಏನರ್ಥವಿದೆ? ಎಂಬ ಅನುಮಾನ ಜನತೆಯನ್ನು ಕಾಡದೇ ಇಲ್ಲ. ಬಿಜೆಪಿ, ಕಾಂಗ್ರೆಸ್‌ನ್ನು ಸೋಲಿಸಲೆಂದೇ ಜೆಡಿ ಎಸ್‌ಗೆ ಓಟು ನೀಡಿದ ಜನ ಈ ಸಂದರ್ಭ ಸಾಧಕ ರಾಜಕಾರಣದಿಂದ ಬೇಸರಗೊಂಡಿರಲೂ ಸಾಧ್ಯ.



ಎಸ್.ವೈ.ಗುರುಶಾಂತ್

ಮೇಲಾಗಿ ಈ ಎಲ್ಲಾ ಪಕ್ಷಗಳೂ ಎಲ್ಲೂ ಬೆಲೆಏರಿಕೆ, ರೇಷನ್, ಕೃಷಿ, ಕೂಲಿ, ಉದ್ಯೋಗ, ವಸತಿ, ವಿದ್ಯಾಭ್ಯಾಸದಂತಹ ಜನತೆಯ ಬದುಕಿನ ಜ್ವಲಂತ ಪ್ರಶ್ನೆಗಳನ್ನು ಚುನಾವಣಾ ವಿಷಯಗಳಾಗಿ ಮಾಡಲಿಲ್ಲ, ಪ್ರಚಾರದಲ್ಲಿ ಒಂದು ಬಾರಿಯೂ ಪ್ರಸ್ತಾಪಿಸಲಿಲ್ಲ. ಬದಲಾಗಿ ವ್ಯಕ್ತಿಗತ ಪ್ರಶ್ನೆಗಳಿಗೆ, ವೈಯುಕ್ತಿಕ ಹೀನ ತೇಜೋವಧೆಗೆ ಇಡೀ ಪ್ರಚಾರದ ಸಮಯವನ್ನೆಲ್ಲಾ ಮೀಸಲಿಟ್ಟರು. ಮಾಜಿ ಪ್ರಧಾನಿಗಳು, ಮಾಜಿ ಮುಖ್ಯಮಂತ್ರಿಗಳು, ನಾಯಕರು ಎಲ್ಲಾರದ್ದೂ ಇದೇ ಕೆಸರೆರಚಾಟದ ಹಾಡು! ಈ ಮೂಲಕ ತಾವು ಎಷ್ಟು ರಾಜಕೀಯ ದಿವಾಳಿತನದ ಸ್ಥಿತಿಯಲ್ಲಿದ್ದೇವೆ, ಜನತೆಯ ಹಿತಗಳು ಕಾಲ ಕಸವೆಂದು, ಅದನ್ನು ಯಾವ ಹಂತಕ್ಕೆ ಕೊಂಡೊಯ್ಯಬಲ್ಲೆವು ಎಂಬುದನ್ನು ತೋರಿಸಿ ಬಿಟ್ಟರು. ಇವರ ವ್ಯಕ್ತಿಗತ ಪ್ರಶ್ನೆಗಳಿಗೆ , ಪ್ರತಷ್ಠೆಗಳಿಗೆ ಜನರೇಕೆ ತಲೆಕೆಡಿಸಿಕೊಳ್ಳಬೇಕು? ಮತ ಹಾಕಬೇಕು. ಹೀಗೆ ಚುನಾವಣೆಯನ್ನು ತಮ್ಮ ಸಲುವಾಗಿ ನಡೆಯುವ, ತಾವು ನಡೆಸುವ ಹೋರಾಟ ಎನ್ನುವುದು ಬರದೇ ಜನರಲ್ಲಿ ಉತ್ಸಾಹ ಬರುವುದಾದರೂ ಹೇಗೆ ಸಾಧ್ಯ?

ಹಾಗೇ 'ಇನ್ನೇನು ಕೇವಲ ಆರು ತಿಂಗಳಿಗಾಗಿ ಆರಿಸಬೇಕಲ್ಲಾ , ಹೇಗಿದ್ದರೂ ಮತ್ತೇ ಚುನಾವಣೆ ಬರಲಿದೆ'ಯೆಂಬುದೂ ಜನರಲ್ಲಿ ಅಷ್ಟಕ್ಕಷ್ಟೇ ಪ್ರತಿಕ್ರಿಯೆ ನೀಡಲು ಕಾರಣವಾಗಿದೆ.

ಇನ್ನೇನು ಫಲಿತಾಂಶ ಬರಲಿದೆ. ಇಲ್ಲಿ ಯಾರು ಗೆದ್ದರೂ ಅಪಾಯದ ಸಂದೇಶ ಹೊರಬೀಳುವುದು ಖಚಿತ. ಕಾಂಗ್ರೆಸ್ ಗೆದ್ದರೆ ತಮ್ಮ (ಜನವಿರೋಧಿ)ನೀತಿ, (ದುರಾ)ಆಡಳಿತಕ್ಕೆ ಜನ ನೀಡಿದ ಮನ್ನಣೆ ಎಂದೇ ವ್ಯಾಖ್ಯಾನಿಸುತ್ತದೆ. ಜೆಡಿ–ಎಸ್ ಗೆದ್ದರೆ ಈಗಿನ ಕೋಮುವಾದೀ ಬಿಜೆಪಿ, ಭ್ರಷ್ಟರ ಜೊತೆಗಿನ ಹೊಂದಾಣಿಕೆಯ ಸಂದರ್ಭಸಾಧಕ ಸೂತ್ರವೇ ದೆಹಲಿ ಗದ್ದುಗೆ ತಲುಪಿಸಲು ಸೂಕ್ತವೆಂಬ ಅಪಾಯದ ತಂತ್ರ ಬಲಗೊಳ್ಳಲು ಕಾರಣವೂ ಆಗಬಹುದಾದ ಸಾಧ್ಯತೆಗಳನ್ನು ಹುಟ್ಟಿಸುತ್ತದೆ. ಇದು ಸಂದಿಗ್ಧ ಸನ್ನಿವೇಶ. ಇಂದಿನ ಸನ್ನಿವೇಶದಲ್ಲಿ ಇಷ್ಟನ್ನಷ್ಟೇ ಅಂದಾಜಿಸಬಹುದು. ಮುಂದಿನ ಬೆಳವಣಿಗೆಗಳು ಹೇಗಿರುತ್ತವೆ? ಕಾದು ನೋಡಬೇಕು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಜೇವರ್ಗಿ

'ಹೊಸದಾಗಿ ಅರ್ಜಿ ಹಾಕಿದ ಬಡವರಿಗೂ ಬಿಪಿಎಲ್ ಕಾರ್ಡ್ ಕೊಡಿ' 'ಧರಣ'ದಲ್ಲಿ ಮೊಳಗಿದ ಬೇಡಿಕೆ

ಹೊಸ ಬಿಪಿಎಲ್ ರೇಶನ್ ಕಾರ್ಡಿಗಾಗಿ ಅರ್ಜಿ ಹಾಕುತ್ತಿರುವ ಜನರಿಗೆ ರೇಶನ್ ಕಾರ್ಡ್ ಮಂಜೂರಿ ಮಾಡಬೇಕೆಂದು ಮತ್ತು ರೇಶನ್ ಕಾರ್ಡ್ ಸಾರ್ವತ್ರಿಕಗೊಳಿಸಬೇಕು ಹಾಗೂ ರೇಶನ್ ಕಾರ್ಡ್ ಮೂಲಕ 35 ಕೆ.ಜಿ ಅಕ್ಕಿ, 2 ಕೆ.ಜಿ ಸಕ್ಕರೆ, ಬೇಳೆ, ಜೋಳ ಸೇರಿದಂತೆ ಒಟ್ಟು 14 ಆಹಾರ ಧಾನ್ಯ ಮತ್ತು ಪದಾರ್ಥಗಳನ್ನು ಕೊಡಬೇಕೆಂದು ಗುಲ್ಬರ್ಗಾ ಜಿಲ್ಲೆ ಜೇವರ್ಗಿ ತಾಲ್ಲೂಕಿನ ತಹಸಿಲ್ದಾರ ಕಛೇರಿ ಮುಂದೆ ಆಗಸ್ಟ್ 02, 2013 ರಂದು ಕರ್ನಾಟಕ ಪ್ರಾಂತ ರೈತ ಸಂಘದ ಜೇವರ್ಗಿ ತಾಲ್ಲೂಕು ಸಮಿತಿ ನೇತೃತ್ವದಲ್ಲಿ 'ಧರಣಿ' ಸತ್ಯಾಗ್ರಹ ಮಾಡಿ ಸರಕಾರಕ್ಕೆ ಒತ್ತಾಯಿಸಲಾಯಿತು.





'ಕೂಲಿ ಕೊಡಿ ಕೂಲಿ'

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆಲಸ ಮಾಡಿದ ಕೃಷಿ ಕೂಲಿ ಕಾರ್ಮಿಕರಿಗೆ ಸಂಬಳ ಕೊಡಬೇಕೆಂದು ಜೇವರ್ಗಿ ತಾಲೂಕಾ ಪಂಚಾಯತ್ ಕಛೇರಿ ಮುಂದೆ 02–07–2013 ರಿಂದ 10–07–2013 ವರೆಗೆ 9ದಿನದ ವರೆಗೆ ಹಗಲು ರಾತ್ರಿ ಧರಣಿ ಸತ್ಯಾಗ್ರಹವನ್ನು ಕೂಡ ನಡೆಸಲಾಯಿತು. ಹರನೂರ ಗ್ರಾಮ ಪಂಚಾಯತ್ ವ್ಯಾಪ್ತಿಯ ಹರನೂರ ಗ್ರಾಮದ 786 ಜನರು ಒಂದು ಹಂತದಲ್ಲಿ ಮತ್ತೆ 465 ಜನರು, ಕೊಳಕೂರ ಗ್ರಾಮ ಪಂಚಾಯತ್‌ನ ಕೊಳಕೂರ ಗ್ರಾಮದ 105 ಜನರು 2013

ಎಪ್ರಿಲ್ ತಿಂಗಳಲ್ಲಿ ಕೆಲಸ ಮಾ
ಆದರೆ ಅವರಿಗೆ ಇನ್ನೂ ಸಹ ಅವರ
ಸಿಕ್ಕಿಲ್ಲ. ಸರ್ಕಾರದ ಈ ವಿಳಂಬ ಧ
ಖಂಡಿಸಿ ಸು. 1,200 ಜನರು ಪ್ರ
ಬೀದಿಗಳ ಮೂಲಕ ರ್‍ಯಾಲಿ ನಡೆಸಿ ತಾ
ಪಂಚಾಯತ್ ಕಛೇರಿಗೆ ಬಂದು ಆ
ಪ್ರತಿಭಟನೆ ನಡೆಸಿದರು.

ಈ ಎರಡೂ ಪ್ರತಿಭಟನೆಗಳಲ್ಲಿ
ರೈತ ಸಂಘದ ತಾಲ್ಲೂಕು ಅಧ್ಯಕ್ಷ ಸು
ಹೊಸಮನಿ, ಕಾರ್ಯದರ್ಶಿ ಸಿದ್ದ
ಹರವಾಳ್ ಮುಂತಾದವರು
ವಹಿಸಿದ್ದರು.

ದಲಿತರಿಗೆ ಸ್ಮಶಾನ ಭೂಮಿ ಮಂಜೂರಾತಿಗೆ ಒತ್ತಾಯಿಸಿ ಗಂಗಾವತಿಯಲ್ಲಿ ಪ್ರತಿಭಟನೆ

ಗಂಗಾವತಿ ತಾಲೂಕಿನ ಹೊಸ್ಕೇರಾ ಡಗ್ಗಿ ಗ್ರಾಮದಲ್ಲಿ ದಲಿತರ ಸ್ಮಶಾನ ಭೂಮಿ ಒತ್ತುವರಿಯಾಗಿದ್ದು ಅದನ್ನು ಪುನಃ ಸರ್ವೆಮಾಡಿ, ಬೇಲಿಹಾಕಿಸಿ ಕೊಡಬೇಕು, ಸ್ಮಶಾನಕ್ಕೆ ಹೋಗಲು ರಸ್ತೆಯನ್ನು ನಿರ್ಮಿಸಬೇಕು, ಅಂಜೂರಿ ಕ್ಯಾಂಪ್ ದಲಿತರಿಗೆ ಸ್ಮಶಾನ ಭೂಮಿಯನ್ನು ಮಂಜೂರು ಮಾಡಬೇಕು, ಭಟ್ರ ಹಂಚಿನಾಳ ಗ್ರಾಮದಲ್ಲಿ ದೇವದಾಸಿಯರಿಗಾಗಿ ಸರ್ಕಾರದಿಂದ ಮಂಜೂರಾದ ಭೂಮಿ ಇತರರು ಕಬಳಿಸಿದ್ದು ಅದನ್ನು ಸರ್ಕಾರ ವಶಕ್ಕೆ ತೆಗೆದುಕೊಂಡು ದೇವದಾಸಿಯರಿಗೆ ನೀಡಬೇಕು, ದೌರ್ಜನ್ಯಕ್ಕೊಳಗಾದ ಮರಕುಂಬಿ ದಲಿತ ಕುಟುಂಬಗಳಿಗೆ ಮನೆ ನಿವೇಶನ ಮತ್ತು ಭೂಮಿಯನ್ನು ಕೊಡಬೇಕು, ದಲಿತರಿಗೆ ದೇವಸ್ಥಾನಗಳಲ್ಲಿ ಪ್ರವೇಶ ನೀಡಬೇಕು, ಕ್ಷೌರದ ಅಂಗಡಿಗಳಲ್ಲಿ ಮತ್ತು ಹೋಟೇಲ್‌ಗಳಲ್ಲಿ ದಲಿತರಿಗೆ ತಾರತಮ್ಯ ವೆಸಗುವುದನ್ನು ನಿಲ್ಲಿಸಬೇಕು, ಹೊಸ ಜೂರಟಗಿ ಗ್ರಾಮದಲ್ಲಿ ಪಡಿತರ ವಿತರಣೆಯನ್ನು ಸಮರ್ಪಕವಾಗಿ ಮಾಡಬೇಕು




ಎಂಬಿತ್ಯಾದಿ ಬೇಡಿಕೆಗಳನ್ನು ಮುಂದಿಟ್ಟು ಅಗಸ್ಟ್ 14 ರಂದು (ಸ್ವಾತಂತ್ರ್ಯೋತ್ಸವದ ಹಿಂದಿನ ದಿನ) ನಗರದ ಮಿನಿ ವಿಧಾನ ಸೌಧದ ಮುಂದೆ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ನಗರದ ಕೇಂದ್ರ ಬಸ್ ನಿಲ್ದಾಣದ ಮುಂದಿರುವ ಶ್ರೀ ಕೃಷ್ಣ ದೇವರಾಯ ವೃತ್ತ ದಿಂದ ಹೊರಟ ಕೂಲಿಕಾರರ ಮೆರವಣಿಗೆಯು ಬಸವೇಶ್ವರ ವೃತ್ತದ ಮೂಲಕ ಮಿನಿ ವಿಧಾನಸೌಧಕ್ಕೆ ತೆರಳಿ ಪ್ರತಿಭಟನಾ ಧರಣಿಯನ್ನು ನಡೆಸಲಾಯಿತು. ಧರಣಿನಿರತರನ್ನು ಉದ್ದೇಶಿಸಿ ಮಾತನಾಡಿದ ಕರ್ನಾಟ ಪ್ರಾಂತ ಕೃಷಿ ಕೂಲಿಕಾರರ ಸಂಘದ ತಾಲೂಕ ಅಧ್ಯಕ್ಷರಾದ ಎಂ. ಬಸವರಾಜು ಅವರು ಮಾತನಾಡಿ, ದೇಶಕ್ಕೆ ಸ್ವಾತಂತ್ರ್ಯ ದೊರೆತು 66 ವರ್ಷಗಳಾದರೂ ದಲಿತರಿಗೆ ಇನ್ನೂ ಸ್ವಾತಂತ್ರ್ಯ ಸಿಕ್ಕಿಲ್ಲ ಎಂದರು. ದಲಿತರಿಗೆ ದೇವಸ್ಥಾನ ಪ್ರವೇಶಿಸುವ ಸ್ವಾತಂತ್ರ್ಯವಿಲ್ಲ. ಕ್ಷೌರ ಮಾಡಿಸಿಕೊಳ್ಳಲು ಹಳ್ಳಿಗಳಿಂದ ದೂರದ ಪಟ್ಟಣಗಳಿಗೆ ಹೋಗಬೇಕಾಗುತ್ತದೆ. ದಲಿತರಿಗೆ ಮಂಜೂರಾದ ಭೂಮಿಯನ್ನು ಸವರ್ಣೀಯರು ಒತ್ತುವರಿ ಮಾಡಿಕೊಳ್ಳುತ್ತಾರೆ.

ದಲಿತರ ಮೇಲೆ ಮೇಲ್ಜಾತಿ ಶ್ರೀಪ
ದೌರ್ಜನ್ಯ ನಡೆಯುತ್ತಲೇ ಇದೆ. ಬಹಿಷ್ಕಾ
ಮುಂದುವರೆದಿವೆ. ಪೊಲೀಸರು
ದೌರ್ಜನ್ಯವೆಸಗುವವರನ್ನೇ ಬೆಂಬಲಿಸ
ದಲಿತರಿಗಾಗಿ, ಅವರ ಅಭಿವೃ
ಮಾತ್ರ ಖರ್ಚುಮಾಡಬೇಕಾದ
ಘಟಕ ಯೋಜನೆ'ಯ ಹಣವನ್ನು
ಉದ್ದೇಶಕ್ಕಾಗಿ ಖರ್ಚುಮಾಡುತ್ತಾರೆ
ಟೀಕಿಸಿದರು.

ಅನಂತರ ಮನವಿಯೊಂದನ್ನು ತಾ
ತಹಶಿಲ್ದಾರರಾದ ಎಂ. ಗಂಗಣ್ಣ ಕ
ಅವರಿಗೆ ಸಲ್ಲಿಸಲಾಯಿತು. ಕೃಷಿ ಕೂಲಿ
ಸಂಘದ ಮುಖಂಡರಾದ ಹುಸ
ಲಿಂಗಪ್ಪ ಹಣವಾಳ, ರಾಮಣ್ಣ, ಸೋ
ವಡ್ಡರಹಟ್ಟಿ, ಎಲ್. ತಿಮ್ಮಣ್ಣ, ಅಮೀ
ಯಲ್ಲಮ್ಮ, ಮರಿನಾಗಪ್ಪ, ಕಂಠೆಪ್ಪ ಹೊ
ಖಾಜಾಸಾಬ್, ಈಶಪ್ಪ ಚಿಕ್ಕಡಂಕ
ಮಂಜುನಾಥ ಡಗ್ಗಿ, ನಾಗಮ್ಮ, ಯ
ಸೋಮನಾಥ ಮೊದಲಾದವರು ಹೋರ
ನೇತೃತ್ವವಹಿಸಿದ್ದರು. ವಡ್ಡರಹಟ್ಟಿ, ಮರಕ
ಕೆಸರಹಟ್ಟಿ, ವಿಜಯನಗರ ಕಾಲ
ಹೊಸಕೇರಾ ಡಗ್ಗಿ, ಅಂಜೂರಿ ಕ್ಯಾ
ಭಟ್ರಹಂಚಿನಾಳ, ಹೊಸ ಜೂ
ಮರಕುಂಬಿ ಸೇರಿದಂತೆ ವಿವಿಧ ಗ್ರಾ
ಕೃಷಿ ಕೂಲಿಕಾರರು ಹೋರ
ಭಾಗವಹಿಸಿದ್ದರು.

ವರದಿ : ಹುಸೆ



"ಕ್ರಾಂತಿಕಾರಿ ಚಳುವಳಿಗೆ ಮುಡಿಪಾಗಿದ್ದ ಜೀವನ"

ಕಾ. ಎಸ್. ಸೂರ್ಯನಾರಾಯಣರಾವ್ ಅವರ 89ನೇ ಜನ್ಮದಿನ (ಜನನ ಅಗಸ್ಟ್ 24, 1924, ನಿಧನ ಜುಲೈ 1, 2002)ದ ಸಂದರ್ಭದಲ್ಲಿ ಕಾ. ಸೂರಿಯವರ ಜತೆ 38 ವರ್ಷಗಳ ಕಾಲ ಕಮ್ಯೂನಿಸ್ಟ್ ಚಳುವಳಿಯಲ್ಲಿ ಒಡನಾಟ ಹೊಂದಿದ್ದ ಹಿರಿಯ ಮುಖಂಡರಾದ ಕೆ. ಆರ್. ಶ್ರೀಯಾನ್ ಅವರು 2002 ರಲ್ಲಿ ಬರೆದ ಈ ಲೇಖನವನ್ನು ಮರು ಮುದ್ರಿಸಲಾಗಿದೆ.

– ಕೆ. ಆರ್. ಶ್ರೀಯಾನ್

ಮ್ರೇಡ್ ಸೂರಿಯವರ ವ್ಯಕ್ತಿತ್ವವನ್ನು ಳ ಹತ್ತಿರದಿಂದಲೇ ನಾನು ಕಂಡಿದ್ದೇನೆ. ಮಾರು 38 ವರ್ಷಗಳ ಹಿಂದಿನ ಘಟನೆ. 4ರಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷದ ಷ್ಕರಣವಾದೀ ಮುಖಂಡತ್ವದಿಂದ ೕಕವಾಗಿ ಭಾರತ ಕಮ್ಯೂನಿಸ್ಟ್ (ಮಾರ್ಕ್ಸ್‌ವಾದಿ)ಯ ಹೆಸರಿನಲ್ಲಿ ನಡೆದ ನೇ ಅಧೀವೇಶನದ ಮುಂಚಿತವಾಗಿ ರ್ಣಟಕ ರಾಜ್ಯ ಸಮ್ಮೇಳನವನ್ನು ಂಗಳೂರಿನಲ್ಲಿ ನಡೆಸಲಾಯಿತು. ಆ ಮ್ಮೇಳನದ ಕೊನೆಯ ಕಾರ್ಯಕ್ರಮವಾಗಿ ರಂಗ ಸಭೆ ನೆಹರೂ ಮೈದಾನದಲ್ಲಿ ಸ್ಥೆ ಮಾಡಲಾಗಿತ್ತು. ಈ ಸಭೆಯ ಮುಖ್ಯ ಷಣಗಾರರಾಗಿ ಬರಬೇಕಾಗಿದ್ದ ಕಾಂ. ಂ.ಎಸ್. ನಂಬೂದಿರಿಪಾದ್‌ರವರು ಮಿಸುವುದು ಸ್ವಲ್ಪ ತಡವಾಗಿತ್ತು. ಧ್ಯಕ್ಷತೆಯನ್ನು ವಹಿಸಿದ್ದ ಕಾಂ.ಎನ್. ಉಪಾಧ್ಯಾಯರು ನೆರೆದ ಭಾರೀ ಯಲ್ಲಿ ಹೇಳಿದರು – "ಕಾಂ. ಇ.ಎಂ. . ನಂಬೂದಿರಿಪಾದ್‌ರವರು ಸ್ವಲ್ಪ ತ್ತಿನಲ್ಲಿ ಇಲ್ಲಿಗೆ ಬಂದು ತಲುಪುತ್ತಾರೆ. ಕ್ಕಿಂತ ಮೊದಲು ಈಗ ಕಾಂ.ಎಸ್. ರ್ಯನಾರಾಯಣರಾವ್‌ರವರು ಭಾಷಣ ಡಲಿರುವರು" ಎಂದು ಹೇಳಿದರು. ಸೂರ್ಯನಾರಾಯಣರಾವ್ ಎದ್ದು ದಿಕೆಗೆ ಬಂದು ನಿಲ್ಲುತ್ತಾರೆ. ಆಕರ್ಷಕ ವು. ಅವರು ತನ್ನ ಶಕ್ತಿವತ್ತಾದ ಗಂಭೀರ ದಲ್ಲಿ ಭಾಷಣ ಆರಂಭಿಸಿದಾಗ ಇಡೀ ಸಭೆ ತಾಡನದಿಂದ ಅವರನ್ನು ಸ್ವಾಗತಿಸಿತು. ರ ಮೈ ನವಿರೇಳಿಸುವ ಕ್ರಾಂತಿಕಾರಿ ರ್ತಿಯಿಂದ ತುಂಬಿದ್ದ ಭಾಷಣ ಸೇರಿದ್ದ ೕ ಜನಸಮುದಾಯವನ್ನು ಆಕರ್ಷಿಸಿತು. ಭಾಷಣದ ಮಧ್ಯೆ ಸ್ಫೂರ್ತಿಗೊಂಡ ಸ್ತೋಮದಿಂದ ಕರತಾಡನಗಳು ಆಗಸ ಧಿಸುವಂತಿತ್ತು. ಅವರ ಅಂದಿನ ಭಾಷಣ ಮಂಗಳೂರಿನ ಕಾರ್ಮಿಕ ವರ್ಗದ ಮಧ್ಯೆ ಅಚ್ಚಳಿಯದೇ ಇಂದಿಗೂ ಉಳಿದಿದೆ.

ಅಂದಿನಿಂದ ಮಂಗಳೂರಿನಲ್ಲಿ ನಡೆದ ಯಾವುದೇ ಹೋರಾಟಗಳು, ಸಮ್ಮೇಳನಗಳು, ರ್‍ಯಾಲಿಗಳು ಕಾರ್ಯಕ್ರಮಗಳಿಗೆ ಕಾಂ. ಸೂರ್ಯನಾರಾಯಣ ರಾವ್ ಬರಬೇಕೆಂಬ ಬೇಡಿಕೆ ಬಲವಾಗಿತ್ತು ಮತ್ತು ಅವರ ಭಾಷಣ ಕೇಳಬೇಕೆಂಬ ಸ್ಫೂರ್ತಿ ಅವರಲ್ಲಿ ಮೂಡಿತ್ತು. ಅವರು ಬಂದರೇನೇ ಕಾರ್ಯಕ್ರಮ ಪೂರ್ಣಗೊಳ್ಳುವುದು ಎಂಬ ಭಾವನೆ. 1964ರಿಂದ ಮಂಗಳೂರಿನಲ್ಲಿ ನಡೆಯುವ ದೊಡ್ಡ ದೊಡ್ಡ ಕಾರ್ಯಕ್ರಮಗಳಿಗೆ ಅವರು ಹಾಜರಾಗುತ್ತಿದ್ದರು. ಅಂದು ಬಲವಾಗಿದ್ದ ಹಂಚಿನ ಕಾರ್ಮಿಕರ, ಗೋಡಂಬಿ ಕಾರ್ಮಿಕರ ಹಾಗೂ ಬೀಡಿ ಕಾರ್ಮಿಕರ ಎದ್ದು ಬರುತ್ತಿದ್ದ ಚಳುವಳಿಗಳಲ್ಲಿ ಕಾ. ಸೂರಿ ಬಂದು ಪಾಲ್ಗೊಳ್ಳುತ್ತಿದ್ದರು. ಸೂರಿಯವರಿಗೂ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಮಿಕ ಚಳುವಳಿ ಬಗ್ಗೆ, ಪಕ್ಷದ ಚಳುವಳಿ ಬಗ್ಗೆ ಅಪಾರ ಗೌರವವಿತ್ತು. ಯಾಕೆಂದರೆ ಪರಿಷ್ಕರಣವಾದಿ ಮುಖಂಡತ್ವವನ್ನು ಧಿಕ್ಕರಿಸಿ ಸಿಪಿಐ(ಎಂ) ಪಕ್ಷಕ್ಕೆ ಬಲವಾಗಿ ಬೆಂಬಲಿಸಿ ನಿಂತ ದಕ್ಷಿಣ ಕನ್ನಡ ಜಿಲ್ಲೆಗೆ ಅವರು ವಿಶೇಷ ಆಸಕ್ತಿ ವಹಿಸುತ್ತಿದ್ದರು. ಇದರಿಂದಾಗಿ ಯಾವುದೇ ಸಂದರ್ಭದಲ್ಲಾಗಲೀ ಬೇಕಾದರೆ ಅದು ಒಂದು ಪ್ರಾದೇಶಿಕ ಮಟ್ಟದ ಕಾರ್ಯಕ್ರಮವೇ ಆಗಿರಲಿ ಅವರನ್ನು ಕೇಳಿಕೊಂಡರೆ ಅವರು ಬರುತ್ತಿದ್ದರು. ಇಂತಹ ಅನೇಕ ಸಭೆಗಳಲ್ಲಿ ನಾನು ಸೂರಿಯವರೊಂದಿಗೆ ಭಾಗವಹಿಸುತ್ತಿದ್ದೆ. ಸದಾ ಅವರಲ್ಲಿ ಹೋರಾಟದ ಮನೋಭಾವ ಇತ್ತು. ಎಂತಹ ಕಠಿಣ ಸಮಸ್ಯೆ ಬಂದರೂ ಅದಕ್ಕೆ ಪರಿಹಾರ ಕಾಣುವ ದೃಢತೆ ಅವರಲ್ಲಿತ್ತು. ಅವರಿಂದ ಅವರಿಂದ ಎಂದು ನಿರಾಶೆಯ ಉತ್ತರ ಬರುತ್ತಿರಲಿಲ್ಲ. ಸ್ಫೂರ್ತಿ ನೀಡುವ ಮಾತುಗಳು.

ಕಾರ್ಮಿಕವರ್ಗದ ಮೇಲೆ ಅಪಾರ ಕಳಕಳಿ

ಪರಿಷ್ಕರಣವಾದ ಮತ್ತು ಕೋಮುವಾದದ ವಿರುದ್ಧ ಹೋರಾಟದಲ್ಲಿ ಅವರು ಮುಂಚೂಣಿಯಲ್ಲಿರುತ್ತಿದ್ದರು. ಸಿಪಿಐ(ಎಂ) ಪಕ್ಷದ ಬೆಳವಣಿಗೆಗಾಗಿ, ಅದರ ಸುತ್ತ ಕಾರ್ಮಿಕ ವರ್ಗವನ್ನು ಅಣಿನೆರೆಸಲಿಕ್ಕಾಗಿ ಅವರು ಅವಿಶ್ರಾಂತವಾಗಿ ದುಡಿದಿದ್ದರು. ಬೆಂಗಳೂರಿನಿಂದ ದೂರದ ದಾವಣಗೆರೆಯ 'ದಾವಣಗೆರೆ ಗಣೇಶ' ಮಿಲ್ಲಿನಲ್ಲಿ ಕಾರ್ಮಿಕರನ್ನು ಸಂಘಟಿಸಿ ಅವರ ಹೋರಾಟಗಳಿಗೆ ಮುಖಂಡತ್ವ ನೀಡುತ್ತಿದ್ದರು. ಅಲ್ಲಿ ನಡೆದ ಒಂದು ಕೊಲೆ ಕೇಸಿಗೆ ಸಂಬಂಧಪಟ್ಟು ಅವರ ಮೇಲೆ ಸುಳ್ಳು ಅಪಾದನೆ ಹೊರೆಸಿ ಅವರನ್ನು ಬಂಧಿಸಲಾಯಿತು. ಕೊನೆಗೂ ಅವರು ನಿರಪರಾಧಿಯೆಂದು ಸಾಬೀತಾಗಿ ಜೈಲಿನಿಂದ ಬಿಡುಗಡೆಯಾದರು. ಜೈಲಿನಿಂದ ಬಿಡುಗಡೆಯಾದ ಕೆಲವೇ ದಿನಗಳಲ್ಲಿ ಒಂದು ಪತ್ರವನ್ನು ಬರೆದು ತಾನು ಮಂಗಳೂರಿಗೆ ಬರುತ್ತೇನೆಂದು ತಿಳಿಸಿದರು. ಮಂಗಳೂರಿಗೆ ಬಂದವರು ನನ್ನನ್ನು ಹಾಗೂ ಕಾಂ.ಪಿ. ರಾಮಚಂದ್ರರಾವ್‌ರವರನ್ನು ಭೇಟಿಯಾದರು. ಒಂದು ಕಡೆ ನಾವು ಕುಳಿತು ಅನೇಕ ವಿಷಯಗಳ ಬಗ್ಗೆ ಚರ್ಚಿಸಿದೆವು. ತಮ್ಮ ಜೈಲುವಾಸದ ಅನುಭವವನ್ನು ಹೇಳಿದರು. ತನ್ನ ಬಂಧನವಾದ ಮೇಲೆ ದಾವಣಗೆರೆಯ ಗಣೇಶ ಬಟ್ಟೆ ಮಿಲ್ಲಿನ ಕಾರ್ಮಿಕರ ಮೇಲೆ ಗೂಂಡಾಗಳಿಂದ ನಡೆದ ಅಮಾನುಷ ದೌರ್ಜನ್ಯದ ಬಗ್ಗೆ ಮತ್ತು ಈ ಬಗ್ಗೆ ಅಲ್ಲಿ ಪ್ರತಿಭಟನೆ ನಡೆಸಲು ಸಾಧ್ಯವಾಗದಿರುವ ಬಗ್ಗೆ ತುಂಬಾ ದುಃಖ ವ್ಯಕ್ತಪಡಿಸಿದರು. ಏನೇ ಆಗಲಿ, ಎಂತಹಾ ಸಂದರ್ಭವೇ ಬರಲಿ ನಮ್ಮನ್ನು ನಂಬಿದ ಕಾರ್ಮಿಕರ ಬಗ್ಗೆ, ಅವರ ರಕ್ಷಣೆಯ ಬಗ್ಗೆ ನಮಗೆ ಸದಾ ಕಳಕಳಿ ಬೇಕೆಂಬ ಅವರ ಅಭಿಪ್ರಾಯವನ್ನು ಕೇಳಿದಾಗ ನಿಜವಾಗಿಯೂ ಅವರಿಗೆ ಕಾರ್ಮಿಕ ವರ್ಗದ ಬಗ್ಗೆ ಇದ್ದ ಕಾಳಜಿ ಎಷ್ಟು ಆಳವಾಗಿತ್ತೆಂಬುದನ್ನು ನಾನು ತಿಳಿದುಕೊಂಡೆ.

ಅನೇಕ ಸಂದರ್ಭಗಳಲ್ಲಿ ಅವರು ಜೈಲಿಗೆ ಹೋದ ಅನುಭವ ತುಂಬಾ ಇದೆ. 1967ರಲ್ಲಿ ಭಾರತ ಚೀನಾ ಗಡಿಯುದ್ಧದ ಸಂದರ್ಭದಲ್ಲಿ ಅವರ ಬಂಧನವಾಗಿತ್ತು. ಬೆಂಗಳೂರಿನ ತಾತಗುಣಿ ಎಸ್ಟೇಟಿನ ಕಾರ್ಮಿಕರನ್ನು ಸಂಘಟಿಸಿದ ಸಮಯದಲ್ಲಿ ಅವರನ್ನು ಬಂಧಿಸಲಾಗಿತ್ತು. 1975ರ ತುರ್ತುಪರಿಸ್ಥಿತಿಯ ಕಾಲದಲ್ಲೂ ಅವರ ಬಂಧನವಾಗಿತ್ತು.

ವಿದ್ಯಾರ್ಥಿಯಾಗಿದ್ದಾಗಲೇ 1942ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭ ಅದರಲ್ಲಿ ಭಾಗವಹಿಸಿದ್ದಕ್ಕಾಗಿ ಅವರ ಬಂಧನವಾಗಿತ್ತು. ಹೀಗೆ ಬಿಡುಗಡೆಯಾದ ಪ್ರತೀ ಸಂದರ್ಭದಲ್ಲೂ ಅವರು ಹೊರಗೆ ಬಂದಾಗ ಅವರಲ್ಲಿ ಸ್ಫೂರ್ತಿ ಇನ್ನೂ ಹೆಚ್ಚಾಗುತ್ತಿತ್ತಲ್ಲದೆ ಹಿನ್ನಡೆಯಾಗುತ್ತಿರಲಿಲ್ಲ. ಇದು ಅವರ ಕ್ರಾಂತಿಕಾರಿ ವ್ಯಕ್ತಿತ್ವ.

ಬೆಂಗಳೂರು ಕೇಂದ್ರವಾಗಿದ್ದುಕೊಂಡು ಕರ್ನಾಟಕ ವಿವಿಧ ಜಿಲ್ಲೆಗಳ ಕಾರ್ಮಿಕರ ಚಳುವಳಿಗೆ ಅವರು ಮಾಡಿದ ಸೇವೆ ಗಮನಾರ್ಹ. ಬೆಂಗಳೂರಿನಲ್ಲಿ ಆರಂಭದಲ್ಲಿ ಸಣ್ಣ ಸಣ್ಣ ಕಾರ್ಮಿಕ ಸಂಘಟನೆಗಳನ್ನು ಕಟ್ಟುತ್ತಾ ಮುಂದಕ್ಕೆ ದೊಡ್ಡ ದೊಡ್ಡ ಕೈಗಾರಿಕೆಗಳಲ್ಲೂ ಸಾರ್ವಜನಿಕ ವಲಯದ ಸಂಸ್ಥೆಗಳಲ್ಲೂ ಕಾರ್ಮಿಕರನ್ನು ಸಂಘಟಿಸಿ ಹೋರಾಟದ ದಿಕ್ಕು ತೋರಿಸಿದ ವ್ಯಕ್ತಿತ್ವ ಕಾಂ. ಸೂರಿಯವರದ್ದು. ಬೆಂಗಳೂರಿನ ಕಾರ್ಮಿಕ ವರ್ಗದ ಚಳುವಳಿಯಲ್ಲಿ ಅತೀ ಎತ್ತರದ ಸ್ಥಾನವನ್ನು ಅವರು ಗಳಿಸಿದ್ದರು.

1987ರಲ್ಲಿ ನನಗೆ ಸೋವಿಯತ್ ಯೂನಿಯನ್‌ಗೆ ಭೇಟಿ ಕೊಡುವ ಅವಕಾಶ ಸಿಕ್ಕಿತ್ತು. ಆಗ ಸೂರಿಯವರು ಬೆಂಗಳೂರು ಜಿಲ್ಲಾ ಸಮಿತಿಯ ಕಾರ್ಯದರ್ಶಿಯಾಗಿದರು. ನಾನು ಬೆಂಗಳೂರಿನಿಂದ ವಿಮಾನ ಮೂಲಕ ದೆಹಲಿಗೆ ಪ್ರಯಾಣ ಬೆಳೆಸಬೇಕಾಗಿತ್ತು. ಕಾಂ. ಸೂರಿಯವರು ಇತರ ಸಂಗಾತಿಗಳೊಂದಿಗೆ ವಿಮಾನ ನಿಲ್ದಾಣದವರೆಗೂ ಬಂದು ನನ್ನನ್ನು ಆತ್ಮೀಯವಾಗಿ ಬೀಳ್ಕೊಟ್ಟ ಸಂದರ್ಭ ನನಗೆ ನನ್ನ ಮೊದಲನೆ ಅನುಭವ ಅದು. ನನ್ನ ಪ್ರಯಾಣಕ್ಕೆ ಬೇಕಾದ ವಿಮಾನ ಟಿಕೇಟನ್ನು ತಾವೇ ಖರೀದಿಸಿ ನನಗೆ ಕೊಟ್ಟಿದ್ದರು.


ಮಾತಿನಲ್ಲಿ ಸ್ವಲ್ಪ ಬಿರುಸುತನವಿದ್ದರೂ ಸಂಗಾತಿಗಳಲ್ಲಿ ಅಷ್ಟೇ ಅತ್ಮೀಯತೆಯೂ ಅವರಲ್ಲಿ ಇತ್ತು. ಪಕ್ಷದ ರಾಜ್ಯ ಸಮಿತಿ ಸಭೆಗಳಲ್ಲಿ ಅಥವಾ ಇನ್ನಾವುದೇ ವೇದಿಕೆಗಳಲ್ಲಿ ಕೆಲವು ವಿಷಯಗಳಿಗೆ ಸಂಬಂಧಪಟ್ಟು ಚರ್ಚೆ ನಡೆಯುವಾಗ ಅವರು ತಮ್ಮ ಅಭಿಪ್ರಾಯ ಮಂಡಿಸಿ ಬಲವಾಗಿ ವಾದಿಸುತ್ತಿದ್ದರು. ಅದೇ ವೇಳೆ ಇತರರ ಅಭಿಪ್ರಾಯಗಳನ್ನೂ ಕೇಳಿ ಒಮ್ಮತಕ್ಕೆ ಬರುತ್ತಿದ್ದರು. ಅದು ಅವರಲ್ಲಿದ್ದ ಕ್ರಾಂತಿಕಾರಿ ಗುಣ.

ಒಡನಾಟ ಅಚ್ಚಳಿಯದೆ ಉಳಿದಿದೆ

ಜುಲೈ 1 2002 ರಂದು ಅವರು ನಿಧನರಾದ ಬಗ್ಗೆ ಮಂಗಳೂರಿಗೆ ಸುದ್ಧಿ ತಲುಪಿದಾಗ ಅದನ್ನು ಕೇಳಿ ಅಘಾತವಾಯಿತು. ಅಂದು ರಾತ್ರಿಯೇ ಹೊರಟು ಬೆಂಗಳೂರು ತಲುಪಿ ಅವರ ಅಂತಿಮ ದರ್ಶನ ಪಡೆದಾಗ ತಡೆಯಲಾರದ ಮಾನಸಿಕ ಒತ್ತಡಕ್ಕೆ ಒಳಗಾದೆ. ಸುಮಾರು 38 ವರ್ಷಗಳ ಕಾಲ ಒಡಗೂಡಿ ಕೆಲಸ ಮಾಡಿದ ಒಬ್ಬ ಹಿರಿಯ ಸಂಗಾತಿಯನ್ನು ಕಳೆದುಕೊಂಡುದರಿಂದ ದುಖಃ ಉಮ್ಮಳಿಸಿ ಬಂತು. ಕಾಂ। ಸೂರಿಯವರು ಕಾರ್ಮಿಕ ವರ್ಗದ ಸ್ವರವಾಗಿದ್ದರು. ಆ ಸ್ವರವು ನಂದಿ ಹೋಗಿದೆ. ಆದರೆ ಅನೇಕ ವರ್ಷಗಳ ನಮ್ಮ ಒಡನಾಟ ನನ್ನ ಮನದಲ್ಲಿ ಸದಾ ಅಚ್ಚಳಿಯದೆ ಉಳಿದಿದೆ. ತಮ್ಮ ಹೋರಾಟದಿಂದ, ಕಾರ್ಮಿಕ ವರ್ಗಕ್ಕೆ, ಪಕ್ಷಕ್ಕೆ ನೀಡಿದ ಧೀಮಂತ ನೇತೃತ್ವದಿಂದ ಕಾರ್ಮಿಕ ವರ್ಗದಲ್ಲಿ ಅಪಾರ ಅನುಯಾಯಿಗಳನ್ನು ಗಳಿಸಿದ್ದು ಅವರ ಅಂತಿಮ ದರ್ಶನಕ್ಕೆ ಬಂದ ಜನಸ್ತೋಮವನ್ನು ಕಂಡವರಿಗೆ ಅರ್ಥವಾಗುತ್ತದೆ. ಒಟ್ಟಿನಲ್ಲಿ ಕಮ್ಯೂನಿಸ್ಟ್ ಅಂದೋಲನದ ಪ್ರಜಾಪ್ರಭುತ್ವ ಚಳುವಳಿಯ ಒಬ್ಬ ಧೀಮಂತ ಚೈತನ್ಯವನ್ನು ನಾವು ಕಳೆದುಕೊಂಡಂತಾಗಿದೆ.

ಖಾಸಗಿ ಬಸ್ ದರ ಏರಿಕೆ : ಪ್ರತಿಭಟಿಸಿದ ಡಿವೈಎಫ್ಐ

ದ.ಕ.ಜಿಲ್ಲಾ ಬಸ್ ಮಾಲಕರ ಸಂಘ ಹಾಗೂ ಕೆನರಾ ಬಸ್ ಮಾಲಕರ ಸಂಘ ಎಂಬ ಎರಡು ಖಾಸಗಿ ಬಸ್ ಮಾಲಕರ ಸಂಘಗಳು ಜಿಲ್ಲಾಡಳಿತದ ಅನುಮತಿ ಪಡೆಯದೆ ಮಾತ್ರವಲ್ಲ ಜಿಲ್ಲಾಡಳಿತಕ್ಕೆ ಮಾಹಿತಿಯನ್ನೂ ನೀಡದೆ ಏಕಾಏಕಿ ಬಸ್ ಪ್ರಯಾಣ ದರವನ್ನು ಏರಿಸಿದ ಕ್ರಮವನ್ನು ಹಾಗೂ ಜಿಲ್ಲಾಡಳಿತದ ಮೌನವನ್ನು ಖಂಡಿಸಿ ಡಿವೈಎಫ್ಐ ಮತ್ತು ಎಸ್ಎಫ್ಐಗಳ ನೇತೃತ್ವದಲ್ಲಿ ಆಗಸ್ಟ್ 21, 2013 ರಂದು ಪ್ರತಿಭಟನಾ ಪ್ರದರ್ಶನ ಮತ್ತು ಬಸ್ ಮಾಲಕರ ಸಂಘ ಹಾಗೂ ಜಿಲ್ಲಾಡಳಿತದ 'ಭೂತದಹನ'ವನ್ನು ನಡೆಸಲಾಯಿತು.



ವಾ.ಉ

ತಾವು ಬಸ್ ದರ ಏರಿಕೆ ನಡೆಸಲು ಜಿಲ್ಲಾಡಳಿತದ ಅನುಮತಿ ಪಡೆಯಬೇಕಿಲ್ಲವೆಂದೂ, ಸರಕಾರ ಕಾಲಕಾಲಕ್ಕೆ ಏರಿಸಿದ ತೈಲಬೆಲೆಗೆ ಅನುಗುಣವಾಗಿ ರಾಜ್ಯ ಸಾರಿಗೆ ಸಂಸ್ಥೆಗಳ ಪ್ರಯಾಣ ದರ ಏರಿಸುವ ಸಂದರ್ಭದಲ್ಲಿ ಖಾಸಗಿ ಸಾರಿಗೆ ಸಂಸ್ಥೆಗಳು ಪ್ರಯಾಣ ದರವನ್ನು ನಿಗದಿ ಪಡಿಸಲು ಸ್ವತಂತ್ರವಾಗಿವೆ ಎಂದು ಹೈಕೋರ್ಟು ತೀರ್ಪು ನೀಡಿದೆ ಎಂದು ಈಗ 5 ದಿನಗಳ ಹಿಂದೆ ಕರಾವಳಿಯ ಎರಡು ಬಸ್ ಮಾಲಕರ ಸಂಘಗಳು ತಿಳಿಸಿದ್ದು ಅದರಂತೆ ಬಸ್ ಪ್ರಯಾಣ ದರ ಹೆಚ್ಚಳವನ್ನು ಆಗಸ್ಟ್ 20 ರಿಂದ ಜಾರಿಗೊಳಿಸುವುದಾಗಿ ಪತ್ರಿಕಾ ಪ್ರಕಟಣೆ ನೀಡಿದ್ದವು. ಜಿಲ್ಲಾಡಳಿತ ಹಾಗೂ ಸಾರ್ವಜನಿಕ ಸಂಘ ಸಂಸ್ಥೆಗಳೊಡನೆ ಚರ್ಚಿಸಿ ಪ್ರಯಾಣ ದರ ನಿಗದಿ ಪಡಿಸುವ ಸಂಪ್ರದಾಯವನ್ನು ಕೈಬಿಟ್ಟ ಬಸ್ ಮಾಲಕ ಸಂಘಗಳ ಸರ್ವಾಧಿಕಾರಿ ಧೋರಣೆಯನ್ನು ವಿರೋಧಿಸಿ ಈ ಪ್ರತಿಭಟನೆಯನ್ನು ಡಿವೈಎಫ್ಐ–ಎಸ್ಎಫ್ಐ ಸಂಘಟನೆಗಳು ಹಮ್ಮಿಕೊಂಡಿದ್ದವು.

ಮಾಲಿಕರ ಸಂಘದ ಪ್ರಕಟಣೆಯು ಏಕಪಕ್ಷೀಯವಾಗಿ ನಡೆದಿದ್ದರೂ ದ.ಕ. ಜಿಲ್ಲಾಧಿಕಾರಿಗಳು ಮಾಲಿಕರ ಪ್ರಕಟಣೆಗೆ ತಡೆ ಒಡ್ಡುವುದನ್ನಾಗಲೀ ಸಾರ್ವಜನಿಕ ಸಂಘ ಸಂಸ್ಥೆಗಳ ಅಭಿಪ್ರಾಯ ಗ್ರಹಿಸಲು ಸಭೆ ಕರೆಯುವುದಾಗಲೀ ಮಾಡದೆ, ಮಾಲಿಕರ ಕ್ರಮಕ್ಕೆ ಮೌನ ಸಮ್ಮತಿ ನೀಡಿದ್ದಾರೆ. ಇದರಿಂದ ಜಿಲ್ಲಾಡಳಿತವೂ ಮಾಲಿಕರ ಸಂಘಗಳ ಕ್ರಮದಲ್ಲಿ ಶಾಮೀಲಾಗಿದೆ ಎಂಬುದಾಗಿ ಡಿವೈಎಫ್ಐ–ಎಸ್ಎಫ್ಐ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿದವು.



ದ.ಕ.ಜಿಲ್ಲಾಧಿಕಾರಿ ಕಚೇರಿ ಎದುರು ನಡೆದ ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ ಮತ್ತು ಕಾರ್ಯದರ್ಶಿ ದಯಾನಂದ ಶೆಟ್ಟಿ ಮಾತನಾಡಿದರು. ಎಸ್ಎಫ್ಐ ದ.ಕ.ಜಿಲ್ಲಾಧ್ಯಕ್ಷ ನಿತಿನ್ ಕುತ್ತಾರ್ ಸ್ವಾಗತಿಸಿದರು. ಡಿವೈಎಫ್ಐ ಮಂಗಳೂರು ನಗರ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್ ಧನ್ಯವಾದ ಸಮರ್ಪಿಸಿದರು. ಡಿವೈಎಫ್ಐ ಮತ್ತು ಎಸ್ಎಫ್ಐ ಸಂಘಟನೆಗಳ ಜಿಲ್ಲಾ ಹಾಗೂ ಮಂಗಳೂರು ನಗರ ಮುಖಂಡರು ಪ್ರತಿಭಟನೆ ಮತ್ತು ಭೂತ ದಹನದ ನೇತೃತ್ವ ವಹಿಸಿದ್ದರು.

ಉಡುಪಿಯಲ್ಲಿ ಕಟ್ಟಡ ಕಾರ್ಮಿಕರ ಪ್ರತಿಭಟನೆ:

ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೇ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಫಲಾನುಭವಿ ಸದಸ್ಯರ ಸಮಸ್ಯೆ ಬಗೆಹರಿಸುವಂತೆ ಹಾಗೂ ವಿವಿಧ ಬೇಡಿಕೆಗಳನ್ನು ಆಗ್ರಹಿಸಿ, ಉಡುಪಿ ಜಿಲ್ಲಾ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಸಂಘವು ಮಣಿಪಾಲದಲ್ಲಿರುವ ಉಡುಪಿ ಜಿಲ್ಲಾಧಿಕಾರಿಗಳ ಕಚೇರಿ ಎದುರು ಆಗಸ್ಟ್ 21 ರಂದು ಪ್ರತಿಭಟನೆ ನಡೆಸಿತು.

ಮಣಿಪಾಲದ ಟೈಗರ್ ಸರ್ಕಲ್‌ನಿಂದ ಹೊರಟ ನೂರಾರು ಕಟ್ಟಡ ಕಾರ್ಮಿಕರ ಪ್ರತಿಭಟನಾ ಮೆರವಣಿಗೆಯು ಜಿಲ್ಲಾಧಿಕಾರಿ ಕಚೇರಿ ಎದುರು ಸಮಾಪ್ತಿಗೊಂಡಿತು.

ಪ್ರತಿಭಟನೆಯಲ್ಲಿ ಸಂಘದ ಜಿಲ್ಲಾಧ್ಯಕ್ಷ ಪಿ.ವಿಶ್ವನಾಥ ರೈ, ಕಾರ್ಯದರ್ಶಿ ದೋಗು ಸುವರ್ಣ, ಕೋಶಾಧಿಕಾರಿ ಶೇಖರ ಬಂಗೇರ, ಸಿಐಟಿಯು ಉಡುಪಿ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ಸಂಘದ ಕುಂ… ತಾಲೂಕು ಕಾರ್ಯದರ್ಶಿ ಸುರೇಶ … ಉಪಾಧ್ಯಕ್ಷ ವೆಂಕಟೇಶ ಕೋಣಿ ಮ… ಭಾಗವಹಿಸಿದ್ದರು. ಪ್ರತಿಭಟನೆ ಬಳಿಕ… ಬೇಡಿಕೆಗಳ ಕುರಿತಾದ ಮನ… ಕಾರ್ಮಿಕ ಅಧಿಕಾರಿಗಳ … ಕರ್ನಾಟಕ ಕಟ್ಟಡ ಮತ್ತು ಇತರೇ ನಿ… ಕಾರ್ಮಿಕರ ಕಲ್ಯಾಣ ಮಂಡಳಿಯ ಅ… ಸಲ್ಲಿಸಲಾಯಿತು.

ಸಂಗಾತಿ ತುಕಾರಾಮ ಕೊಟ್ಟಾರಿ ನಿಧ…

ಮಂಗಳೂರಿನಲ್ಲಿ ಕಾರ್ಖಾನೆಯಲ್ಲಿ ದುಡಿದಿದ್ದ, … ಸಾಮೂಹಿಕ ಸಂಘಟನೆಗಳ ಪೋ… ಆಗಿದ್ದ ಉರ್ವಸ್ಟೋರಿನ ತುಕ… ಕೊಟ್ಟಾರಿಯವರು ವೃದ್ಧಾಪ್ಯದಿಂದ … 1 ರಂದು ನಿಧನರಾಗಿದ್ದಾರೆ. ಉರ್ವ… ಪ್ರದೇಶದ ಕಾರ್ಮಿಕ ಸಂಘ ಎಸ್… ಡಿವೈಎಫ್ಐ ಘಟಕಗಳು ಇವರ ಮನೆ… ಕಚೇರಿ ಎಂಬಂತೆ ಬಹಳ ಕಾ… ಬಳಸಿಕೊಳ್ಳುತ್ತಿದ್ದವು. ತಮ್ಮ ಮ… ಎಸ್ಎಫ್ಐ, ಡಿವೈಎಫ್ಐ 'ಸಮು… ಸಂಘಟನೆಗಳಗಳ ಕಾರ್ಯಕರ್ತರಾ… ಅವರು ಪ್ರೇರಣೆ ನೀಡಿದ್ದರು. ಅವರ … ಮಕ್ಕಳು ಸಮುದಾಯ ಹಾಗೂ … ಪ್ರಗತಿಪರ ಕಲಾ ಸಂಘಗಳಲ್ಲಿ ಕ್ರಿಯಾಶೀ… ಕೆಲಸ ಮಾಡಿದ್ದು, ಇಬ್ಬರು ಜಿಲ್ಲಾ ಮ… ಮಾನ್ಯತೆ ಪಡೆದ ಹಾಡುಗಾರರೂ … ನಿರ್ದೇಶಕರೂ ಆಗಿದ್ದಾರೆ.

ಕೊಟ್ಟಾರ ಚೌಕಿ ಸಿಐಟಿಯು ಕಚೇ… ಭಗತ್‌ಸಿಂಗ್ ಬಳಗ ಆಗಸ್ಟ್ 4 ರಂದ… ನಡೆಸಿ ತುಕಾರಾಮ ಕೊಟ್ಟಾರಿಯ… ಶ್ರದ್ಧಾಂಜಲಿ ಅರ್ಪಿಸಿತು. ಸಿಐ… ಮುಖಂಡರಾದ ಬಾಬು ದೇವ… ಸ್ಯಾಮುವೆಲ್ ಟೈಟಸ್, ಅಶೋಕ್ ಶ್ರೀ… ಮತ್ತಿತರರು ಭಾಗವಹಿಸಿದ್ದರು.


ನಿಮಗೆ 'ಜನಶಕ್ತಿ' ಸರಿಯಾಗಿ ತಲುಪುತ್ತಿಲ್ಲವೆ? ನಿಮಗೇನಾದರೂ ದೂರುಗಳಿವೆಯೇ? ಹೀಗೆ ಮಾಡಿ

'ಜನಶಕ್ತಿ ಕನ್ನಡ ವಾರ ಪತ್ರಿಕೆ'ಯ ಆಡಳಿತ ಮತ್ತು ಪ್ರಸಾರ ನಿರ್ವಹಣೆಯ ಜವಾಬ್ದಾರಿ ಬದಲಾವಣೆಯಾಗಿರುವುದನ್ನು ಈಗಾಗಲೇ ಗಮನಿಸಿದ್ದೀರಿ ಎಂದು ಭಾವಿಸುತ್ತೇವೆ. ಹೊಸ ಚಂದಾಗಳ ನೀಡಿಕೆ, ವಿಳಾಸ ಬದಲಾವಣೆ, ಪತ್ರಿಕೆ ತಲುಪದಿರುವ ಬಗೆಗಿನ ದೂರುಗಳು, ಏಜೆನ್ಸಿದಾರರ ಪತ್ರಿಕೆಗಳ ಹೆಚ್ಚಳ, ಬಾಕಿ ವಿಚಾರಣೆ, ಹಣ ಪಾವತಿ, ದೂರುಗಳು ಹಾಗೂ ಜಾಹಿರಾತುಗಳಿಗೆ ಸಂಬಂಧಿಸಿದ ಎಲ್ಲ ವ್ಯವಹಾರ, ವಿಚಾರಣೆ ಇತ್ಯಾದಿಗಳನ್ನು ಇನ್ನು ಮುಂದೆ ಈ ಕೆಳಗಿನ ವಿಳಾಸದಲ್ಲೇ ಮಾಡುವುದು. ಕಚೇರಿಯ ನೇರ ಸಂಪರ್ಕವು ಕಛೇರಿ ಕಾರ್ಯ ನಿರ್ವಹಿಸುವ ನಿರ್ದಿಷ್ಟ ಅವಧಿಯಲ್ಲಿ ಮಾತ್ರ ಲಭ್ಯವಿರುತ್ತದೆ ಎಂಬುದನ್ನು ಗಮನಿಸತಕ್ಕದ್ದು.

ವಿಳಾಸ : 'ಜನಶಕ್ತಿ' ಆಡಳಿತ ಕಚೇರಿ,
c/o. ಕ್ರಿಯಾ ಪ್ರಕಾಶನ, ಸೂರಿ ಭವನ, # 40/5, 2ನೇ 'ಬಿ' ಮೈನ್, 16ನೇ ಕ್ರಾಸ್, ಸಂಪಂಗಿರಾಮನಗರ, ಬೆಂಗಳೂರು–560027
email : janashakthi13.admn@gmail.com
Phone : 22234369
ಹೆಚ್.ಆರ್.ಸವಿತ ರಾಣಿ : 9483966467,
ಜಿ.ಚಂದ್ರಶೇಖರ್ : 9448578021
(ಕಾರ್ಯಾಲಯದ ಸಮಯ: ಬೆಳಿಗ್ಗೆ 10.00 ರಿಂದ ಸಂಜೆ 6.00 ಗಂಟೆವರೆಗೆ)

ಸಂಗಾತಿ ಶ್ರೀಮತಿ ಲೀಲಾ ನಿಧನ


ತೊಕ್ಕೋಟು: ಇಲ್ಲಿಗೆ ಸಮೀಪದ ಪಿಲಾರು ದಾರಂದ ಬಾಗಿಲು ನಿವಾಸಿ ಶ್ರೀಮತಿ ಲೀಲಾರವರು ಅಲ್ಪ ಕಾಲದ ಅನಾರೋಗ್ಯದಿಂದ ಆಗಸ್ಟ್ 18ರಂದು ಸಂಜೆ ನಿಧನ ಹೊಂದಿರುತ್ತಾರೆ. ಇವರಿಗೆ 63 ವರ್ಷ ವಯಸ್ಸಾಗಿತ್ತು.



ಕೋಟೆಕಾರು ಸರ್ಕಲ್ ಬೀಡಿ … ಯೂನಿಯನ್‌ನ ಸಕ್ರಿಯ ಕಾರ್ಯಕರ್ತ… ಬೀಡಿ ಕಾರ್ಮಿಕರ ಸವಲತ್ತುಗಳಿಗಾಗಿ… ಹಲವಾರು ಹೋರಾಟಗಳಲ್ಲಿ ಕಾರ್ಮಿ… ಸಂಘಟಿಸಿ ನೇತೃತ್ವ ನೀಡಿದ್ದರು.

ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಶ್ರೀ. ಕೆ… ಸಾಲ್ಯಾನ್, ಮಾಜಿ ಜಿಲ್ಲಾ ಪಂಚಾ… ಸದಸ್ಯೆ ಶ್ರೀಮತಿ ಪದ್ಮಾವತಿ ಎಸ… ಸಿಪಿಐ(ಎಂ) ಮುಖಂಡ ಜಯಂತ್… ಸಿಐಟಿಯು ರಾಜ್ಯ ಸಮಿತಿ ಸದಸ್ಯ … ಪಿಲಾರ್, ಸುಕುಮಾರ್, ಸಂಜೀವ ಪಿ… ಬೀಡಿ ಸಂಘದ ಉಪಾಧ್ಯಕ್ಷ ಕರಿಯಪ್ಪ… ಪಿಲಾರ್,ರೈತ ಸಂಘದ ಮುಖಂಡ ಗಂ… ಗಟ್ಟಿ, ಸಂಘದ ಜೊತೆ ಕಾರ್ಯದರ್ಶಿ ಶ್ರೀ… ಪುಷ್ಪ, ವಿಶ್ವನಾಥ ಶೆಟ್ಟಿ, ಸೇಸಪ್ಪ ಶೆಟ್ಟಿ ಹ… ಹಲವಾರು ಬಂಧುಗಳು ಮೃತರ ಅ… ದರ್ಶನ ಪಡೆದರು.

ಮೃತರು ಓರ್ವ ಪುತ್ರಿ, ಓರ್ವ ಪು… ಹಾಗೂ ಹಲವಾರು ಬಂಧು ಬಳಗದ… ಅಗಲಿದ್ದಾರೆ.



ವ್ಯಂಗ್ಯಚಿತ್ರ: ಸುಧೀರ್ ತೈಲಂಗ್, ಡೆಕ್ಕನ್ ಕ್ರಾನಿಕಲ್

ಸೀತಾರಾಂ ಯೆಚೂರಿ

ದೇಶಕ್ಕೆ ಈಗ ಬೇಕಾಗಿರುವುದು ಪರ್ಯಾಯ ರಾಜಕೀಯ ನೇತಾರರಲ್ಲ, ಜನಪರ ಪರ್ಯಾಯ ಧೋರಣೆಗಳು

ಎರಡು ವರ್ಷಗಳ ಹಿಂದೆ ಉದಾರೀಕರಣ ಪ್ರಕ್ರಿಯೆಯ ಭಟ್ಟಂಗಿಗಳು ಆರ್ಥಿಕ ಸುಧಾರಣೆಗಳ ಎರಡು ದಶಕಗಳು ಪೂರ್ಣಗೊಂಡುದನ್ನು ಹರ್ಷೋಲ್ಲಾಸಗಳಿಂದ ಆಚರಿಸಿದ್ದರು. ಆಗ ಇದೇ ಅಂಕಣದಲ್ಲಿ, ಆಗಷ್ಟೇ ಆರಂಭವಾಗಿದ್ದ ಭಾರತೀಯ ಆರ್ಥಿಕದ ನಿಧಾನಗತಿ 1991ರಲ್ಲಿ ದೇಶ ಕಾಣಬೇಕಾಗಿ ಬಂದಂತಹ ಒಂದು ಸ್ಥಿತಿಗೆ ನಮ್ಮನ್ನು ಒಯ್ಯುವಂತೆ ಕಾಣುತ್ತದೆ ಎಂದು ಎಚ್ಚರಿಸಿದ್ದೆವು. ಎಂದಿನಂತೆ ಕಾರ್ಪೊರೇಟ್ ಭಾರತದ ಮಂದಿ ಮತ್ತು ಅವರ ತುತ್ತೂರಿಗಳ ದಾಳಿಗಳಿಗೆ ನಾವು ಗುರಿಯಾದೆವು. ಜಾಗತಿಕ ಬಂಡವಾಳಶಾಹಿಯ ಬೆಳಕಿನ ದೇವತೆಗಳ ಹೊಳಪನ್ನು ನಾವು ನೋಡುತ್ತಿಲ್ಲ ಎಂದು ಅವರು ನಮ್ಮನ್ನು ಆಪಾದಿಸಿದರು. ಭಾರತ ಒಂದು ಜಾಗತಿಕ ನಟನಾಗಿ ರಂಗಪ್ರವೇಶ ಮಾಡಿದೆ, ಒಂದು ಶಕ್ತಿಯಾಗಿ ಮೂಡಿ ಬರುತ್ತಿದೆ, ನಮ್ಮ ಪ್ರಧಾನ ಮಂತ್ರಿಗಳು ಜಿ–20 ರ ಭವ್ಯ ಭೋಜನ ಕೂಟಗಳಲ್ಲಿ ಜಗತ್ತಿನ ಅತ್ಯುನ್ನತರೊಂದಿಗೆ, ಬಲಿಷ್ಟರೊಂದಿಗೆ ಭುಜಕ್ಕೆ ಭುಜ ತಗುಲಿಸಿ ನಿಲ್ಲುವಂತಾಗಿದೆ, ಇವನ್ನೆಲ್ಲ ಕಾಣಿರೇ ಎಂದು ನಮ್ಮನ್ನು ಹಳಿಯಲಾಯಿತು. ಇವೆಲ್ಲ ಭಾರತದ ಒಂದು ಸಣ್ಣ ವಿಭಾಗದ ಮಟ್ಟಿಗೆ ನಿಜವಿರಬಹುದು, ಆದರೆ ಬಹುಪಾಲು ಮಂದಿಗೆ ಅವೇ ಸಂಕಟಗಳು, ಅಪೌಷ್ಟಿಕತೆಗಳೇ ಈಗಲೂ ದಂಡಿಯಾಗಿವೆ. ನಾವು ಅದನ್ನು ಬೊಟ್ಟು ಮಾಡಿ ತೋರಿದೆವು. ಅವೆಲ್ಲ ಅಸಂಬದ್ಧ ಎಂದು ತಳ್ಳಿ ಹಾಕಿದರು. ಈಗ ಅವರು ನಿರ್ಮಿಸಿದ ಎರಡು ಭಾರತಗಳ ನಡುವಿನ ಕಂದರ ಶರವೇಗದಲ್ಲಿ ಹೆಚ್ಚುತ್ತಿರುವ ಕಟು ವಾಸ್ತವತೆ ಪ್ರತಿಕ್ಷಣವೂ ಕಣ್ಣಿಗೆ ರಾಚುತ್ತಿದೆ. ಈಗಲೂ ಅವರು ಅದನ್ನು ತಳ್ಳಿ ಹಾಕುತ್ತಿದ್ದಾರೆ.

ಇಂದು, ಆ ಎರಡು ವರ್ಷಗಳ ನಂತರ, ಭಾರತ ಮತ್ತೆ ಅಲ್ಲಿಗೇ ಬಂದು ನಿಂತಿರುವಂತೆ ಕಾಣುತ್ತದೆ. 1991 ರ ಪರಿಸ್ಥಿತಿಯನ್ನು , ಆಗ ಡಾ.ಮನಮೋಹನ್ ಸಿಂಗ್ ಹಣಕಾಸು ಮಂತ್ರಿಗಳಾಗಿ ಉದಾರೀಕರಣ ಪ್ರಕ್ರಿಯೆಯನ್ನು ಆರಂಭಿಸಲು ಬಳಸಿಕೊಂಡರು. ಅಂದಿನ ಆ ಪರಿಸ್ಥಿತಿ ಮತ್ತು ಇಂದಿನ ಪರಿಸ್ಥಿತಿಯ ನಡುವೆ ಇರುವ ಸಾಮ್ಯತೆಗಳು ಮೈನಡುಗಿಸುವಂತಿವೆ. ಆದರೂ, 1991ಕ್ಕೆ ಹಿಂದಿರುಗುವ ಪ್ರಶ್ನೆಯೇ ಇಲ್ಲ ಎಂದು ಅವರು ಇತ್ತೀಚೆಗಷ್ಟೇ ಹೇಳಿದ್ದಾರೆ. ಆಗ ಭಾರತದ ವಿದೇಶಿ ವಿನಿಮಯ ಒಂದು ನಿಗದಿತ ದರದಲ್ಲಿತ್ತು. ಈಗ ಅದು ಮಾರುಕಟ್ಟೆಗೆ ತಳುಕು ಹಾಕಿಕೊಂಡಿದೆ. ನಾವು ರೂಪಾಯಿಯ ಚಂಚಲತೆಯನ್ನು ಸರಿ ಪಡಿಸುತ್ತೇವಷ್ಟೇ ಎಂದರು.

ಮೈನಡುಗಿಸುವ ಸಾಮ್ಯತೆ

ಆದರೆ ಅವರು ಹೇಳದೇ ಬಿಟ್ಟ ಸಂಗತಿಯೊಂದಿದೆ. ಜುಲೈ 1991ರಲ್ಲಿ ರೂಪಾಯಿಯ 20ಶೇ.ವನ್ನೂ ಮೀರಿದ ಎರಡು ಹಂತಗಳ ಅಪಮೌಲ್ಯ ಆಗಿತ್ತು. ಅದು ನಡೆದದ್ದು 1988ರಲ್ಲಿ 13ಶೇ., 1989ರಲ್ಲಿ 10ಶೇ. ಮತ್ತು 1990ರಲ್ಲಿ 8ಶೇ. ಮೌಲ್ಯ ಕಳಕೊಂಡ ಹಿನ್ನೆಲೆಯಲ್ಲಿ. ಈಗ ನಾವು ಕಾಣುತ್ತಿರುವ ರೂಪಾಯಿಯ ಸತತ ಬೆಲೆ ಕುಸಿತಗಳಿಗಿಂತ ಅದು ಭಿನ್ನವಾಗಿತ್ತೇ?

1991–92 ರ ಬಜೆಟ್ ಭಾಷಣದಲ್ಲಿ ಸುಧಾರಣಾ ಪ್ರಕ್ರಿಯೆಯನ್ನು ಸಮರ್ಥಿಸಿಕೊಳ್ಳಲು ಅವರು ಆಗ ಸರಕಾರದ ಶೋಚನೀಯ ಹಣಕಾಸು ಸ್ಥಿತಿಯ ಬಣ್ಣನೆ ಮಾಡುತ್ತ ಇನ್ನು ಸಮಯ ಕಳೆಯುವಂತಿಲ್ಲ ಎಂದಿದ್ದರು. 19910–91ರಲ್ಲಿ ಇದ್ದ ಚಾಲ್ತಿ ಖಾತೆ ಕೊರತೆ(ಕರೆಂಟ್ ಅಕೌಂಟ್ ಡೆಫಿಸಿಟ್–ಸಿಎಡಿ) ಜಿಡಿಪಿಯ 2.5 ಶೇ. ಅದೇ ಒಪ್ಪತಕ್ಕಂತದ್ದಲ್ಲ ಎಂದಿದ್ದರು ಆಗ. ಈಗ ಅದು 4.8ಶೇ. ಆಗಿದೆ. ಸಾಲ ಮರುಪಾವತಿ, ಬಡ್ಡಿಗಳಿಗೆ ತೆರಬೇಕಾದ ಹಣದ ಹೊರೆ ಚಾಲ್ತಿ ಸಂದಾಯಗಳ 21ಶೇ. ದಷ್ಟಿದೆ ಎಂದಿದ್ದರು. ಈಗ, 2013–14ರ ಬಜೆಟಿನ ಪ್ರಕಾರ ಅದು 35.09ಶೇ. ಆಗಿದೆ.

1991ರ ಪರಿಸ್ಥಿತಿಯನ್ನು, ಆಗ ಡಾ.ಮನಮೋಹನ್ ಸಿಂಗ್ ಹಣಕಾಸು ಮಂತ್ರಿಗಳಾಗಿ ಉದಾರೀಕರಣ ಪ್ರಕ್ರಿಯೆಯನ್ನು ಆರಂಭಿಸಲು ಬಳಸಿಕೊಂಡರು. ಅಂದಿನ ಆ ಪರಿಸ್ಥಿತಿ ಮತ್ತು ಇಂದಿನ ಪರಿಸ್ಥಿತಿಯ ನಡುವೆ ಇರುವ ಸಾಮ್ಯತೆಗಳು ಮೈನಡುಗಿಸುವಂತಿವೆ. ಅವರು ಆಗ ಕೈಗೊಂಡ 'ಸರಿಪಡಿಕೆ' ಕ್ರಮ ಎಂದರೆ ಕಟ್ಟುನಿಟ್ಟಾದ ಶರತ್ತುಗಳಿಂದ ಕೂಡಿದ ಐಎಂಎಫ್ ಸಾಲಗಳನ್ನು ತೆಗೆದುಕೊಳ್ಳುವುದು ಮತ್ತು ವಿವಿಧ ವಲಯಗಳನ್ನು ವಿದೇಶಿ ಹೂಡಿಕೆಗಳಿಗೆ ತೆರೆಯುವುದು. ನೇರ ವಿದೇಶಿ ಹೂಡಿಕೆಗಾಗಿ ಧೋರಣೆಗಳ ವ್ಯವಸ್ಥೆಯನ್ನು ಉದಾರೀಕರಿಸಲು ನಿರ್ಧರಿಸಲಾಯಿತು. ಈಗ ಮತ್ತೆ ದೇಶವನ್ನು ಪಾರು ಮಾಡಲೆಂದು ಐಎಂಎಫ್‌ನಿಂದ ಅದಕ್ಕಂಟಿಕೊಂಡಿರುವ ಶರತ್ತುಗಳೊಂದಿಗೆ ಒಂದು ಪ್ಯಾಕೇಜನ್ನು ಕೇಳಲು, ಅದಕ್ಕೆ ಪೂರಕವಾಗಿ ಬರುವ 'ಮಿತವ್ಯಯ'ದ ಕ್ರಮಗಳನ್ನು ಅದಾಗಲೇ ನರಳುತ್ತಿರುವ ಜನಗಳ ಮೇಲೆ ಹೇರಲು ನೆಲ ಹದ ಮಾಡಲಾಗುತ್ತಿದೆಯೇ?

ವಿದೇಶಿ ವಿನಿಮಯ ಮೀಸಲು ಕೇವಲ ಆರು ವಾರಗಳ ಆಮದಿಗೆ ತೆರುವಷ್ಟಿತ್ತು ಎಂದು ಅಂದಾಜು ಮಾಡಲಾಗಿತ್ತು. ಈಗ ಪರಿಸ್ಥಿತಿ ತುಸು ಉತ್ತಮವಾಗಿದೆ, ಆರು ತಿಂಗಳ ಆಮದುಗಳಿಗೆ ತೆರಬಹುದಾದಷ್ಟು ಇದೆ ಎಂದು ಅಂದಾಜು ಮಾಡಲಾಗಿದೆ. ಆದರೆ ಇದು 'ಬ್ರಿಕ್ಸ್' ಸಮೂಹದಲ್ಲೇ(ಬ್ರೆಝಿಲ್–ರಶ್ಯ–ಭಾರತ–ಚೀನಾ– ದಕ್ಷಿಣ ಆಫ್ರಿಕ) ಅತೀ ಕಡಿಮೆ. ಭಾರತ ಬಿಟ್ಟು ಈ ಸಮೂಹದ ಇತರ ದೇಶಗಳಲ್ಲಿ ಸುಮಾರು ಎರಡು ವರ್ಷಗಳ ಆಮದುಗಳಿಗೆ ಸಾಲುವಷ್ಟು ವಿದೇಶಿ ವಿನಿಮಯ ಭಂಡಾರ ಇದೆ. 1991ರಲ್ಲಿದ್ದ ಇನ್ನೊಂದು ಆತಂಕದ ಸಂಗತಿಯೆಂದರೆ ನಾಗಾಲೋಟ ಹೂಡಿದ್ದ ಹಣದುಬ್ಬರ. 1990–91 ರಲ್ಲಿನ ಹಣದುಬ್ಬರ ಪ್ರಧಾನವಾಗಿ ಆವಶ್ಯಕ ಸರಕುಗಳಲ್ಲೇ ಇದ್ದುದು ಕಳವಳದ ಸಂಗತಿ ಎಂದು ಆಗ ಅವರು ಹೇಳಿದ್ದರು. ಇಂದು ಇದು ಭಿನ್ನವಾಗಿದೆಯೇ?

ಮತ್ತೆ ಐಎಂಎಫ್ ಸಾಲದತ್ತ?

ಡಾ. ಮನಮೋಹನ್ ಸಿಂಗ್ ಆಗ ಕೈಗೊಂಡ 'ಸರಿಪಡಿಕೆ' ಕ್ರಮ ಎಂದರೆ ಕಟ್ಟುನಿಟ್ಟಾದ ಶರತ್ತುಗಳಿಂದ ಕೂಡಿದ ಐಎಂಎಫ್ ಸಾಲಗಳನ್ನು ತೆಗೆದುಕೊಳ್ಳುವುದು ಮತ್ತು ವಿವಿಧ ವಲಯಗಳನ್ನು ವಿದೇಶಿ ಹೂಡಿಕೆಗಳಿಗೆ ತೆರೆಯುವುದು. ನೇರ ವಿದೇಶಿ ಹೂಡಿಕೆಗಾಗಿ ಧೋರಣೆಗಳ ವ್ಯವಸ್ಥೆಯನ್ನು ಉದಾರೀಕರಿಸಲು ನಿರ್ಧರಿಸಲಾಯಿತು. ಅದರ ಜೊತೆಗೆ ಒಂದು ಎಚ್ಚರಿಕೆಯನ್ನೂ ಕೊಡಲಾಯಿತು. ಯಾವುದೇ ಹೊಂದಾಣಿಕೆ ಬೆಲೆ ತೆರದೆ ಬರದು–ನಮ್ಮ ಆರ್ಥಿಕ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಲು ಮತ್ತು ನಮ್ಮ ಆರ್ಥಿಕದ ಆರೋಗ್ಯವನ್ನು ಮತ್ತೆ ನೆಲೆಗೊಳಿಸಲು ಜನತೆ ಅಗತ್ಯ ತ್ಯಾಗಗಳಿಗೆ ಸಿದ್ಧರಾಗಬೇಕು ಎಂಬ ಎಚ್ಚರಿಕೆ. ಇಂದು ಕೂಡ ಅಂತಹುದೇ ದನಿ ಕೇಳಿಸುತ್ತಿಲ್ಲವೇ?

ಸರಕಾರ ಮತ್ತೆ ಈಗ ದೇಶವನ್ನು ಪಾರು ಮಾಡಲೆಂದು ಐಎಂಎಫ್‌ನಿಂದ ಅದಕ್ಕಂಟಿಕೊಂಡಿರುವ ಶರತ್ತುಗಳೊಂದಿಗೆ ಒಂದು ಪ್ಯಾಕೇಜನ್ನು ಕೇಳಲು ನೆಲ ಹದ ಮಾಡುತ್ತಿದೆಯೇ? ಯುರೋಪಿಯನ್ ಒಕ್ಕೂಟದ ದೇಶಗಳಲ್ಲಿ ಇಂತಹ ಪಾರು ಪ್ಯಾಕೇಜುಗಳ ಪರಿಣಾಮಗಳನ್ನು ನೋಡುತ್ತಿದ್ದೇವೆ. ಅವಕ್ಕೆ ಪೂರಕವಾಗಿ ಬರುವ 'ಮಿತವ್ಯಯ'ದ ಕ್ರಮಗಳು ಅದಾಗಲೇ ನರಳುತ್ತಿರುವ ಜನಗಳ ಮೇಲೆ ಅಸಹನೀಯ ಹೊರೆಗಳನ್ನು ಹೇರಿ ಅದರಿಂದಾಗಿ ವ್ಯಾಪಕ ಪ್ರತಿಭಟನೆಗಳು ಎದ್ದು ಬರುತ್ತಿರುವುದನ್ನು ಕಾಣುತ್ತಿದ್ದೇವೆ.

ಪರ್ಯಾಯ ದಾರಿ ಇದೆ

ಆದರೆ, ಇದಕ್ಕೆ ಪರ್ಯಾಯವಾದ ಧೋರಣೆಯ ದಾರಿ–ದಿಕ್ಕು ಇದೆಯೇ? ಹೌದು, ಅಂತಹದೊಂದು ಪರ್ಯಾಯ ದಾರಿ–ದಿಕ್ಕು ಇದೆ. ಸರಕಾರದ 'ಆರ್ಥಿಕ ಸರ್ವೇಕ್ಷಣೆ 2012–13' ಕೊಟ್ಟಿರುವ ಮಾಹಿತಿಯ ಪ್ರಕಾರ, ಆರ್ಥಿಕ ವ್ಯವಸ್ಥೆಯಲ್ಲಿ ಅಂತಿಮ ಬಳಕೆಯ ಪ್ರಮಾಣದಲ್ಲಿ ವಾರ್ಷಿಕ ಹೆಚ್ಚಳದ ಸರಾಸರಿ ದರ 2009ರಿಂದ 2012 ರ ನಡುವೆ 8ಶೇ. ದಿಂದ 4.4ಶೇ.ಕ್ಕೆ ಇಳಿದಿದೆ. ಇದೇ ಈಗಿನ ಆರ್ಥಿಕ ನಿಧಾನಗತಿಗೆ ಬಹುಮಟ್ಟಿಗೆ ಕಾರಣವಾಗಿದೆ. ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ

(ಪುಟ 15 ಕ್ಕೆ)



"ಅಪಾಯವಿದೆ, ಕಷ್ಟವೂ ಇದೆ, ನಿಜ! ಆದರೆ, ಒಮ್ಮೆ ಅಲ್ಲಿಗೆ ತಲುಪಿದೆವೆಂದರೆ ನಮ್ಮ ಕಷ್ಟಗಳೆಲ್ಲ ಪರಿಹಾರವಾಗುತ್ತವೆ! ಯೋಚಿಸಿ ನೋಡಿ!

ನರಸಿಂಹರಾವ್ ಸರಕಾರದಲ್ಲಿ ಹಣಕಾಸು ಮಂತ್ರಿಗಳಾಗಿ ಸಾಲಗಳು ಮತ್ತು ವಿದೇಶಿ ಬಂಡವಾಳದ ಮೂಲಕ 'ಸಮೃದ್ಧಿಗೆ ಸ್ವಾಗತ' ಕೋರುವ ಒಂದು 'ಹೊಸ ಆರ್ಥಿಕ ವ್ಯವಸ್ಥೆ'ಯನ್ನು ಕಟ್ಟಲು ಹೊರಟಾಗ ಪ್ರಖ್ಯಾತ ವ್ಯಂಗ್ಯಚಿತ್ರಕಾರ ಆರ್.ಕೆ.ಲಕ್ಷ್ಮಣ್:

ಅಂಧಶ್ರದ್ಧೆ, ಜಾತಿಬೇಧದ ಮಡೆಸ್ನಾನ-ಪಂಕ್ತಿಬೇಧಗಳ ವಿರುದ್ಧ ಆಂದೋಲನ ವಿಸ್ತರಣೆಗೆ ರಾಜ್ಯ ಸಮಾವೇಶದ ನಿರ್ಧಾರ

ಮಡೆಸ್ನಾನ – ಪಂಕ್ತಿಬೇಧದಂತಹ ಅಮಾನವೀಯ ಆಚರಣೆಗಳ ವಿರುದ್ಧ ಜಾಗೃತ ಚಳುವಳಿ ವಿಸ್ತರಿಸುತ್ತಿರುವಂತೆ, ಅವುಗಳನ್ನು ಸಮರ್ಥಿಸುವ ವಿತಂಡವಾದಗಳು ವಿಜೃಂಭಿಸುತ್ತಿವೆ. ಸ್ಥಾಪಿತ ಹಿತಾಸಕ್ತಿಗಳ ಹುನ್ನಾರಗಳನ್ನು ಎದುರಿಸಿ ಮಾನವನ ಘನತೆ, ಸಮಾನತೆಗಳನ್ನು ಎತ್ತಿಹಿಡಿದು ಜಾತಿಬೇಧದ ಆಚರಣೆಗಳನ್ನು ನಿಷೇಧಿಸುವಂತೆ ಆಗ್ರಹಿಸಲು ನಡೆದ ಸಮಾಲೋಚನೆಯ ಈ ಸಮಾವೇಶ

ಎಸ್.ವೈ. ಗುರುಶಾಂತ್

ಸಮಾವೇಶದಲ್ಲಿ ನೆರರೆದವರು ಒಂದೆ-ರಡು ರಂಗದವರಲ್ಲ. ಹತ್ತಾರು ಕ್ಷೇತ್ರಗಳ ಪ್ರಮುಖರು. ರಾಜಕೀಯ, ಸಾಹಿತ್ಯಿಕ, ಧಾರ್ಮಿಕ, ಕಾನೂನು, ವಿಜ್ಞಾನ, ವೈದ್ಯಕೀಯ, ಮಾಹಿತಿ ತಂತ್ರಜ್ಞಾನ, ಮಾಧ್ಯಮ, ಜನಚಳುವಳಿಗಳು, ಸಂಘಟಕರು, ದುಡಿವ ಜನವಿಭಾಗಗಳು, ದಲಿತರು, ಕೃಷಿಕರು, ವಿದ್ಯಾರ್ಥಿ ಯುವಜನ, ಮಹಿಳೆಯರು, ಹಲವಾರು ಚಿಂತಕರು ಇತ್ಯಾದಿ . ಬಂದದ್ದು ಹಲವು ರಂಗಗಳಿಂದ ಎಂಬುದೇನೋ ಸರಿ. ಆದರೆ ಆಶಯ, ಧ್ಯೇಯ ಒಂದೇ. ರಂಗಗಳು ಹಲವಾದರೂ ಮನಸೊಂದೇ, ಕನಸೊಂದೇ, ಕ್ರಿಯಾಶೀಲತೆಯ ಸಂಕಲ್ಪವೂ.

ರಾಜ್ಯದ ಹಲವಾರು ಧಾರ್ಮಿಕ ಸ್ಥಳಗಳಲ್ಲಿ ವಿಶೇಷವಾಗಿ ಉಡುಪಿಯ ಶ್ರೀಕೃಷ್ಣ ದೇವಾಲಯ, ಕುಕ್ಕೆ ಸುಬ್ರಹ್ಮಣ್ಯ ದೇವಾಲಯಗಳಲ್ಲಿ ಅಚರಿಸಲಾಗುತ್ತಿರುವ ಪಂಕ್ತಿಬೇಧ ಮತ್ತು ಮಡೆಸ್ನಾನದಂತಹ ಜಾತಿಬೇಧ , ಅಂಧಶ್ರದ್ಧೆಯ ವಿರುದ್ಧ ಆಂದೋಲನ ಸಾರಿರುವ ಮತ್ತು ಅದನ್ನು ಮತ್ತಷ್ಟೂ ತೀಕ್ಷ್ಣಗೊಳಿಸಲು ಬಯಸಿದ ಸಮಾನ ಮನಸ್ಕರು ಅಲ್ಲಿ ಸೇರಿದ್ದರು. ವಿಚಾರ-ವಿಮರ್ಶೆ ಹಾಗೂ ಕ್ರಿಯಾಶೀಲ ಆಂದೋಲನವನ್ನು ರೂಪಿಸಲೆಂದೇ ಸಿಪಿಐ(ಎಂ) ಇದೇ ಆಗಸ್ಟ್ 18, 2013ರಂದು ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಸಮಾವೇಶವನ್ನು ಸಂಘಟಿಸಿತ್ತು. ಈ ದೆಸೆಯಲ್ಲಿ ಇದೊಂದು ಯಶಸ್ವಿಯಾದ ಪ್ರಯತ್ನ.

ಹಲವು ಹಂತಗಳ ಪ್ರಕ್ರಿಯೆಯ ಬಳಿಕ

ಇದಕ್ಕೆ ಹಿನ್ನೆಲೆಯಾಗಿದ್ದದ್ದು ಹೋರಾಟದ ಕಾವು. ವಿತಂಡವಾದಗಳ ಎದುರಿನಲ್ಲಿ ಹುಟ್ಟಿದ ಚಿಂತನ-ಮಂಥನ.

ಈ ಹಿಂದೆ ಉಡುಪಿಯ ಶ್ರೀಕೃಷ್ಣ ದೇವಾಲಯದಲ್ಲಿನ ಪಂಕ್ತಿಬೇಧವನ್ನು ಪ್ರಶ್ನಿಸಿ ಅದನ್ನು ನಿಲ್ಲಿಸುವಂತೆ ಆಗ್ರಹಿಸಿ ಸಿಪಿಐ(ಎಂ) ಪಕ್ಷ ಕಳೆದ ವರುಷಗಳಲ್ಲಿ ಹೋರಾಟವನ್ನು ಆರಂಭಿಸಿತ್ತು. ಉಡುಪಿಯಲ್ಲೇ ಪ್ರತಿಭಟನಾ ಪ್ರದರ್ಶನ ನಡೆಸಿತ್ತು. ಕುಕ್ಕೆ ಸುಬ್ರಹ್ಮಣ್ಯದಲ್ಲಿ ಅಮಾನವೀಯ ಮಡೆಸ್ನಾನದ ಆಚರಣೆಯನ್ನು ಅರಿಯಲೆಂದು ತೆರಳಿದ್ದ ದಲಿತ ಚಳುವಳಿಯ ಶಿವರಾಮು ಅವರ ಮೇಲೆ ಮಲೆಕುಡಿಯರನ್ನು ಎತ್ತಿ ಕಟ್ಟಿ ಅಲ್ಲಿನ ಪುರೋಹಿತಶಾಹಿ ಹಲ್ಲೆ ನಡೆಸಿತ್ತು. ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಮೌಢ್ಯತೆ, ಮುಗ್ಧ ಜನರ ಶೋಷಣೆ ವಿರೋಧಿಸಿ ಅದನ್ನು ನಿಷೇಧಿಸುವಂತೆ ರಾಜ್ಯ ಸರಕಾರಕ್ಕೆ ಆಗ್ರಹಿಸಿ ಮಠಾಧೀಶರು ರಾಜಧಾನಿಯಲ್ಲಿ ನಡೆಸಿದ ದಿನವಿಡೀ ಧರಣಿ ಒತ್ತಡವನ್ನು ಹೆಚ್ಚಿಸಿತ್ತು. ಅಂದು ಭರವಸೆ ನೀಡಿದ ಸರಕಾರ ಮುಂದೆ ಅದನ್ನು ಪಾಲಿಸಲಿಲ್ಲ. ಪುತ್ತೂರಿನ ಆಡಳಿತಾಧಿಕಾರಿ ಹೊರಡಿಸಿದ್ದ ಆದೇಶವನ್ನು ಜಿಲ್ಲಾಧಿಕಾರಿ ರದ್ದು ಪಡಿಸುವ ಮೂಲಕ ಮಡೆಸ್ನಾನದ ಆಚರಣೆ ಮುಂದುವರಿಸಿದರು. ಮುಂದೆ ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿದಾಗಲೂ ಸರಕಾರ ನಿರ್ಭಂಧಿಸುವ ನಿಲುವನ್ನು ತೋರಲಿಲ್ಲ. ಬದಲಾಗಿ ಮಡೆಸ್ನಾನದ ಬದಲು ಎಡೆಸ್ನಾನದ ಇಂಗಿತ ವ್ಯಕ್ತಪಡಿಸಿ ಮೌಢ್ಯತೆ ಮತ್ತು ಮುಗ್ಧಜನರ ಶೋಷಣೆ ಮುಂದುವರಿಯುವಂತೆ ನೋಡಿಕೊಂಡಿತು.



ನಗಾರಿ ಬಾರಿಸುವ ಮೂಲಕ ಉದ್ಘಾಟಿಸುತ್ತಿರುವ ನಿಡುಮಾಮಿಡಿ ಶ್ರೀಗಳು

ನಂತರವೂ ಉಚ್ಚನ್ಯಾಯಾಲಯದಲ್ಲಿ ತನ್ನ ಪಾತ್ರವನ್ನು ಸರಿಯಾಗಿ ನಿರ್ವಹಿಸಲಿಲ್ಲ.

ಒಂದೆಡೆ ಸರಕಾರದ ಪಾತ್ರವಿರುವಾಗಲೇ ಸಂವಿಧಾನ ವಿರೋಧಿ ಆಚರಣೆಗಳನ್ನು ನಿಷೇಧಿಸುವಂತೆ ಅದರ ಮೇಲೆ ಒತ್ತಡ ಹೇರುವಾಗಲೇ ಜಾತಿಬೇಧವೇ ಮೂಲವಾಗಿರುವ ಈ ಅಂಶಗಳ ವಿರುದ್ಧ ಪ್ರತಿರೋಧ ಒಡ್ಡುತ್ತಾ ಜನಜಾಗೃತಿ ಉಂಟು ಮಾಡಲು ಸಿಪಿಐ(ಎಂ) ಸಾರ್ವಜನಿಕ ಆಂದೋಲನವನ್ನು ತೀವ್ರಗೊಳಿಸಿತು. ಪರಿಣಾಮವಾಗಿ 2012ರ ಡಿಶೆಂಬರ್ 27 ರಂದು ಉಡುಪಿಯಲ್ಲಿ ನಡೆದ ಪ್ರತಿಭಟನೆ, ಅದರ ಮೇಲೆ ಪೋಲೀಸರ ಲಾಠಿಚಾರ್ಜ್, ಸುಳ್ಳು ಮೊಕದ್ದಮೆಗಳ ಹೂಡಿಕೆ ಹೋರಾಟದ ಆಯಾಮಕ್ಕೆ ಹೊಸ ಸ್ವರೂಪವನ್ನು ನೀಡಿದವು. ಇಡೀ ರಾಜ್ಯದಾದ್ಯಂತ ಮತ್ತೊಮ್ಮೆ ನಡೆದ ಪ್ರತಿಭಟನೆಗಳೂ ಗಮನ ಸೆಳೆದವು.

ಬಳಿಕ ಸರಕಾರವನ್ನು ಒತ್ತಾಯಿಸಲು ಮನವಿಪತ್ರಕ್ಕೆ ಸಹಿಸಂಗ್ರಹಣಾ ಅಭಿಯಾನಕ್ಕೆ ಚಾಲನೆ ನೀಡಲಾಯಿತು. ರಾಷ್ಟ್ರಕವಿ ಡಾ. ಜಿ.ಎಸ್.ಶಿವರುದ್ರಪ್ಪವನರು, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ. ಚಂದ್ರಶೇಖರ ಕಂಬಾರ್‌ರವರು, ನಾಡೋಜ ಡಾ.ಬರಗೂರು ರಾಮಚಂದ್ರಪ್ಪ, ಡಾ.ಎಂ. ಎಂ.ಕಲಬುರ್ಗಿ, ಪ್ರೊ.ಚಂದ್ರಶೇಖರ್ ಪಾಟೀಲ್, ಪ್ರೊ.ರವಿವರ್ಮ ಕುಮಾರ್, ಇಂದಿರಾ ಕೃಷ್ಣಪ್ಪ, ದೇವನೂರು, ಡಾ.ಕೆ. ಮರುಳಸಿದ್ದಪ್ಪ, ಪ್ರೊ.ಜಿ.ಕೆ.ಗೋವಿಂದರಾವ್, ಬಿ.ಟಿಲಲಿತನಾಯಕ್, ಹೀಗೆ ನಾಡಿನ ಹಲವಾರು ಪ್ರಮುಖರು ಸಹಿ ಹಾಕಿ ಚಳುವಳಿಯನ್ನು ಬೆಂಬಲಿಸಿದ್ದಾರೆ, ಸರಕಾರವನ್ನು ಆಗ್ರಹಿಸಿದ್ದಾರೆ.

ಬದಲಾದ ಸರಕಾರ, ಆದರೆ ಬದಲಾಯಿತೇ ಧೋರಣೆ?

ಚುನಾವಣೆಯಲ್ಲಿ ಬಿಜೆಪಿ ಸೋತು ಕಾಂಗ್ರೆಸ್ ಪಕ್ಷದ ಹೊಸ ಸರಕಾರ ಆಡಳಿತಕ್ಕೆ ಬಂದಿರುವ ಹಿನ್ನೆಲೆಯಲ್ಲಿ ಈ ಸರಕಾರ ಏನು ಕ್ರಮ ವಹಿಸಲಿದೆ ಎಂಬ ಕುತೂಹಲ ಹಲವರಲ್ಲಿತ್ತು. ಆದರೆ ಉಡುಪಿಯ ಶ್ರೀಕೃಷ್ಣ ದೇವಾಲಯವನ್ನು ಮುಜರಾಯಿ ಇಲಾಖೆಯಿಂದ ಡೀ-ನೋಟಿಫಿಕೇಷನ್ ನೀಡಿದ್ದ ಬಿಜೆಪಿ ಸರಕಾರದ ಕ್ರಮವನ್ನು ಬದಲಿಸುವ ಇಂಗಿತವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ವ್ಯಕ್ತಪಡಿಸಿದಾಗ ಪೇಜಾವರರರಿಂದ, ಅಲ್ಲದೇ ಮುಖ್ಯವಾಗಿ ಆಡಳಿತ ಕಾಂಗ್ರೆಸ್ ಪಕ್ಷದೊಳಗಿಂದಲೇ ವಿರೋಧ ಬಂದದ್ದು ಸರಕಾರದ ನಡೆ ಬಗ್ಗೆ ಅನುಮಾನ ಮೂಡುವಂತಾಗಿದೆ.

ಸ್ಥಾಪಿತ ಹಿತಾಸಕ್ತಿಗಳ ವಿತಂಡಗಳು: ಸವಾಲು

ಈ ಸನ್ನಿವೇಶದಲ್ಲೇ ಜಾತಿಬೇಧವನ್ನು, ಅಂಧಶ್ರದ್ಧೆ, ಮೌಢ್ಯತೆಗಳನ್ನು ಹಲವು ಬಗೆಗಳಲ್ಲಿ ತೀವ್ರವಾಗಿ ಸಮರ್ಥಿಸುವುದು ಸಾರ್ವಜನಿಕವಾಗಿ ಜೋರಾಗಿಯೇ ನಡೆದಿದೆ. ಪಂಕ್ತಿಬೇಧ -ಮಡೆಸ್ನಾನ ಧಾರ್ಮಿಕವೂ , ಸಂವಿಧಾನ ಬದ್ಧ ಹಕ್ಕು ಎಂಬಂತೆ ಪ್ರತಿಪಾದಿಸಲಾಗುತ್ತಿದೆ. ವಿಚಾರಣೆಯ ಹಂತದಲ್ಲಿ ನ್ಯಾಯಾಲಯ ನೀಡಿದ ತಾತ್ಕಾಲಿಕ ತಡೆಯನ್ನೇ ತಮ್ಮ ವಿಜಯ ಎಂಬಂತೆ ಸ್ಥಾಪಿತ ಹಿತಾಸಕ್ತಿಗಳು ವಿಜೃಂಭಿಸುತ್ತಿದ್ದಾರೆ. ಸರಕಾರದ ಮೇಲೂ, ಸಾರ್ವಜನಿಕರ ಮೇಲೂ ವಿವಿಧ ರೀತಿಯ ಒತ್ತಡ, ಅಜ್ಞಾನ, ಅಂಧಶ್ರದ್ಧೆ ಹರಡುವಲ್ಲಿ ನಿರತರಾಗಿದ್ದಾರೆ. ಮುಂದಿನ ಷಷ್ಠಿ ಹೊತ್ತಿನಲ್ಲಿ ಮಡೆಸ್ನಾನದ ಆಚರಣೆ ಸಂಘಟಿಸಲು ಸನ್ನದ್ಧರಾಗುತ್ತಿದ್ದಾರೆ. ದೇಶದ ಸಂವಿಧಾನ, ಮಾನವೀಯತೆ, ಮಾನವನ ಘನತೆ ಮತ್ತು ಸಮಾನತೆ, ವೈಚಾರಿಕತೆಗಳ ಮೇಲೆ ಸರ್ವಮುಖಿ ಧಾಳಿ ನಡೆಯುತ್ತಿರುವಾಗ ಈ ಮೌಲ್ಯಗಳನ್ನು ಪ್ರೀತಿಸುವ, ಪ್ರತಿಪಾದಿಸುವವರಿಗೆ ಒಡ್ಡಿರುವ ದೊಡ್ಡ ಸವಾಲಾಗಿದೆ.

ಸವಾಲಿನೆದುರಿನಲ್ಲಿ ಸಮಾವೇಶ

ಇದನ್ನು ಕೈಗೆತ್ತಿಕೊಂಡು ಸಮರ್ಥವಾಗಿ ಎದುರಿಸಲು ಈ ಸಮಾವೇಶವನ್ನು ಸಿಪಿಐ(ಎಂ) ಸಂಘಟಿಸಿತ್ತು. ಪಂಕ್ತಿಬೇಧ, ಮಡೆಸ್ನಾನದ ಆಚರಣೆಗಳನ್ನು ವಿರೋಧಿಸುವ, ಇದರಲ್ಲಿ ಕ್ರಿಯಾಶೀಲವಾಗಿ ತೊಡಗಿದ ಎಲ್ಲರೂ ಭಾಗವಹಿಸಿದ್ದು ಐತಿಹಾಸಿಕವಾಗಿತ್ತು. ಇಲ್ಲಿ ಪ್ರತಿಯೊಬ್ಬರೂ

ಪುಟ 14 ಕ್ಕೆ

ಆಂದೋಲನ ವಿಸ್ತರಿಸಲು, ಇನ್ನಷ್ಟು ತೀವ್ರಗೊಳಿಸಲು ಕರೆ

ಸಮಾವೇಶವು ಮುಂದಿನ ಕೆಲವು ಕಾರ್ಯಕ್ರಮಗಳನ್ನು ರೂಪಿಸಿತು.

ಅದರಂತೆ ಜನತೆಯನ್ನು ಜಾಗ್ರತಗೊಳಿಸಲು ಎಲ್ಲಾ ಜಿಲ್ಲೆಗಳಲ್ಲಿ ಸಮಾವೇಶಗಳನ್ನು ನಡೆಸುವುದು.

ಸಹಿ ಸಂಗ್ರಹವನ್ನು ತೀವ್ರಗೊಳಿಸಿ ಸರಕಾರಕ್ಕೆ ಮನವಿ ನೀಡಿ ಆಗ್ರಹಿಸುವುದು.

ಕುಕ್ಕೆ ಸುಬ್ರಹ್ಮಣ್ಯ, ಉಡುಪಿ ಮತ್ತಿತರೆಡೆ ಮಡೆಸ್ನಾನ ಮತ್ತು ಪಂಕ್ತಿಬೇಧದ ಆಚರಣೆ ನಡೆಯುವ ಕಡೆಗಳಲ್ಲಿ ಪ್ರತಿಭಟಿಸುವುದು. ಬಂದ ಸಲಹೆಗಳ ಆಧಾರದಲ್ಲಿ ಸಮಾಲೋಚಿಸಿ ಮತ್ತಷ್ಟು ಕಾರ್ಯಕ್ರಮಗಳನ್ನು ರೂಪಿಸುವುದು.

ಕನ್ನಡ ವಾರಪತ್ರಿಕೆ

'ಪಂಕ್ತಿಬೇಧ ಮಡೆಸ್ನಾನ ಪುರೋಹಿತಶಾಹಿ ಲಾಭಕ್ಕಾಗಿ'
ನಿಷೇಧಕ್ಕಾಗಿ ರಾಜ್ಯ ಸಮಾವೇಶದ ಆಗ್ರಹ

ದಿನವಿಡೀ ನಡೆದ ಈ ಸಮಾವೇಶದಲ್ಲಿನ ಕಲಾಪಗಳು, ವ್ಯಕ್ತಗೊಂಡ ಅಭಿಪ್ರಾಯಗಳು ವರದಿ ಇಲ್ಲಿದೆ

ವರದಿ– ಎಂ.ಪಿ. ಯುವರಾಜ್

ಗಸ್ಟ್ 18, 2013 ರಂದು ಮಾರ್ಕ್ಸ್‌ವಾದಿ ಮ್ಯೂನಿಸ್ಟ್ ಪಕ್ಷವು ಬೆಂಗಳೂರಿನ ಶಾಸಕರ ವನದ ಸಮ್ಮೇಳನ ಸಭಾಂಗಣದಲ್ಲಿ ಂಧಶ್ರದ್ಧೆ ಹಾಗೂ ಜಾತಿ ತಾರತಮ್ಯಗಳ ಂಕ್ತಿಭೇದ ಮತ್ತು ಮಡೆಸ್ನಾನ ಪದ್ಧತಿ'ಗಳ ರುದ್ಧ ರಾಜ್ಯ ಸಮಾವೇಶವನ್ನು ಂಘಟಿಸಿತ್ತು. ನಿಡುಮಾಮಿಡಿ ಮಾನವ ರ್ಮಪೀಠದ ಅಧ್ಯಕ್ಷರಾದ ಶ್ರೀ ವೀರಭದ್ರ ನ್ನಮಲ್ಲ ಸ್ವಾಮೀಜಿ ಉದ್ಘಾಟಿಸಿದರು. ಣೆಹಳ್ಳಿ ಮಠದ ಶ್ರೀ ಪಂಡಿತಾರಾ– ಶಿವಾಚಾರ್ಯ ಸ್ವಾಮೀಜಿ, ಕೂಡಲ ಂಗಮದ ಶ್ರೀ ಬಸವ ಜಯಮೃತ್ಯುಂಜಯ ್ವಾಮೀಜಿಗಳು ಅವರೊಂದಿಗೆ ಜನಜಾಗೃತಿಯ ಂಕೇತವಾಗಿ ನಗಾರಿ ಬಾರಿಸುವ ಮೂಲಕ ಮಾವೇಶವು ಉದ್ಘಾಟನೆಗೊಂಡಿತು. ಚಿಂತಕರಾದ ಪ್ರೊ. ಚಂದ್ರಶೇಖರ ಾಟೀಲ್, ಪ್ರೊ. ಕೆ. ಮರುಳಸಿದ್ದಪ್ಪ ಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ್, ಾಜ್ಯ ಸಮಿತಿ ಸದಸ್ಯರಾದ ಎಸ್.ವೈ. ುರುಶಾಂತ್ ಮುಂತಾದವರು ಉದ್ಘಾಟನಾ ಮಾರಂಭದಲ್ಲಿ ಪಾಲ್ಗೊಂಡಿದ್ದರು. ಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿ ಮಾನ್ಪಡೆ ಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮ ಉದ್ಘಾಟಿಸಿದ ಡುಮಾಮಿಡಿ ಸ್ವಾಮೀಜಿಯವರು ಧರ್ಮ, ದ್ಧಾಂತ, ಸಂವಿಧಾನ, ದರ್ಶನಶಾಸ್ತ್ರದ ಯಾವುದೇ ಮಾನ್ಯತೆ ಇಲ್ಲದಿದ್ದರೂ ಕೇವಲ ಾಶ್ವತ ಆದಾಯದ ಮೂಲಗಳನ್ನು ಹೆಚ್ಚಿಸಿಕೊಳ್ಳಲು ಪುರೋಹಿತಶಾಹಿ ವರ್ಗವು ಪ್ರಜ್ಞಾಪೂರ್ವಕವಾಗಿ ಮಡೆಸ್ನಾನದಂತಹ ಅಮಾನೀಯ ಪದ್ಧತಿಗಳನ್ನು ಪೋಷಿಸಿ ಡು ಬರುತ್ತಿದೆ. 'ಬ್ರಾಹ್ಮಣರು ತಿಂದು ಬಿಟ್ಟ ಎಂಜಲು ಎಲೆ ಮೇಲೆ ಬ್ರಾಹ್ಮಣೇತರರನ್ನು ಉರುಳಿಸುವ ಮಡೆ ಸ್ನಾನ ಒಂದು ಕೊಳಕು ಆಚರಣೆ. ಕೊಳಕು ಆಚರಣೆಗೆ ಜನ ಬೆಂಬಲ ಕೊಡಬಾರದು. ಮಡೆಸ್ನಾನದಿಂದ ಚರ್ಮರೋಗವಾಗಲಿ ಇನ್ನಿತರ ರೋಗಗಳಾಗಲಿ ವಾಸಿಯಾಗುವುದು ಸುಳ್ಳು. ಇದರಿಂದ ಅಂಟು ರೋಗ ಬರುವುದಲ್ಲದೆ ಇದೊಂದು ಅನಿಷ್ಟ ಪದ್ಧತಿಯಾಗಿದೆ' ಎಂದರು.

ಮಡೆಸ್ನಾನದಂತಹ ಅಂಧ ಆಚರಣೆಗಳಲ್ಲಿ ಶೂದ್ರರು ಹೆಚ್ಚಿನ ಸಂಖ್ಯೆಯಲ್ಲಿ ಸಿಲುಕಿದ್ದಾರೆ. ಧಾರ್ಮಿಕ ಕೇಂದ್ರಗಳ ಆದಾಯದ ಮೂಲವೂ ಶೂದ್ರರೇ ಆಗಿದ್ದಾರೆ. ಕು–ಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ವಾರ್ಷಿಕ ಆದಾಯ 62 ಕೋಟಿ ರೂಪಾಯಿಗೂ ಹೆಚ್ಚು ವಾಸ್ತು, ಜ್ಯೋತಿಷಿಗಳ ಹಾವಳಿಗೂ ಯವೇ ಮೂಲ ಕಾರಣವಾಗಿದೆ. ಅಂಧ ಆಚರಣೆಗಳಿಗೆ ಸಂವಿಧಾನ, ಧರ್ಮ, ಅಧ್ಯಾತ್ಮ, ವೇದ, ಉಪನಿಷತ್ತುಗಳಲ್ಲಿ ಮಾನ್ಯತೆ ಇಲ್ಲ. ಪಂಚಮ ಸೂತಕಗಳಲ್ಲಿ ಎಂಜಲು ಕೂಡ ಒಂದು ಸೂತಕ. ವರ್ಣ ಶ್ರೇಷ್ಠತೆಯ ವ್ಯಸನಿಗಳಿಂದಲೇ ಮಡೆಸ್ನಾನದಂತಹ ಆಚರಣೆ ಸಂಭವಿಸಿದೆ ಎಂದೂ ನಿಡುಮಾಮಿಡಿ ಸ್ವಾಮೀಜಿ ತಿಳಿಸಿದರು.

ಶೂದ್ರ ಸಮುದಾಯದವರ ಆಹಾರ ಪದ್ಧತಿ ಕಾರಣ ಮುಂದಿಟ್ಟು ಪೇಜಾವರ ಸ್ವಾಮೀಜಿ ಅವರು ಪಂಕ್ತಿಭೇದ ಸಮರ್ಥಿಸಿಕೊಳ್ಳುತ್ತಿದ್ದಾರೆ. ಆದ–ರೆ ಬ್ರಾಹ್ಮಣರಲ್ಲಿ ಕೆಲವರು ಮಾಂಸಹಾರ ಸೇವಿಸುತ್ತಾರೆ. ನೇಪಾಳಿ, ಬಂಗಾಳಿ, ದೈವಜ್ಞ, ಗೌಡಸಾರಸ್ವತ ಬ್ರಾಹ್ಮಣರು ಮಾಂಸಾಹಾರಿಗಳು. ಇವರನ್ನೂ ಪಂಕ್ತಿಭೇದಕ್ಕೆ ಒಳಪಡಿಸುತ್ತಾರೆಯೇ? ಎಂದು ಪ್ರಶ್ನಿಸಿದ ನಿಡುಮಾಮಿಡಿ ಸ್ವಾಮೀಜಿಗಳು ಸಹಪಂಕ್ತಿಯಲ್ಲಿ ಶಾಖಾಹಾರ ಸೇವನೆ ಮಾಡುವಾಗ ಯಾಕೆ ಪಂಕ್ತಿಬೇಧ? ಅಲ್ಲಿ ಯಾರೂ ಮಾಂಸಾಹಾರವನ್ನು ಭಕ್ಷಿಸುವುದಿಲ್ಲವಲ್ಲ !! ಎಂದು ಪ್ರಶ್ನಿಸಿದರು. ಮುಂದುವರಿದು ಮಾತನಾಡಿದ ಸ್ವಾಮಿಗಳು ಕೇವಲ ಮಾಂಸಾಹಾರವನ್ನು ನೆಪವಾಗಿ ತೆಗೆದುಕೊಂಡು ಕನಿಷ್ಠ ಶ್ರೇಷ್ಠ ಎಂಬ ವಿಚಾರವನ್ನು ಅವರು ಹೇರುತ್ತಿದ್ದಾರೆ ಎಂದು ಖೇದ ವ್ಯಕ್ತಪಡಿಸಿದರು. ಹಿಂದೆ ಋಷಿ ಮುನಿಗಳು ಮನೆಗೆ ಆಗಮಿಸಿದಾಗ ಎಳೆಗರುವಿನ ಮಾಂಸ ಬೇಯಿಸಿ ಅತಿಥಿ ಸತ್ಕಾರ ಮಾಡುವ ಪದ್ಧತಿ ಜಾರಿಯಲ್ಲಿ ಇತ್ತು. ಎಲ್ಲ ಋಷಿ ಮುನಿಗಳು ಗೋಭಕ್ಷಕರಾಗಿದ್ದರು. ಕೆಲವೊಮ್ಮೆ ಅತಿಥಿಗಳೇ ಗೋವುಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಸ್ವತಃ ಶ್ರೀರಾಮನೇ ಗೋ ಮಾಂಸ ಭಕ್ಷಕನಾಗಿದ್ದ. ಬೌದ್ಧ ಧರ್ಮದ ಮೇಲುಗ್ಗೈ ಸಹಿಸದ ಬ್ರಾಹ್ಮಣರು ತಮ್ಮ ವೈದಿಕ ಧರ್ಮದ ಉಳಿವಿಗೋಸ್ಕರ ಮಾಂಸಹಾರ ತ್ಯಜಿಸಿದರು. ಆದರೆ ಇಂದು ಬ್ರಾಹ್ಮಣರು ತಾವೇ ಶಾಖಾಹಾರದ ನೇತಾರರು ಎಂದು ವಿಜೃಂಬಿಸುತ್ತಿದ್ದಾರೆ. ದಲಿತರ ಉದ್ಧಾರದ ಬಗ್ಗೆ ಮಾತನಾಡುವ



ಪೇಜಾವರ ಸ್ವಾಮೀಜಿ ದಲಿತರ ಮನೆಯಲ್ಲಿ ಊಟ ಮಾಡಿದ ದಿನ ಭಾರತ ಬದಲಾವಣೆಗೆ ತೆರೆದುಕೊಳ್ಳಲಿದೆ. ಹಾವೂ ಸಾಯಬಾರದು ಕೋಲೂ ಮುರಿಯಬಾರದು ಎಂಬಂತೆ ಮಾತನಾಡುವ ಅವರು ಮಡೆಸ್ನಾನ ನಿಷೇಧದ ಕುರಿತು ದೃಢವಾದ ನಿಲುವು ತಳೆಯಬೇಕು. ಎಂದು ನಿಡುಮಾಮಿಡಿ ಸ್ವಾಮೀಜಿಯವರು ಒತ್ತಾಯಿಸಿದರು.

ಮಡೆಸ್ನಾನ ಪಂಕ್ತಿಬೇಧದಂತಹ ಸಾಮಾಜಿಕ ಅನಿಷ್ಟಗಳ ವಿರುದ್ಧ ಯಾವ ರಾಜಕೀಯ ಪಕ್ಷಗಳು ಸ್ಪಂದಿಸುವುದಿಲ್ಲ. ಅವು ಕೇವಲ ಓಟ್‌ಬ್ಯಾಂಕನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತವೆ. ಆದರೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಈ ಪ್ರಶ್ನೆಗಳನ್ನು ಮೂಂಚೂಣಿ ಪ್ರಶ್ನೆಯಾಗಿ ತೆಗೆದು ಕೊಂಡಿರುವುದು ಸಂತಸದ ವಿಚಾರವಾಗಿದೆ. ಮಲೆ ಕುಡಿಯರನ್ನು ಹೆಚ್ಚು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಅಲ್ಲದೆ ಇದು ಕೆಲ ಸ್ವಾಮಿಜಿಗಳ ಹಾಗೂ ಪ್ರಗತಿಪರರ ನಿಲುವೂ ಆಗಿದೆ ಎಂದು ಅವರು ಹೇಳಿದರು.

'ಧರ್ಮಶಾಸ್ತ್ರಗಳ ಮನ್ನಣೆ ಇದ್ದರೂ ಅಂಧ ಆಚರಣೆಗಳನ್ನು ವಿರೋಧಿಸಿ'
– ಸಾಣೆಹಳ್ಳಿ ಶ್ರೀ ಶಿವಾಚಾರ್ಯ ಸ್ವಾಮೀಜಿ

ಸಾಣೆಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರು ಈ ಸಂದರ್ಭದಲ್ಲಿ ಮಾತನಾಡಿ "ಜಾತಿ ಮತ 12 ನೇ ಶತಮಾನದ ಪೂರ್ವದಲ್ಲಿಯೂ ಇದ್ದವು. ಆಗ ಶರಣರು ಅದನ್ನು ವಿರೋಧಿಸಿದ್ದರು. ಪ್ರಗತಿಪರರು ಎಂದು ಹೇಳಿಕೊಂಡ ರಾಜಕೀಯ ನಾಯಕರು ವಿಧಾನ ಸಭೆಯಲ್ಲಿ ವಾಸ್ತು ನೋಡಿ ಕಚೇರಿಗೆ ಬಂದಿದ್ದು ಇತ್ತೀಚೆಗೆ ನಡೆದಿದೆ. ಹಿಂದೆ ದಾವಣಗೆರೆಯ ಎಂಎಲ್‌ಎ ತಿಪ್ಪೇಸ್ವಾಮಿಯವರು ಮುಜರಾಯಿ ಇಲಾಖೆಯ ದೇವಸ್ಥಾನಗಳಲ್ಲಿ ದಲಿತರನ್ನು ಪೂಜಾರಿ ಕೆಲಸಕ್ಕೆ ನೇಮಿಸಬೇಕು ಎಂದು ಒತ್ತಾಯಿಸಿದ್ದರು. ಆದರೆ ಇಂದು ಈ ರೀತಿ ಪ್ರಶ್ನೆ ಮಾಡುವವರೇ ಇಲ್ಲ. ನಿತ್ಯ ಮಾಧ್ಯಮಗಳಲ್ಲಿ ಮೌಢ್ಯಗಳನ್ನು ಬಿತ್ತರಿಸಲಾಗುತ್ತಿದೆ. ಅದನ್ನು ವಿರೋಧಿಸಬೇಕಾಗಿದೆ ಎಂದು ಅವರು ಹೇಳಿದರು.

ಮಡೆಸ್ನಾನಕ್ಕೆ ಧರ್ಮದಲ್ಲಿ ಸ್ಥಾನವಿಲ್ಲ. ಒಂದು ವೇಳೆ ಮಾನವೀಯ ಮೌಲ್ಯಗಳಿಗೆ ವಿರುದ್ಧವಾದ ಅಂಧ ಆಚರಣೆಗಳಿಗೆ ಧರ್ಮ, ಶಾಸ್ತ್ರಗಳಲ್ಲಿ ಮನ್ನಣೆ ನೀಡಿದ್ದರೂ ಅದನ್ನು ವಿರೋಧಿಸಬೇಕು. ಅಂ ಧ ಆಚರಣೆಗಳನ್ನು ಅನುಸರಿಸುತ್ತಿರುವ ಧಾರ್ಮಿಕ ಕೇಂದ್ರಗಳಿಗೆ ಅನುದಾನ ಕಡಿತ ಮಾಡುವ ದಿಟ್ಟ ನಿಲುವನ್ನು ಸರ್ಕಾರ ತೆಗೆದುಕೊಳ್ಳಬೇಕು' ಎಂದೂ ಸಾಣೆಹಳ್ಳಿ ಸ್ವಾಮಿಗಳು ಒತ್ತಾಯಿಸಿದರು.

'ಜಂಗಮರ ಪಾದ ಪೂಜೆಯೂ ಮಡೆಸ್ನಾನದಷ್ಟೇ ಅನಿಷ್ಟ'– ಪ್ರೊ. ಚಂಪಾ

ಉಡುಪಿಯ ಶ್ರೀ ಕೃಷ್ಣ ದೇವಾಲಯವನ್ನು ಪುನಃ ಮುಜುರಾಯಿ ಇಲಾಖೆಗೆ ತೆ–ಗೆದು ಕೊಳ್ಳುವುದರ ಬಗ್ಗೆ ಚಿಂತಿಸುವುದಾಗಿ ಮುಖ್ಯಮಂತ್ರಿ ಹೇಳಿದಾಗ ವಿರೋ ಧ ಬಂದಿದ್ದೇ ಕಾಂಗ್ರೆಸ್‌ನವರಿಂದ. ಕಾಂಗ್ರೆಸ್ ಒಂದು 'ಮಠ'ದಂತಾಗಿದೆ. ಎಂದು ವಿಮರ್ಶಿಸುತ್ತಾ ಮಾತನ್ನಾರಂಭಿಸಿದ ಹಿರಿಯ ಸಾಹಿತಿ ಪ್ರೊ. ಚಂಪಾರವರು ಮಡೆಸ್ನಾನ, ಪಂಕ್ತಿಬೇಧದ ಆಚರಣೆಗಳನ್ನು ತೀವ್ರವಾಗಿ ಟೀಕಿಸಿದರು. ಇಂತಹ ಆಚರಣೆಗಳು ಎಲ್ಲಿದ್ದರೂ ಮಾನ್ಯವಲ್ಲ.

ಜಂಗಮರ ಪಾದ ಪೂಜೆಯ ನೀರನ್ನು ಮನೆಯೊಳಗೆಲ್ಲಾ ಸಿಂಪಡಿಸುವುದು ಮತ್ತು ಸೇವಿಸುವ ಪದ್ಧತಿ ಇಂದಿಗೂ ಜಾರಿಯಲ್ಲಿದೆ. ಆ ನೀರಿನ ಸಿಂಪರಣೆ ಇದು ಅನಿಷ್ಟ ಪದ್ಧತಿ. ಎಂದು ಪ್ರೊ. ಚಂದ್ರಶೇಖರ ಪಾಟೀಲ ಅವರು ಅಭಿಪ್ರಾಯಪಟ್ಟರು.

'ಎಲ್ಲ ಬಗೆಯ ಮೌಢ್ಯ ಮೂಢನಂಬಿಕೆಗಳ ವಿರುದ್ಧ ಸಾಗಲಿ ಚಳುವಳಿ'
– ಪ್ರೊ. ಕೆ.ಮರುಳಸಿದ್ದಪ್ಪ

ಪ್ರೊ.ಕೆ.ಮರುಳಸಿದ್ದಪ್ಪ ಮಾತನಾಡಿ, 'ಪುರೋಹಿತರು–ಪುರೋಹಿತಶಾಹಿ ಕೇವಲ ಒಂದು ಜಾತಿಗೆ ಸೀಮಿತವಾಗಿರದೆ ಎಲ್ಲ ಜಾತಿಗಳಲ್ಲಿ ಇದ್ದಾರೆ. ಜನರನ್ನು ಮೌಢ್ಯಗಳಲ್ಲಿ ಸಿಲುಕಿಸಲು ಕಾರಣರಾಗಿದ್ದಾರೆ. ಕೇವಲ ಮಡೆಸ್ನಾನ, ಪಂಕ್ತಿಭೇದವಲ್ಲದೆ ಎಲ್ಲ ಜಾತಿ, ಧರ್ಮಗಳಲ್ಲಿ ಇರುವ ಅಂಧ ಆಚರಣೆಗಳ ವಿರುದ್ಧ ಹೋರಾಟ ರೂಪಿಸಬೇಕಿದೆ. ಇಲ್ಲದಿದ್ದಲ್ಲಿ ಈ ಹೋರಾಟಕ್ಕೆ 'ಬ್ರಾಹ್ಮಣ ವಿರೋಧಿ' ಹೋರಾಟ ಎಂಬ ಹಣೆಪಟ್ಟಿ ಬರಲಿದೆ' ಈ ನಿಟ್ಟಿನಲ್ಲಿ ಸಮಾಜದ

ಪುಟ 15 ಕ್ಕೆ

ಚಿಂತನ – ಮಂಥನವಾದ ವಿಚಾರಗೋಷ್ಠಿ

"ಗುಲಾಮಗಿರಿಯನ್ನು ಗುಲಾಮರೇ ಒಪ್ಪಿಕೊಂಡರೂ ಅದು ಅನೈತಿಕ" – ಪ್ರೊ.ಟಿ.ಆರ್. ಚಂದ್ರಶೇಖರ್

'ಮಡೆಸ್ನಾನ ಮತ್ತು ಅಂಧಶ್ರದ್ಧೆ' ಎಂಬ ವಿಷಯದ ಕುರಿತು ಊಟದ ವಿರಾಮದ ನಂತರ ಗೋಷ್ಠಿ ನಡೆಯಿತು.




ಹಂಪಿ ಕನ್ನಡ ವಿಶ್ವ ವಿದ್ಯಾಲಯದ ಪ್ರೊ. ಟಿ.ಆರ್. ಚಂದ್ರಶೇಖರ್‌ರವರು ವಿಷಯ ಮಂಡಿಸಿದರು.

ಮಡೆಸ್ನಾನ ಸ್ವಯಂ ಪ್ರೇರಿತ, ಅದನ್ನು ಆಚರಿಸಲು ಜನರು ಸ್ವತಂತ್ರರು. ಅದರಲ್ಲಿ ಬಲವಂತ ಇಲ್ಲ. ಜುಲುಮೆ ಇಲ್ಲ ಎಂಬ ವಾದದ ಕುರಿತು ಮಾತನಾಡಿದ ಅವರು 'ಸ್ವತಂತ್ರರು' ಎಂಬುದನ್ನು ಅರ್ಥೈಸುವ ಕ್ರಮದ ಕುರಿತು ಗಂಭೀರ ತಕರಾರುಗಳನ್ನೆತ್ತಿದರು. ನಾವು ಸ್ವಾತಂತ್ರ್ಯದಿಂದ ಏನು ಮಾಡಬಲ್ಲೆವು ? ಹಸಿವು ಬಡತನದಿಂದ ಬಿಡುಗಡೆಗೊಳಿಸಿಕೊಳ್ಳಬಲ್ಲೆವಾ ಎಂಬುದು ಮುಖ್ಯ. ಶಿಕ್ಷಣ, ಆರ್ಥಿಕ ಸ್ವಾವಂಲಬನೆ ಇಲ್ಲದ ಜನರು ಮಡೆಸ್ನಾನ ಆಚರಿಸುವುದನ್ನು ಸ್ವಾತಂತ್ರ್ಯ ಎನ್ನಲಾಗದು.'ಗುಲಾಮಗಿರಿಯನ್ನು ಗುಲಾಮರೇ ಒಪ್ಪಿಕೊಂಡರೂ ಅದು ಅನೈತಿಕ ಅದನ್ನು ಮುಂದುವರಿಸಬಾರದು' ಎಂಬ ಅರ್ಥಶಾಸ್ತ್ರಜ್ಞ ಜೆ. ಎಸ್. ಮಿಲ್ ಹೇಳಿಕೆಯನ್ನು ಚಂದ್ರಶೇಖರ್ ನೆನಪಿಸಿದರು. ಮಡೆಸ್ನಾನದಂತಹ ಆಚರಣೆಗಳು ಕೇವಲ ಮೂಢನಂಬಿಕೆಗಳಲ್ಲ. ಈ ಆಚರಣೆಗಳ ಮೂಲ ತಳಹದಿ ಜಾತಿ ತಾರತಮ್ಯ ಮತ್ತು ಶೋಷಣೆ ಎಂದೂ ಅವರು ವಿವರಿಸಿದರು. ವಿಧಿ, ದೈವ ನಿಯಮಕವಾದಗಳ ಮೂಲಕ ಈ ಶೋಷಕ ಪದ್ಧತಿಗಳನ್ನು ಮುಂದುವರಿಸಲಾಗುತ್ತಿದೆ ಎಂದೂ ಚಂದ್ರಶೇಖರ್‌ರವರು ವಿಷಾದಿಸಿದರು.

ಮಡೆಸ್ನಾನ ಸಮರ್ಥಿಸುವುದು ಮಾನಸಿಕ ಕುಷ್ಠರೋಗ– ಡಾ. ಜಿ. ರಾಮಕೃಷ್ಣ

ಮಡೆಸ್ನಾನವನ್ನು ಸಮರ್ಥಿಸುವವರು ಮಾನಸಿಕ ಕುಷ್ಠ ರೋಗದಿಂದ ನರಳುತ್ತಿದ್ದಾರೆ. ಅಂತಹವರನ್ನೇ ಉರುಳಾಡಿಸಬೇಕು ಎನ್ನುವ ಮೂಲಕ ಮಡೆಸ್ನಾನದಂತಹ ಅನಿಷ್ಟ ಪದ್ಧತಿಯ ವಿರುದ್ಧ ತಮ್ಮ ಆಕ್ರೋಶ ವ್ಯಕ್ತಪಡಿಸಿದ ಡಾ. ಜಿ. ರಾಮಕೃಷ್ಣ ಅವರು ಹಲವಾರು ಉದಾಹರಣೆಗಳ ಮೂಲಕ ವಿಶ್ಲೇಷಿಸಿದರು. ಧಿಕ್ಕರಿಸಲು ಮಾತ್ರವೇ ಯೋಗ್ಯವಾದ ಇಂತಹ ವಾದಗಳ ವಿರುದ್ಧ ಮತ್ತು ಪದ್ಧತಿಗಳ ವಿರುದ್ಧ ಸಂಘಟಿ-ತ ಹೋರಾಟ ನಡೆಯಬೇಕು ಎಂದು ಆಶಿಸಿದರು.

ಬರಹಗಾರ 'ಆದಿಮ'ದ ಶ್ರೀಪಾದ್ ಭಟ್ ಅವರು ಮಾತನಾಡಿ ಕುಕ್ಕೆಯ ಮಡೆಸ್ನಾನದ



ಕುರಿತು ಪ್ರತಿಭಟನೆಗಳು ಮತ್ತು ಮಾಧ್ಯಮಗಳಲ್ಲಿ ಚರ್ಚೆ ಪ್ರಚಾರಗಳು ಹೆಚ್ಚಾದ ಕೂಡಲೆ ಕನ್ನಡದ ಪತ್ರಿಕೆಯೊಂದು ತುಮಕೂರಿನ ಹಳ್ಳಿಯಲ್ಲಿ ದಲಿತರು ಉಂಡು ಬಿಟ್ಟ ಎಲೆಯ ಮೇಲೆ ಎಲ್ಲರೂ ಉರುಳಾಡುವ ಪದ್ಧತಿ ಇದೆ ಎಂದು ದೊಡ್ಡ ಸುದ್ದಿ ಮಾಡಲು ಯತ್ನಿಸಿತು. ಇದು ಮಡೆಸ್ನಾನದ ಕ್ರೌರ್ಯವನ್ನು ಮಸುಕು ಮಾಡುವ ಹುನ್ನಾರ ಎಂದು ಹೇಳಿದರು.

ಯುವ ಹೋರಾಟಗಾರ ವಿಠಲ ಮಲೆಕುಡಿಯ ಮಾತನಾಡಿ ಮಲೆ ಕುಡಿಯರು ಶಿಕ್ಷಣ ಸಿಗದ ಪರಿಸ್ಥಿತಿಯಲ್ಲಿದ್ದಾರೆ. ಹಲವಾರು ಅಡ್ಡಿ, ಆತಂಕಗಳ ನಡುವೆ ಬದುಕು ಸಾಗಿಸುತ್ತಿದ್ದಾರೆ. ಜೀತದಾಳಿನಂತೆ ಕೆಲಸ ಕಾರ್ಯ ನಿರ್ವಹಿಸುತ್ತಿದ್ದಾರೆ. ಇಂದು ಮಲೆಕುಡಿಯ ಸಂಸ್ಕೃತಿ ಉಳಿದಿಲ್ಲ. ಅದನ್ನು ಉಳಿಸಿಕೊಳ್ಳುವಂತಹ ಜಾಗೃತಿ ಮತ್ತು ಶಿಕ್ಷಣ ಅವರಿಗೆ ಇರಲಿಲ್ಲ. ಆದರೆ ಅವರು ಇಂದು ಜಾಗೃತರಾಗುತ್ತಿದ್ದಾರೆ ಎಂದರು. ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಕೆ. ಪ್ರಕಾಶ್‌ರವರು ಮಾತನಾಡಿ ಜನರಲ್ಲಿ ಮೂಢ ನಂಬಿಕೆಗಳನ್ನು ಬಿತ್ತಿ, ಪುಕ್ಕ-ಟೆ ಧಾರ್ಮಿಕ ಪ್ರವಾಸಗಳನ್ನು ಏರ್ಪಡಿಸಿ ರಾಜಕೀಯ ದುರ್ಲಾಭ ಮಾಡಿಕೊಳ್ಳುವ ಪ್ರವೃತ್ತಿ ಹೆಚ್ಚುತ್ತಿರುವ ಬಗೆಗೆ ಆತಂಕ ವ್ಯಕ್ತಪಡಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಖ್ಯಾತ ವೈದ್ಯೆ ಡಾ.ವಸುಂಧರಾ ಭೂಪತಿಯವರು ಮಾತನಾಡಿ 'ತಿರುಪತಿ ಲಾಡು ರುಚಿಗೆ ಬಹಳ ಖ್ಯಾತಿ ಪಡೆದಿದೆ. ಆದರೆ ಅದರಲ್ಲಿ ಸೀಸ ಅಪಾಯಕಾರಿ ಪ್ರಮಾಣದಲ್ಲಿದೆ' ಎಂದು ಸಂಶೋಧನೆಗಳು ಹೇಳುತ್ತಿವೆ. ಈ ಬಗ್ಗೆ ಯಾರೂ ಹೆಚ್ಚು ಗಮನ ನೀಡುತ್ತಿಲ್ಲ. ಇನ್ನು ಉಂಡ ಎಂಜಲ ಎಲೆಯ ಮೇಲೆ ಉರುಳಾಡಿದರೆ ನಾನಾ ಖಾಯಿಲೆಗಳು ಬರುವುದು ಖಾತ್ರಿ ಎಂದು ಎಚ್ಚರಿಸಿದರು. ಮಡೆಸ್ನಾನ-ಪಂಕ್ತಿಬೇಧದಂತಹ ಅನಿಷ್ಟಗಳನ್ನು ವೈಚಾರಿಕತೆ ಮತ್ತು ವೈಜ್ಞಾನಿಕ ವಿಚಾರಗಳ ಮೂಲಕ ಎದುರಿಸಬೇಕಾಗಿದೆ ಎಂದು ಪ್ರತಿಪಾದಿಸಿದರು. ಗೋಷ್ಠಿಯ ಆರಂಭದಲ್ಲಿ ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಬಿ. ರಾಜಶೇಖರ ಮೂರ್ತಿ ಸ್ವಾಗತಿಸಿ ಕಾರ್ಯಕ್ರಮ ಸಂಯೋಜಿಸಿದರು. ಸಿಪಿಐ(ಎಂ) ಗ್ರಾಮಾಂತರ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಚಂದ್ರ ತೇಜಸ್ವಿ ವಂದಿಸಿದರು.

ಸಮಾರೋಪ

'ಮಡೆಸ್ನಾನ ಶಿಕ್ಷೆಯ ವಿಧಾನ

– ಪ್ರೊ.ಎಸ್.ಜಿ. ಸಿದ್ಧರಾಮ

ನಾವು ಇಂದು ಎಂಜಲೆಲೆ ಮೇ
ಉರುಳಾಡುವವರಿಗಿಂತ ಉಂ
ಉರುಳಾಡಲು ಎಂಜಲೆಲೆ ಬಿಟ್ಟು ಬರು
ಬಗೆಗೆ, ಅವರ ಮನಸ್ಥಿತಿ ಬಗೆಗೆ
ಮಾತನಾಡಬೇಕಿದೆ ಎಂದು ಪು
ಪ್ರಾಧಿಕಾರದ ಮಾಜಿ ಅಧ್ಯಕ್ಷ ಪ್ರೊ.ಎಸ್.
ಸಿದ್ಧರಾಮಯ್ಯ ಪ್ರತಿಪಾದಿಸಿದರು.

ಸುಬ್ರಮಣ್ಯ ವೈದಿಕ ದೇವರಲ್ಲ. ಮೂಲ
ಕುಕ್ಕೆ ಸುಬ್ರಮಣ್ಯ ಅಂದರೆ ಷಣ್ಮುಖ ದ್ರಾವಿ
ಮೂಲದ ಬುಡಕಟ್ಟು ದೈವ. ನಾಗರಾಧ
ಬುಡಕಟ್ಟು ಜನರ ಆಚರಣೆ. ಕುಕ್ಕೆ ಎಂದ
ಬಿದಿರು. ಅದು ಬುಡಕಟ್ಟು ಜನರ ಬಳ
ವಸ್ತು. ಇಲ್ಲಿ ಸಾಂಸ್ಕೃತಿಕ, ಧಾರ್ಮಿಕ ಆಕ್ರಮ
ಇದೆ. ಮಡೆಸ್ನಾನ ಎಂಬುದು ಒಂದು ಶಿ
ವಿಧಾನ. ವಶಪಡಿಸಿಕೊಂಡವರು ಕೊಟ್ಟ ಶಿ
ಮಾರಿಹಬ್ಬಕ್ಕೂ ಇದಕ್ಕೂ ಹೆಚ್ಚಿನ ವ್ಯತ್ಯಾಸವಿ
ಪ್ರತಿಲೋಮ ವಿವಾಹಕ್ಕೆ ಕೊಟ್ಟ ಶಿ
ಮಾರಿಹಬ್ಬದಲ್ಲಿ ಕೋಣನ ಬಲಿ. ಬುಡಕಟ
ಮತ್ತು ಜನಪದ ಸಂಸ್ಕೃತಿಯಲ್ಲಿ ಹಂ
ಉಣ್ಣುವ ಕ್ರಮ ಇದೆ. ಮದುವೆಯಾಗದ
ತಾಯಿಯಾದವಳನ್ನು 'ಕನ್ಯಾಮಾತೆ' ಎಂದ
ಕರೆಯಲಾಗುತ್ತಿತ್ತು. ಗಂಡ ಸತ್ತ ನಂತರ ಹೆಣ
ಮರುಮದುವೆಯಾದರೆ ಅದನ್ನು 'ಸೀರುಡಿ
ಮದುವೆ' ಎಂದು ಕರೆಯಲಾಗುತ್ತಿತ್ತು. ಅದ
ಜನಪರ ಮಾತ್ರವಲ್ಲ. ಜೀವಪರವೂ ಕೂ
ಹೌದು. ನಿಸರ್ಗ ತತ್ವದೊಳಗೆ ಬದುಕು ಕಟ್ಟಿ
ಕೊಂಡದ್ದು ಬುಡಕಟ್ಟು ಸಂಸ್ಕೃತಿ. ಎಂದ
ಸಿದ್ಧರಾಮಯ್ಯ ವಿಶ್ಲೇಷಿಸಿದರು.

ದೀಪದ ಕೆಳಗೆ ಕತ್ತಲು

ಕರಾವಳಿಯ ಜನರು ಮೀನ
ತಿನ್ನುವುದರಿಂದ ಬುದ್ದಿವಂತರಾಗಿದ್ದಾರೆಂದ
ಹೇಳಲಾಗುತ್ತದೆ. ಕರಾವಳಿಯ ಜನರ
ಬುದ್ಧಿವಂತರಾಗಿರುವುದು ಆ ಭಾಗದ
ಬಹಳ ಹಿಂದೆಯೇ ಕ್ರಿಶ್ಚಿಯನ್ ಶಾಲೆಗಳ
ಆರಂಭವಾಗಿ ಶಿಕ್ಷಣ ಹರಡಿದ್ದರಿಂದ. ದೀಪ
ಕೆಳಗೆ ಕತ್ತಲು ಎನ್ನುವಂತೆ ಕರಾವಳಿಯ
ಭಾಗದಲ್ಲಿ ಮಡೆಸ್ನಾನ–ಪಂಕ್ತಿಬೇಧಗಳ
ಈಗಲೂ ಮುಂದುವರಿದಿರುವುದ
ವಿಷಾದನೀಯ ಎಂದು ಸಮಾರೋ
ಸಮಾರಂಭದಲ್ಲಿ ಆಶಯ ಭಾಷ
ಮಾಡಿದ ಶ್ರೀ ಬಸವ ಜಯಮೃತ್ಯುಂ
ಸ್ವಾಮೀಜಿಯವರು ಹೇಳಿದರು.


ಅಡ್ಡಪಲ್ಲಕ್ಕಿ ಸೇರಿದಂತೆ ಮೂ
ನಂಬಿಕೆ, ಅಂಧಶ್ರದ್ಧೆಗಳನ್ನು ಎಲ್ಲರು
ವಿರೋಧಿಸಬೇಕು. ಸಿಪಿಐ(ಎಂ) ಈ ನಿಟ್ಟಿನ
ಇತರೆಲ್ಲ ಪಕ್ಷಗಳಿಗಿಂತ ಭಿನ್ನವಾಗಿರುವು
ಅಭಿನಂದನೀಯ ಎಂದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ
ಮಂಡಳಿ ಸದಸ್ಯ ಯು. ಬಸವರಾಜ ಅವ
ಸಮಾರೋಪ ಸಮಾರಂಭದ ಅಧ್ಯಕ್ಷ
ವಹಿಸಿದ್ದರು. ಸಮಾವೇಶದಲ್ಲಿ ಮಂಡಿತವಾ
ಪ್ರಖರ ವಿಚಾರ, ವಿಶ್ಲೇಷಣೆಗಳ
ಸ್ವಾಗತಿಸಿದ ಅವರು ಮಡೆಸ್ನಾನ
ಪಂಕ್ತಿಬೇಧ ಅಂಧಶ್ರದ್ಧೆಗಳ ವಿರುದ್ಧ
ಮುಂದಿನ ಹಂತದ ನಿರ್ದಿಷ್ಟ ಹೋರಾಟದ
ಜನಪರವಾಗಿ ಚಿಂತಿಸುವ ಎಲ್ಲರ
ಭಾಗವಹಿಸಿ ಚಳುವಳಿಯನ್ನು ವಿಶಾಲಗೊ
ಬಲಪಡಿಸಬೇಕೆಂದು ವಿನಂತಿಸಿದರು.

ಸಿಪಿಐ(ಎಂ) ರಾಜ್ಯ ಕಾಯ
ಪುಟ್ಟಮಾದು ಆರಂಭದಲ್ಲಿ ಸ್ವಾಗ
ಸಂಯೋಜಿಸಿದರು. ವಿಮಾಸಂಗ
ನಾಗರಾಜು ಅವರು ವಂದಿಸಿದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಪಶ್ಚಿಮ ಬಂಗಾಳದಲ್ಲಿ ಎಡರಂಗ ಸಂಪೂರ್ಣ ನೆಲಕಚ್ಚಿಬಿಟ್ಟಿದೆಯೇ?



ಪಶ್ಚಿಮ ಬಂಗಾಳ ಪಂಚಾಯತ್ ಚುನಾವಣೆಗಳನ್ನು ಮುಕ್ತವಾಗಿ ಹಾಗೂ ಶಾಂತಿಯುತವಾಗಿ ನಡೆಸಲು ಆಗ್ರಹಿಸಿ ಸಿಪಿಐ(ಎಂ) ಪ್ರದರ್ಶನ.

ಇತ್ತೀಚಿನ ಪಶ್ಚಿಮ ಬಂಗಾಳದ ಪಂಚಾಯತ್ ಚುನಾವಣೆಗಳಲ್ಲಿ ಸಿಪಿಐ(ಎಂ) ಮತ್ತು ಎಡರಂಗವು ಸಂಪೂರ್ಣವಾಗಿ ನೆಲಕಚ್ಚಿ ಬಿಟ್ಟಿದೆ, ತೃಣಮೂಲ ಕಾಂಗ್ರೆಸ್ ಪಕ್ಷವು ಅಭೂತ ಪೂರ್ವ ಗೆಲುವು ಸಾಧಿಸಿ ಜನಮನ್ನಣೆ ಗಳಿಸಿ ಬಿಟ್ಟಿದೆ ಎಂದು ವ್ಯಾಪಕವಾಗಿ ಪ್ರಚಾರಗಳು ನಡೆದವು. ಪ್ರಜಾಪ್ರಭುತ್ವ ವಿರೋಧಿ, ಕಮ್ಯೂನಿಸ್ಟ್ ವಿರೋಧಿಗಳು ಇಂತಹ ಪ್ರಚಾರದಲ್ಲೇ ಎಲ್ಲಿಲ್ಲದಂತೆ ಸಂತಸಪಟ್ಟರು. ತೃಣಮೂಲ ಕಾಂಗ್ರೆಸ್ ಕೂಡ ಅಂತಹ ಗೆಲುವು ಸಾಧಿಸಿರುವುದಾಗಿ ತಾನೇ ಡಂಗೂರ ಸಾರಿಕೊಂಡಿತು.

ಆದರೆ ಚುನಾವಣಾ ಫಲಿತಾಂಶಗಳ ಹೆಚ್ಚಿನ ವಿವರಗಳು ಸಿಗುತ್ತಾ ಬಂದಂತೆ ನಮಗೆ ಸಿಗುತ್ತಿರುವ ಚಿತ್ರ ಕಮ್ಯೂನಿಸ್ಟರನ್ನು ಸದೆ ಬಡಿದಿದ್ದೇವೆಂದು ಬೀಗುವವರಿಗೂ ತುಂಬಾ ಸಂತೋಷಕರವಾಗೇನೂ ಇಲ್ಲ ಎಂದು ಹೇಳುತ್ತಿದೆ.

ಪಕ್ಷಗಳು	ಸಿಪಿಐ(ಎಂ)	ಎಡರಂಗ	ಕಾಂಗ್ರೆಸ್	ತೃಣಮೂಲ ಕಾಂಗ್ರೆಸ್	ಅತಂತ್ರ	ಒಟ್ಟು
ಗ್ರಾಮ ಪಂ. ಸದಸ್ಯರು		**15,593** (32%)	5,506 (11%)	25,077 (51%)		48,800
ಗ್ರಾಮ ಪಂ. ಸಮಿತಿ		**749** (23%)	240 (7.5%)	1812 (56%)	393	3,215
ಬ್ಲಾಕ್ ಪಂ. ಸಮಿತಿ		**68** (26%)	20 (6%)	219 (66%)	20	330
ಜಿಲ್ಲಾ ಪಂ. ಸಮಿತಿ	**182** (22%)	**221** (27%)	79 (9.6%)	531 (64%)		824

ಪ್ರಸಕ್ತ ಪಂಚಾಯತ್ ಚುನಾವಣೆಯಲ್ಲಿ ಸಿಪಿಐ(ಎಂ) ಮತ್ತು ಎಡರಂಗದ ಕಾರ್ಯಕರ್ತರ ಮೇಲೆ ನಡೆದ ಕ್ರೌರ್ಯ, ಹಿಂಸೆ, ದಬ್ಬಾಳಿಕೆಗಳ ವಿವರಗಳನ್ನು ಮತ್ತೆ ಇಲ್ಲಿ ಹೇಳಬೇಕಿಲ್ಲ. ಚುನಾವಣೆಗೂ ಮುಂಚೆ ಸುಮಾರು ನೂರು ಜನ ಕಾರ್ಯಕರ್ತರು, ಮುಖಂಡರನ್ನು ಕೊಂದು ಹಾಕಲಾಯಿತು. ಸು. 6,000 ಕ್ಕೂ ಅಧಿಕ ಎಡರಂಗ ಅಭ್ಯರ್ಥಿಗಳಿಗೆ ನಾಮಪತ್ರಗಳನ್ನೂ ಸಲ್ಲಿಸಲಿಕ್ಕೆ ಬಿಡಲಿಲ್ಲ. ಚುನಾವಣೆಯ ಅವಧಿಯಲ್ಲಿಯೇ 24 ಜನ ಎಡರಂಗ ಸಂಗಾತಿಗಳ ಕಗ್ಗೊಲೆ ನಡೆಸಲಾಯಿತು. 5000 ಕ್ಕೂ ಹೆಚ್ಚು ಮತಗಟ್ಟೆಗಳನ್ನು ವಶಪಡಿಸಿಕೊಂಡು, ಅಕ್ರಮವೆಸಗಲಾಯಿತು. ಪೊಲೀಸ್ ಮತ್ತು ಆಡಳಿತ ಯಂತ್ರದ ನಗ್ನ ದುರ್ಬಳಕೆ ಮಾಡಿಕೊಳ್ಳಲಾಯಿತು. ಒಟ್ಟು ಸುಮಾರು 70% ಸ್ಥಾನಗಳಿಗೆ ಮಾತ್ರ ಎಡರಂಗಕ್ಕೆ ಸ್ಪರ್ಧಿಸಲು ಸಾಧ್ಯವಾಯಿತು. ಮತ ಎಣಿಕೆಯ ಸಮಯದಲ್ಲಿ ಎಡರಂಗದ ಏಜೆಂಟರನ್ನು ಓಡಿಸಿ ಅಕ್ರಮವೆಸಗಲಾಯಿತು. ಎಣಿಕೆ ಪೂರ್ಣಗೊಂಡನಂತರವೂ ಎಡರಂಗ ಜಯಗಳಿಸಿದ ಸ್ಥಾನಗಳಿಗೆ ಮರುಮತದಾನಕ್ಕೆ ಆದೇಶಿಸುವಂತೆ ಚುನಾವಣಾ ಆಯೋಗದ ಮೇಲೆ ಒತ್ತಡ ಹೇರಲಾಯಿತು. ಇಷ್ಟೆಲ್ಲಾ ಮಾಡಿ ಕೂಡ ತೃಣಮೂಲ ಕಾಂಗ್ರೆಸ್ ಗಳಿಸಿರುವ ಗೆಲುವು ಎಂಥದೆಂದು ನೋಡೋಣ.

ಪಶ್ಚಿಮ ಬಂಗಾಳದ ಒಟ್ಟು 48,800 ಗ್ರಾಮ ಪಂಚಾಯತ್ ಸದಸ್ಯರ ಸ್ಥಾನಗಳ ಪೈಕಿ ತೃಣಮೂಲ ಕಾಂಗ್ರೆಸ್ ಗಳಿಸಿರುವುದು 25,077 ಸ್ಥಾನಗಳನ್ನು ಮಾತ್ರ(ಶೇ.51). ಎಡರಂಗ ಗಳಿಸಿರುವುದು 15,593 ಸ್ಥಾನಗಳು. ಅಂದರೆ ಶೇ. 32 ರಷ್ಟು ಸ್ಥಾನಗಳು. ಚುನಾವಣೆ ಮುಕ್ತ ಮತ್ತು ನ್ಯಾಯಸಮ್ಮತವಾಗಿ ನಡೆದಿದ್ದರೆ ಪರಿಸ್ಥಿತಿ ಏನಾಗಿರುತ್ತಿತ್ತು ಎಂದು ಯಾರಾದರೂ ಊಹಿಸಬಹುದು.

ಎಡರಂಗದ ಭದ್ರ ನೆಲೆಗಳಾಗಿದ್ದ ಬರ್ಧಮಾನ್, ಹೂಗ್ಲಿ, ಪಶ್ಚಿಮ ಮೇಟಿನಿಪುರ ಪ್ರದೇಶಗಳಲ್ಲಿ ತೃಣಮೂಲ ಕಾಂಗ್ರೆಸ್ ವ್ಯವಸ್ಥಿತವಾದ ದಾಳಿ ನಡೆಸಿ ಕೃತಕ ಗೆಲುವು ಸಾಧಿಸಿತು. ಆದರೆ ಎಡರಂಗಕ್ಕೆ ಹೆಚ್ಚು ಬಲ ಇಲ್ಲದ ಕಡೆ ಅದು ದಾಳಿ ನಡೆಸದೆ ಇದ್ದುದರಿಂದ ಅಂತಹ ಪ್ರದೇಶಗಳಲ್ಲಿ ಎಡರಂಗಕ್ಕೆ ಅನಿರೀಕ್ಷಿತ ಗೆಲುವು ಪ್ರಾಪ್ತವಾಗಿದೆ.


ರಾಜ್ಯದಲ್ಲಿ ಸುಮಾರು 10,000 ಎಡರಂಗ ಕಾರ್ಯಕರ್ತರನ್ನು ಸುಳ್ಳು ಮೊಕದ್ದಮೆ ದಾಖಲಿಸಿ ಜೈಲಿಗಟ್ಟಲಾಗಿದೆ. ಸುಮಾರು 5,000 ಎಡರಂಗ ಕಾರ್ಯಕರ್ತರನ್ನು ಅವರು ತಮ್ಮ ಮನೆಗಳಲ್ಲಿ ಉಳಿಯಲಾಗದೇ ಊರು ಬಿಟ್ಟು ಹೋಗುವಂತಹ ಭೀತಿಯ ವಾತಾವರಣವನ್ನು ನಿರ್ಮಿಸಲಾಗಿದೆ. ಇಂತಹ ಪರಿಸ್ಥಿತಿ ಎಷ್ಟು ದಿನ ಮುಂದುವರಿಯಬಹುದು ?

ಚುನಾವಣಾ ಫಲಿತಾಂಶ ಖಂಡಿತ ಜನರ ನಿಜವಾದ ಒಲವನ್ನು ಪ್ರತಿನಿಧಿಸುತ್ತಿಲ್ಲ. ಅದು ಫಲಿತಾಂಶದ ಒಂದು ಮುಖ. ಅದರೆ ಅದೇ ಸಮಯದಲ್ಲಿ ಅಧಿಕಾರ ಬಲ, ಹಣಬಲ, ತೋಳ್ಬಲವನ್ನು ಬಳಸಿ ಜನಚಳುವಳಿಯನ್ನು ಬಹಳ ದಿನ ಹತ್ತಿಕ್ಕುವುದು ಕೂಡ ಸಾಧ್ಯವಿಲ್ಲ ಎಂದು ಪಶ್ಚಿಮ ಬಂಗಾಳದ ಜನತೆ ಈ ಚುನಾವಣೆಯ ಫಲಿತಾಂಶದ ಮೂಲಕವೇ ಸಂದೇಶವನ್ನು ನೀಡಿದ್ದಾರೆ. ಅದು ಫಲಿತಾಂಶದ ಮತ್ತೊಂದು ಮುಖ. ಈ ಫಲಿತಾಂಶವನ್ನು ಗಮನಿಸಿದರೆ ಪ್ರಜಾಪ್ರಭುತ್ವವನ್ನು ಹೀನಾಯ ಕ್ರೌರ್ಯದ ಮೂಲಕ ದಮನ ಮಾಡಲು ಯತ್ನಿಸುವ ಶಕ್ತಿಗಳಿಗೆ ಜನತೆ ಸರಿಯಾದ ಉತ್ತರ ಕೊಡುವ ದಿನ ಬಹಳ ದೂರವೇನೂ ಇಲ್ಲ ಎನಿಸುತ್ತದೆ.

'ಹಿಟ್ಲರ್'ನ ಉದಯ ಮತ್ತು '(ನಮೋ) ನರೇಂದ್ರ ಮೋದಿ' ಪ್ರಚಾರ ಚಳುವಳಿ ಹಿಂದೆ ಸಾಮ್ಯತೆ ಇದೆ

– ಸೀತಾರಾಮ್ ಯೆಚೂರಿ

1930ರಲ್ಲಿ ಅಡಾಲ್ಫ್ 'ಹಿಟ್ಲರ್'ನ ಬೆಳವಣಿಗೆ ಮತ್ತು 2013ರಲ್ಲಿ ನರೇಂದ್ರ ಮೋದಿಯನ್ನು ನಾಯಕನನ್ನಾಗಿ ಬಿಂಬಿಸುವುದರ ಹಿಂದಿರುವ ಪ್ರಚಾರ ಚಳುವಳಿಯಲ್ಲಿ ಪ್ರಬಲವಾದ ಸಾಮ್ಯತೆಗಳು ಗೋಚರಿಸುತ್ತಿವೆ. ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ನವ ಉದಾರೀಕರಣ ಆರ್ಥಿಕ ನೀತಿಗಳಲ್ಲಿ ಸಹಮತ ಇದೆ. ದೊಡ್ಡ ಬಂಡವಾಳಿಗರಿಗೆ ರಿಯಾಯಿತಿ, ಉದಾರ ಪ್ರೋತ್ಸಾಹವನ್ನು ಪ್ರಕಟಿಸಿದ ಬಳಿಕವೂ ಕೈಗಾರಿಕಾ ಅಭಿವೃದ್ಧಿ ಪ್ರಮಾಣ



ಸ್ಥಗಿತಗೊಂಡಿದೆ. ಈ ಜನವಿರೋಧಿ ನೀತಿಗಳಿಂದಾಗಿ ನಿರುದ್ಯೋಗ ವ್ಯಾಪಕವಾಗಿ ಹೆಚ್ಚಿದೆ.

ಪ್ರಸಕ್ತ ಬಿಕ್ಕಟ್ಟಿನ ಮಧ್ಯೆ, ಕಾರ್ಪೊರೇಟ್ ವರ್ಗವು ಮೋದಿಯನ್ನು 'ರಕ್ಷಕ' ಎಂದು ಬಿಂಬಿಸುವ ನಿಟ್ಟಿನಲ್ಲಿ ವ್ಯವಸ್ಥಿತ ಮತ್ತು ಸಂಘಟಿತ ಜಾಹೀರಾತು ಪ್ರಚಾರದಲ್ಲಿ ತೊಡಗಿದೆ.

1930ರ ಮಹಾ ಆರ್ಥಿಕ ಹಿಂಜರಿತದ ಸಂದರ್ಭದಲ್ಲಿ ಹಿಟ್ಲರನನ್ನು ನಾಯಕನನ್ನಾಗಿ ಬಿಂಬಿಸುವ ಹತಾಶಾ ಪ್ರಯತ್ನ ಹಾಗೂ ಈಗಿನ 'ಮೋದಿ–ಗುಣಗಾನ'ದ ಹಿಂದಿನ ಸಾಮ್ಯತೆಯನ್ನು ಹುಡುಕುವಲ್ಲಿ ನಾವು ವಿಫಲರಾಗಬಾರದು.

ಈಗಿನ ಸನ್ನಿವೇಶದಲ್ಲಿ ಭಾರತದ ಆರ್ಥಿಕತೆಯನ್ನು ಬಲಿಷ್ಠಗೊಳಿಸಲು ಮತ್ತಷ್ಟು ಸದೃಢಗೊಳಿಸಲು ಬೇಕಾಗಿರುವುದು 'ನಾಯಕ' ಅಥವಾ 'ನೇತಾ' ಅಲ್ಲ. ಬದಲಾಗಿ ಜನರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವ ಮತ್ತು ಉತ್ಪಾದನೆ ಹೆಚ್ಚಳಕ್ಕೆ ಇಂಬು ನೀಡುವ ಪರ್ಯಾಯ ನೀತಿಗಳು ಹಾಗೂ ಹೂಡಿಕೆ. ಕೇವಲ ವಿದೇಶಿ ನೇರ ಹೂಡಿಕೆಯನ್ನು ಅವಲಂಬಿಸಿದರೆ ಏನೂ ಫಲ ದೊರೆಯದು.

–ಸೀತಾರಾಮ ಯೆಚೂರಿ.

ಗುತ್ತಿಗೆ ಪದ್ದತಿ ರದ್ದತಿ–ಕನಿಷ್ಟ ಕೂಲಿ ಹಾಗೂ ಅಸಂಘಟಿತ ಕಾರ್ಮಿಕರ ಬೇಡಿಕೆಗಳಿಗಾಗಿ 25 ಸೆಪ್ಟೆಂಬರ್ ರಾಷ್ಟ್ರವ್ಯಾಪಿ, ಪ್ರತಿಭಟನೆ

12 ಡಿಸೆಂಬರ್ ಪಾರ್ಲಿಮೆಂಟ್ ಚಲೋ
ಕಾರ್ಮಿಕ ಸಂಘಟನೆಗಳ ರಾಷ್ಟ್ರೀಯ ಸಮಾವೇಶದ ಕರೆ

ದುಡಿವ ಜನರ ಮತ್ತು ಜನಸಾಮಾನ್ಯರ ಪ್ರಮುಖ ಬೇಡಿಕೆಗಳನ್ನು ಮುಂದಿರಿಸಿಕೊಂಡು ಫೆಬ್ರುವರಿ 20–21, 2013 ರಂದು ನಲವತ್ತೆಂಟು ಗಂಟೆಗಳ ಅಖಿಲ ಭಾರತ ಮುಷ್ಕರವನ್ನು ಯಶಸ್ವಿಯಾಗಿ ಸಂಘಟಿಸಿದ ಹನ್ನೊಂದು ಕೇಂದ್ರೀಯ ಟ್ರೇಡ್ ಯೂನಿಯನ್ನುಗಳ ಆಶ್ರಯದಲ್ಲಿ ದೆಹಲಿ ಮಾವಳಂಕರ್ ಸಭಾಂಗಣದಲ್ಲಿ ಕಾರ್ಮಿಕರ ರಾಷ್ಟ್ರೀಯ ಮಟ್ಟದ ಸಮಾವೇಶವನ್ನು 2013 ರ ಆಗಸ್ಟ್ 6 ರಂದು ನಡೆಸಲಾಯಿತು. ಸಾವಿರಕ್ಕೂ ಮೀರಿ ಟ್ರೇಡ್ ಯೂನಿಯನ್ ಮತ್ತು ಸ್ವತಂತ್ರ ಫೆಡರೇಷನ್‌ಗಳ ಪ್ರತಿನಿಧಿಗಳು ಈ ಸಮಾವೇಶದಲ್ಲಿ ಭಾಗವಹಿಸಿದ್ದರು.

ಮೂಗಿಗೆ ತುಪ್ಪ ಸವರುವ ನೀತಿಗೆ ಖಂಡನೆ

ನಾನಾ ರಾಜಕೀಯ ಒಲವು ನಿಲುವುಗಳು, ನಾನಾ ಬಣ್ಣದ ಬಾವುಟಗಳನ್ನು ಹೊಂದಿರುವ ದೇಶದ ಎಲ್ಲ ಕಾರ್ಮಿಕ ಸಂಘಟನೆಗಳೂ ಒಂದು ವೇದಿಕೆಗೆ ಬಂದು ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ–ಜನವಿರೋಧಿ–ದೇಶವಿರೋಧಿ ನೀತಿಗಳ ವಿರುದ್ಧ ಎರಡು ದಿನಗಳ ರಾಷ್ಟ್ರವ್ಯಾಪಿ ಮುಷ್ಕರವನ್ನು ನಡೆಸಿದರೆನ್ನುವುದೇ ಒಂದು ಐತಿಹಾಸಿಕ ಬೆಳವಣಿಗೆ. ಮುಷ್ಕರದಲ್ಲಿ ಪಾಲ್ಗೊಂಡ ಸಂಘಟನೆಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆ ಹೊಂದಿರುವ ಐಎನ್‌ಟಿಯುಸಿ, ಸಂಘಪರಿವಾರದ ಸದಸ್ಯ ಸಂಘಟನೆಯಾದ ಬಿಎಂಎಸ್‌ಗಳು ಕೂಡ ಇದ್ದವು ಎನ್ನುವುದು ಕಾರ್ಮಿಕ ಚಳುವಳಿ ಎತ್ತಿರುವ ಬೇಡಿಕೆಗೆ ಎಷ್ಟು ವ್ಯಾಪಕ ಬೆಂಬಲ ಇದೆ ಮತ್ತು ಅದು ಎಷ್ಟು ಗಂಭೀರ ವಿಷಯ ಎಂದು ತೋರಿಸುತ್ತದೆ. ಆದರೆ ಆಳುವ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವು ಮುಷ್ಕರ ನಡೆದು ಅರ್ಧ ವರ್ಷವೇ ಮೀರಿದರೂ ಯಾವ ಗಂಭೀರ ಕ್ರಮವನ್ನೂ ವಹಿಸಿಲ್ಲ. ಮತ್ತು ಬಂಡವಾಳಗಾರರ ಮತ್ತು ಕಾರ್ಪೋರೇಟ್ ಕಂಪನಿಗಳ ಪರವಾದ ಕಾರ್ಮಿಕ ವಿರೋಧಿ–ದೇಶ ವಿರೋಧಿ ನೀತಿಗಳನ್ನೂ ಕೈಬಿಟ್ಟಿಲ್ಲ.

ಪ್ರಧಾನ ಮಂತ್ರಿಗಳು ರಾಷ್ಟ್ರೀಯ ಕಾರ್ಮಿಕ ಸಮ್ಮೇಳನದಲ್ಲಿ ಬರೀ ಬಾಯಿಮಾತಿನಲ್ಲಿ ಕಾರ್ಮಿಕರ ಬೇಡಿಕೆಗಳ ಬಗೆಗೆ ಅಡ್ಡಗೋಡೆ–ಯ ಮೇಲೆ ದೀಪವಿಟ್ಟಂತಹ ಕೆಲವು ಮಾತನ್ನಾಡಿದ್ದಷ್ಟೇ ಲಾಭ. ಕೃತಿಯಲ್ಲಿ ಏನೂ ಇಲ್ಲ.

ಸಮಾವೇಶವು ಸರ್ಕಾರದ ಈ ಧೋರಣೆಯನ್ನು ಕಟುವಾಗಿ ಖಂಡಿಸಿತು. ಮುಷ್ಕರದ ನಂತರ ಕನಿಷ್ಠ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳನ್ನು ಕರೆದು ಮಾತನಾಡುವ ಮನಸ್ಸು ಕೂಡ ಸರ್ಕಾರಕ್ಕೆ ಇಲ್ಲ ಎಂಬುದನ್ನು ಸಮಾವೇಶ ಗುರುತಿಸಿತು. ತನ್ನನ್ನು ತನ್ನ ನ್ಯಾಯಬದ್ದ ಬೇಡಿಕೆಗಳನ್ನು ಲೆಕ್ಕಕ್ಕೇ ಇಟ್ಟುಕೊಂಡಿಲ್ಲದ ಸರ್ಕಾರದ ಧೋರಣೆಗೆ ಕಾರ್ಮಿಕ ವರ್ಗವು ತನ್ನ ತೀಕ್ಷ್ಣ ಹೋರಾಟದ ಮೂಲಕವೇ ಉತ್ತರ ನೀಡಬೇಕೆಂಬುದು ಪ್ರಸ್ತಕ ಸನ್ನಿವೇಶದ ಅಗತ್ಯವಾಗಿದೆ.

ಈ ಸಮಾವೇಶದ ಅಧ್ಯಕ್ಷೀಯ ಮಂಡಳಿಯಲ್ಲಿ ಪ್ರತಿನಿಧಿತ ಸಂಘಟನೆಗಳ ಅಧ್ಯಕ್ಷರುಗಳಿದ್ದರು. ಅವರಲ್ಲಿ ಸಿಐಟಿಯು ವಿನ ಕಾಂ. ಎ. ಕೆ. ಪದ್ಮನಾಭನ್, ಯುಟಿಯುಸಿಯ ಅಬಾನಿ ರಾಯ್ ಮತ್ತು ಇತರರು.

ಹನ್ನೊಂದು ಕೇಂದ್ರೀಯ ಟ್ರೇಡ್ ಯೂನಿಯನ್ನುಗಳ ಪ್ರಧಾನ ಕಾರ್ಯದರ್ಶಿಗಳು, ಪ್ರತಿನಿಧಿಗಳು ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು ಮತ್ತು ಘೋಷಣೆ ಹಾಗೂ ಕಾರ್ಯಕ್ರಮಗಳನ್ನು ಬೆಂಬಲಿಸಿದರು.


ಭಾಷಣಗಳ ನಂತರ ಅಧ್ಯಕ್ಷೀಯ ಮಂಡಳಿ ಘೋಷಣೆಯನ್ನು ಅವಿರೋಧವಾಗಿ ಒಪ್ಪಲಾಯಿತೆಂದು ಪ್ರಕಟಿಸಿತು. ಇದನ್ನು ಸಮಾವೇಶ ಕರತಾಡನದ ಮೂಲಕ ಸ್ವಾಗತಿಸಿತು. ಘೋಷಣೆ ಕಾರ್ಮಿಕರನ್ನು ಅವರ 2013 ರ ಫೆಬ್ರುವರಿ 20–21 ರ 48 ಗಂಟೆಗಳ ಐತಿಹಾಸಿಕ ಮುಷ್ಕರಕ್ಕಾಗಿ ಅಭಿನಂದಿಸಿತು. ಈ ಮುಷ್ಕರದ ಹತ್ತು ಅಂಶಗಳ ಮೇಲೆ ಕಾರ್ಯಕ್ರಮಗಳನ್ನು ಮುಂದುವರೆಸುವಂತೆ ಅದು ಕರೆ ನೀಡಿತು. 25 ಸೆಪ್ಟೆಂಬರ್ ರಂದು ಪ್ರದರ್ಶನ, ರ್‍ಯಾಲಿ, ಪ್ರದರ್ಶನಗಳನ್ನು ನಡೆಸಲು ತೀರ್ಮಾನಿಸಲಾಯಿತಲ್ಲದೆ ಡಿಸೆಂಬರ್ 12 ರಂದು ಪಾರ್ಲಿಮೆಂಟಿನೆದುರು ಬೃಹತ್ ಪ್ರದರ್ಶನ ನಡೆಸಲು ತೀರ್ಮಾನಿಸಲಾಯಿತು. ಅದೇ ಡಿಸೆಂಬರ್ 12 ರಂದು ಜಿಲ್ಲಾ ಮಟ್ಟದಲ್ಲಿಯೂ ಪ್ರದರ್ಶನಗಳನ್ನೂ ಆಯೋಜಿಸಬೇಕೆಂದು ತೀರ್ಮಾನಿಸಲಾಯಿತು. ಈ ಸಮಾವೇಶ ಮತ್ತು ಘೋಷಣೆಗಳೆಡರಲ್ಲೂ ಅಸಂಘಟಿತ ಮತ್ತು ಕಾಂಟ್ರಾಕ್ಟ್ ಕಾರ್ಮಿಕರ ಬೇಡಿಕೆಗಳು ಮತ್ತು ಕನಿಷ್ಠ ಕೂಲಿ ನಿಗದಿ ವಿಷಯಗಳು ಪ್ರಧಾನ ಆದ್ಯತೆಯ ವಿಷಯವಾಗಿದ್ದವು.

ರಾಷ್ಟ್ರೀಯ ಸಮಾವೇಶ ಕಾರ್ಮಿಕರ ಬೇಡಿಕೆಗಳ ಸಾಕಾರಕ್ಕಾಗಿ ಕಾರ್ಯಕ್ರಮಗಳನ್ನು ರೂಪಿಸಿದೆ. ಕರೆಯನ್ನು ಯಶಸ್ವಿಗೊಳಿಸುವ ಜವಾಬ್ದಾರಿ ಈಗ ಎಲ್ಲರ ಮುಂದಿದೆ.



ಸಮಾವೇಶ ಉದ್ದೇಶಿಸಿ ತಪನ್‌ಸೇನ್

'ಮಹಿಳೆಯರು ದೌರ್ಜನ್ಯದ ವಿರುದ್ಧ ಜಾಗೃತರಾಗಬೇಕು' – ಜೆಎಂಎಸ್ ಬೆಂಗಳೂರು ಉತ್ತರವಲಯ ಸಮ್ಮೇಳನದಲ್ಲಿ – ಕಾಂ. ಶಾರದ ಕರೆ



ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಬೆಂಗಳೂರು ಉತ್ತರ ವಲಯ 2 ನೇ ಸಮ್ಮೇಳನವು 28 ಜುಲೈ 2013 ರಂದು ಪೀಣ್ಯ 2ನೇ ಹಂತ ಹೆಗ್ಗನಹಳ್ಳಿ ಪೂರ್ವದ ಇಂದಿರಾ ಪ್ರಿಯದರ್ಶಿನಿ ನಗರದಲ್ಲಿ ನಡೆಯಿತು. ಸಮ್ಮೇಳನದ ಉದ್ಘಾಟನೆಯನ್ನು ಜೆಎಂಎಸ್ ರಾಜ್ಯ ಉಪಾಧ್ಯಕ್ಷರಾದ ಕಾಂ. ಶಾರದ ನೆರವೇರಿಸಿ ಮಾತನಾಡಿ ಮಹಿಳೆಯರು ದೌರ್ಜನ್ಯದ ವಿರುದ್ಧ ಜಾಗೃತರಾಗಬೇಕೆಂದು ಕರೆ ನೀಡಿದರು. ಸಿಐಟಿಯು ಉತ್ತರ ಜಿಲ್ಲಾ ಸಮಿತಿ ಕಾರ್ಯದರ್ಶಿಯಾದ ಕಾಂ. ಪ್ರತಾಪಸಿಂಹ ಮಾತನಾಡಿ ಮಹಿಳೆಯರು ಯಾವ ರೀತಿ ಶೋಷಣೆಗೊಳಗಾಗುತ್ತಾರೆ ಮತ್ತು ಶೋಷಣೆಯಿಂದ ಮುಕ್ತರಾಗುವುದು ಹೇಗೆ ಎಂದು ತಿಳಿಸಿಕೊಟ್ಟರು. ಸಿಪಿಐ(ಎಂ) ಪಕ್ಷದ ಉತ್ತರವಲಯ ಸಮಿತಿ ಕಾರ್ಯದರ್ಶಿ ಕಾಂ. ಲೀಲಾವತಿಯವರು ಮಹಿಳೆಯರು ಹೆಚ್ಚಿನ ರೀತಿಯಲ್ಲಿ ಸಂಘಟಿತರಾಗುವ ಮುಖಾಂತರ ತಮ್ಮ ಮೇಲಾಗುವ ದೌರ್ಜನ್ಯ ಹಾಗೂ ಶೋಷಣೆಯಿಂದ ಮುಕ್ತರಾಗಬೇಕೆಂದು ಕರೆ ನೀಡಿದರು. ಸಿಡಬ್ಲೂಎಫ್‌ಐ ಉತ್ತರ ಜಿಲ್ಲಾ ಪ್ರ. ಕಾರ್ಯದರ್ಶಿಗಳಾದ ಕಾಂ. ಟಿ.ಎಂ. ರಾಮಕೃಷ್ಣ ಮಾತನಾಡಿ ಮಧ್ಯಪಾನ ಹಾಗೂ ಮಾದಕ ವಸ್ತುಗಳನ್ನು ಹರಿಯ ಬಿಟ್ಟು ದುಡಿಯುವ ಜನರನ್ನು ಕುಗ್ಗಿಸುವ ವಾತಾವರಣವನ್ನು ಸರ್ಕಾರಗಳು ತಂದೊಡ್ಡಿವೆ. ಅದನ್ನು ತಡೆಗಟ್ಟಲು ಮಹಿಳೆಯರು ಸಂಘಟಿತರಾಗಿ ಹೋರಾಟ ಮಾಡಬೇಕೆಂದು ತಿಳಿಸಿದರು. ಸಭೆಯಲ್ಲಿ ಯಲಹಂಕ ಹಾಗೂ ಹೆಬ್ಬಾಳ ವಲಯ ಸಮಿತಿ ಸಿಐಟಿಯು ಪ್ರ. ಕಾರ್ಯದರ್ಶಿಯಾದ ಹನುಮಂತರಾವ್ ಹವಾಲ್ದಾರ, ವಿಜಯಲಕ್ಷ್ಮಿ, ಪುಷ್ಪ, ಲತಾ, ಪೂರ್ವ ವಲಯದಿಂದ ರಾಜೇಶ್ವರಿ, ಜಯಲಕ್ಷ್ಮಿ ಹಾಗೂ ಐ.ಎಂ. ಕರಿಯಪ್ಪ, 100 ಜನ ಮಹಿಳೆಯರು ಭಾಗವಹಿಸಿದ್ದರು. ನೂತನ ಸಮಿತಿ ರಚಿಸಲಾಯಿತು.

ಸಮಿತಿಯ ಅಧ್ಯಕ್ಷರಾಗಿ ತಾರಾಮಣಿ, ಉಪಾಧ್ಯಕ್ಷರುಗಳಾಗಿ – ಪುಷ್ಪ, ಶೋಬನಾ, ಜಯಲಕ್ಷ್ಮಿ, ಸುಂದರಮ್ಮ, ಕಾರ್ಯದರ್ಶಿಯಾಗಿ–ರೇಣುಕಾ, ಜಂಟಿ ಕಾರ್ಯದರ್ಶಿಗಳಾಗಿ–ಮಂಗಳಮ್ಮ, ಲತಾ, ರೂಪ, ಖಜಾಂಜಿಯಾಗಿ – ರೇಣುಕಮ್ಮ, ಹಾಗೂ 8 ಜನ ಕಾರ್ಯಕಾರಿ ಸಮಿತಿ ಸದಸ್ಯರನ್ನು ಆಯ್ಕೆ ಮಾಡಲಾಯಿತು.

ವರದಿ : ರೇಣುಕಾ

ಜನಶಕ್ತಿ
ಕನ್ನಡ ವಾರಪತ್ರಿಕೆ

ಕಲ್ಲಿದ್ದಲು ಹಗರಣ: ಕಡತಗಳೇ ಕಾಣೆ– ಮತ್ತೆ ಸಂಸತ್ತು ಕಲಾಪ ಸ್ಥಗಿತ

ಸಂಸತ್ತಿನ ಮಳೆಗಾಲದ ಅಧಿವೇಶನವೂ ಅಸ್ತವ್ಯಸ್ತಗೊಂಡಿದೆ. ಈ ಬಾರಿಯೂ ಯುಪಿಎ–2 ಸರಕಾರ ತನ್ನ ವಿಫಲತೆಗಳನ್ನು ಹಟಮಾರಿತನದಿಂದ ಮುಚ್ಚಿಕೊಳ್ಳುತ್ತಿರುವುದೇ ಇದಕ್ಕೆ ಕಾರಣವಾಗಿದೆ. ಕಲ್ಲಿದ್ದಲು ಹಗರಣದ ತನಿಖೆ ಮಾಡುತ್ತಿರುವ ಸಿಬಿಐಗೆ ಸರಕಾರ ಸಂಬಂಧಪಟ್ಟ ಹಲವು ಕಡತಗಳನ್ನು ಕೊಟ್ಟಿಲ್ಲ, ಅವೆಲ್ಲ ಕಾಣೆಯಾಗಿವೆ. ಏಕೆ ಮತ್ತು ಹೇಗೆ ಕಾಣೆಯಾಗಿವೆ ಎಂಬ ಬಗ್ಗೆ ಸ್ಪಷ್ಟೀಕರಣ ನೀಡಲು ಯುಪಿಎ–2 ಮುಖಂಡರು ವಿಫಲರಾಗಿದ್ದಾರೆ.

ಕಲ್ಲಿದ್ದಲು ಹಗರಣಕ್ಕೆ ಸಂಬಂಧಪಟ್ಟಂತೆ ಸಿಬಿಐ ಕಳೆದ ವರ್ಷ ಕಾಂಗ್ರೆಸ್ ಎಂಪಿ, ವಿಜಯ್ ದರ್ದ ಅವರ ಮೇಲೆ ಕೇಸು ದಾಖಲಿಸಿತ್ತು. ಆತ ಎಎಂಆರ್ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಗೆ ಒಂದು ಕಲ್ಲಿದ್ದಲು ನಿಕ್ಷೇಪವನ್ನು ಕೊಡಬೇಕು ಎಂದು ಮಾಡಿದ್ದ ಶಿಫಾರಸನ್ನು ಪ್ರಧಾನ ಮಂತ್ರಿಯ ಕಚೇರಿ ಕಲ್ಲಿದ್ದಲು ಇಲಾಖೆಗೆ ಕಳಿಸಿತ್ತು ಎನ್ನಲಾಗಿದೆ. ಆದರೆ ಆ ಶಿಫಾರಸಾಗಲೀ, ಅದಕ್ಕೆ ಸಂಬಂಧಪಟ್ಟ ಬೇರೆ ಯಾವ ದಾಖಲೆಯಾಗಲೀ ಸಿಗುತ್ತಿಲ್ಲ ಎಂದು ಬೆಳಕಿಗೆ ಬಂತು. ದೇಶದ ಸರ್ವೋಚ್ಚ ನ್ಯಾಯಾಲಯದ ಅದೇಶದ ಮೇರೆಗೆ ರಚಿಸಿದ 'ಸರ್ಚ್ ಕಮಿಟಿ' ಜುಲೈ 16ರಂದು ಸಭೆ ಸೇರಿ "ದಾಖಲೆಗಳು ಕಾಣೆಯಾಗಿರುವ ಬಗ್ಗೆ ಸಿಬಿಐಗೆ ತಿಳಿಸಬೇಕು ಮತ್ತು ಪ್ರಧಾನ ಮಂತ್ರಿಗಳ ಕಚೇರಿ ಕಲ್ಲಿದ್ದಲು ಇಲಾಖೆಗೆ ಕಳಿಸಿದ ಪತ್ರದ ನಕಲನ್ನು ಸಿಬಿಐಗೆ ಒದಗಿಸುವಂತೆ ಕೋರಬಹುದು ಎಂದು ನಿರ್ಧರಿಸಿತಂತೆ.

ಈ ಶಿಫಾರಸು, ಅದನ್ನು ಕಳಿಸಿದ ಪ್ರಧಾನ ಮಂತ್ರಿಗಳಿಗೆ ಕಳಿಸಿದ ಪತ್ರದ ದಾಖಲೆಗಳು ಮಾತ್ರವೇ ಅಲ್ಲ, 1993ರಿಂದ 2005ರ ನಡುವೆ ನೀಡಲಾದ ಎಲ್ಲ 45 ಬ್ಲಾಕುಗಳ 157 ಅರ್ಜಿಗಳು ಮತ್ತು ಸಂಬಂಧಪಟ್ಟ ದಾಖಲೆಗಳೂ ಕಾಣೆಯಾಗಿವೆ ಎಂಬ ಸಂಗತಿಯೂ ಆಸಭೆಯಲ್ಲಿ ಪ್ರಕಟಗೊಂಡಿತು. ಕಲ್ಲಿದ್ದಲು ಬ್ಲಾಕುಗಳ ಹಂಚಿಕೆ ನಡೆಸಿದ ಪರೀಕ್ಷಾ ಸಮಿತಿ(ಸ್ಕ್ರೀನಿಂಗ್ ಕಮಿಟಿ)ಯ ಅಂತಿಮ ಕಲಾಪಗಳ ವಿವರಗಳಿದ್ದ ಕಡತವೂ ಕಾಣೆಯಾಗಿದೆಯಂತೆ. ಬಹಳಷ್ಟು ಒತ್ತಡಗಳ ನಂತರ ಸುಪ್ರಿಂಕೋರ್ಟ್ ಉಸ್ತುವಾರಿಯಲ್ಲಿ ನಡೆಯುತ್ತಿರುವ ಸಿಬಿಐ ತನಿಖೆ ಈ ದಾಖಲೆಗಳಿಲ್ಲದಿದ್ದರೆ ಮುಂದುವರೆಯಲು ಸಾಧ್ಯವಿಲ್ಲ. ಆದ್ದರಿಂದ ಈಗ ಕಡತಗಳ ಕಾಣೆ–ಯೇ ಇನ್ನೊಂದು ಹಗರಣವಾಗುತ್ತಿರುವಂತೆ ಕಾಣುತ್ತಿದೆ. ಈ ಕಾಣೆಗಳ ಹಿಂದೆ ಏನಾದರೂ ಪಿತೂರಿ ಇದೆಯೇ ಎಂದು ಕೇಳಿದಾಗ ಸಿಬಿಐ ನಿರ್ದೇಶಕರು ಅದು ನಿಮ್ಮ ಊಹೆಗೆ ಬಿಟ್ಟದ್ದು ಎಂದರಂತೆ.

ಬಹಳಷ್ಟು ಪ್ರತಿಭಟನೆಗಳು, ಒತ್ತಡಗಳ ನಂತರ ಕಲ್ಲಿದ್ದಲು ಮಂತ್ರಿಗಳೇನೋ ಕೊನೆಗೆ ಹೇಳಿಕೆ ನೀಡಲು ಒಪ್ಪಿದರು. ಆದ–ರೆ ಆ ಅವಧಿಯಲ್ಲಿ ಸ್ವತಃ ಪ್ರಧಾನ ಮಂತ್ರಿಗಳೇ ಕಲ್ಲಿದ್ದಲು ಇಲಾಖೆಯನ್ನು ನಿರ್ವಹಿಸುತ್ತಿದ್ದುದರಿಂದ ಅವರು ಈ ಕಡತಗಳ ಕಾಣೆಯ ಬಗ್ಗೆ ಸ್ಪಷೀಕರಣ ನೀಡಬೇಕಾಗಿದೆ. ಎಂದು ಕೇಳಿದಾಗ ಯುಪಿಎ–2 ಸರಕಾರ ಅದು ಸಾಧ್ಯವಿಲ್ಲ ಎಂದು ಹಟ ಹಿಡಿದು ಕೂತಿದ್ದುದರಿಂದಾಗಿ ಸಂಸತ್ತಿನ ಕಲಾಪಗಳು ಅಸ್ತವ್ಯಸ್ತಗೊಳ್ಳುವಂತಾಗಿದೆ.


ಇದು ಸಾಕ್ಷ್ಯನಾಶದ ಒಂದು ಪ್ರಶ್ನೆ, ಸರಕಾರೀ ಕಡತಗಳನ್ನು ಕದಿಯುವುದು ಒಂದು ಕ್ರಿಮಿನಲ್ ಅಪರಾಧ ಕೂಡ. ಆದ್ದ–ರಿಂದ ಸರಕಾರ ಈ ಬಗ್ಗೆ ಎಫ್ಐಆರ್ ಏನಾದರೂ ದಾಖಲಿಸಿದೆಯೇ ಎಂಬ ರಾಜ್ಯಸಭಾ ಸದಸ್ಯರೂ ಆಗಿರುವ ಸಿಪಿಐ(ಎಂ) ಮುಖಂಡ ಸೀತಾರಾಂ ಯೆಚುರಿಯವರ ಸರಳ ಪ್ರಶ್ನೆಗೂ ಉತ್ತರ ನೀಡಲು ಯುಪಿಎ–2 ಸರಕಾರಕ್ಕೆ ಆಗಿಲ್ಲ.

ಕಾಣೆಯಾಗಿರುವ ಹೆಚ್ಚಿನ ಕಡತಗಳು ಜಿಂದಾಲ್, ಟಾಟಾಗಳಂತಹ ದೊಡ್ಡ ಬಂಡವಾಳಿಗ ಗುಂಪುಗಳಿಗೆ ಕಲ್ಲಿದ್ದಲು ಬ್ಲಾಕುಗಳ ನೀಡಿಕೆಗೆ ಸಂಬಂಧಪಟ್ಟಂತವುಗಳು ಎಂದು ಲೋಕಸಭೆಯಲ್ಲಿ ಸಿಪಿಐ(ಎಂ) ಗುಂಪಿನ ಮುಖಂಡರಾದ ಬಸುದೇವ ಆಚಾರ್ಯ ಹೇಳುತ್ತಾರೆ.

ಯುಪಿಎ–2 ಮಂದಿ ಒಂದೆಡೆ ಹೀಗೆ ಸಂದೇಹಾತ್ಮಕವಾಗಿ ವರ್ತಿಸುತ್ತಿದ್ದರೆ, ಮತ್ತೊಂದೆಡೆಯಲ್ಲಿ ಪ್ರತಿಪಕ್ಷಗಳು ಸಂಸತ್ತು ನಡೆಯದಂತೆ ಮಾಡಿ ಆಹಾರ ಭದ್ರತಾ ಮಸೂದೆ ಪಾಸಾಗದಮತೆ ಮಾಡುತ್ತಿದ್ದಾರೆ ಎಂದೂ ಆಪಾದಿಸುತ್ತಿದ್ದಾರೆ–ಇದು ಕಳ್ಳನೇ ಪೋಲೀಸರಿಗೆ ಧಮಕಿ ಹಾಕಿದಂತಾಗಿದೆ ಎಂದು ಯೆಚುರಿ ಟೀಕಿಸಿದ್ದಾರೆ.

ಕಳೆದ ಸಂಚಿಕೆಯಲ್ಲಿ ಹೇಳಿರುವಂತೆ ಈ ಸರಕಾರದ ಮೊದಲ 100 ದಿನಗಳಲ್ಲೇ ಬರಬೇಕಾಗಿದ್ದ ಆಹಾರ ಭದ್ರತಾ ಮಸೂದೆ, ಅಂತಹ 15 ನೂರು ದಿನಗಳು ಕಳೆದರೂ ಬಾರದೆ, ಈಗಷ್ಟೇ ಬಂದಿದೆ. ಇದುವರೆಗೂ ಅದನ್ನು ತಡೆದವರು ಯಾರು ಎಂದು ಯೆಚುರಿ ಯುಪಿಎ–2 ಮುಖಂಡರನ್ನು ಪ್ರಶ್ನಿಸಿದ್ದಾರೆ.

ಈ ಸಂಚಿಕೆ ಮುದ್ರಣಕ್ಕೆ ಸಿದ್ಧವಾಗುತ್ತಿರುವ ವೇಳೆಗೆ ಯುಪಿಎ–2 ಸರಕಾರ ನಾಲ್ಕು ದಿನಗಳ ಕಲಾಪಗಳು ಅಸ್ತವ್ಯಸ್ತಗೊಳ್ಳಲು ಕಾರಣವಾದ ನಂತರ ಕಲ್ಲಿದ್ದಲು ಮಂತ್ರಿಗಳು ಹೇಳಿಕೆ ನೀಡಬೇಕು, ಅದರ ಮೇಲೆ ಚರ್ಚೆ ನಡೆಯುವಾಗ ಪ್ರಧಾನ ಮಂತ್ರಿಗಳು ಮಧ್ಯಪ್ರವೇಶಿಸಿ ಸ್ಪಷ್ಟೀಕರಣ ನೀಡಬೇಕು ಎಂಬ ಎಡಪಕ್ಷಗಳ ಸಲಹೆಗೆ ಕೊನೆಗೂ ಒಪ್ಪಿದೆ ಎಂಬ ಸುದ್ದಿ ಬಂದಿದೆ.



ವೇದರಾಜ ಎನ್.ಕೆ.

ಯುಪಿಎ ಸರಕಾರಕ್ಕೆ ಕಾಂಗ್ರೆಸ್ ಎಂಪಿಗಳಿಂದಲೇ ಮುಜುಗರ

ಕೆಲವು ದಿನಗಳ ಹಿಂದೆ ಹರ್ಯಾಣದ ಕಾಂಗ್ರೆಸ್ ಸಂಸತ್ ಸದಸ್ಯರೊಬ್ಬರು 100 ಕೋಟಿ ರೂ.ಗಳಿದ್ದರೆ ರಾಜ್ಯಸಭಾ ಸೀಟು ಸಿಗುತ್ತದೆ ಎಂದು ಹೇಳಿ ಒಂದು ವಿವಾದವನ್ನೇ ಎಬ್ಬಿಸಿದ್ದರು. ನಂತರ ಎಂದಿನಂತೆ ತನ್ನ ಮಾತಿನ ಸಂಪೂರ್ಣ ತಪ್ಪು ಆವೃತ್ತಿ ಪ್ರಕಟವಾಗಿದೆ ಎಂದರು. ರಾಜ್ಯಸಭಾ ಸೀಟು ಪಡೆದ ಒಬ್ಬ ಅಭ್ಯರ್ಥಿ ತಾನು ಚುನಾವಣೆಗೆ 100 ಕೋಟಿ ರೂ. ಬಜೆಟ್ ಇಟ್ಟಿದ್ದೆ, ಆದರೆ ಚುನಾವಣೆಯ ನಂತರ ಒಟ್ಟು ಖರ್ಚು ಲೆಕ್ಕ ಹಾಕಿದಾಗ ಅಷ್ಟು ಬಂದಿರಲಿಲ್ಲವಂತೆ. 20 ಕೋಟಿ ಉಳಿಸಿದ್ದರಂತೆ. ಅಂದರೆ ಕೇವಲ 80 ಕೋಟಿ ರೂ.ಗಳು! ಇಲ್ಲಿ 'ತಪ್ಪು ಆವೃತ್ತಿ'ಯ ಪ್ರಮಾಣ ಕೇವಲ 20ಶೇ. ಇದು ಎಂತಹ ಸಮಜಾಯಿಷಿಯೋ ಏನೋ.

ಅದೇನೇ ಇರಲಿ, ಇಷ್ಟು ಖರ್ಚು ಮಾಡಬಲ್ಲ ಒಬ್ಬ ಎಂ.ಪಿ. ಬಡಜನರ ಬಗ್ಗೆ ಹೇಗೆ ತಾನೇ ಯೋಚಿಸಬಲ್ಲ ಎಂದು ಮುಂದುವರೆದು ಈ ಕಾಂಗ್ರೆಸ್ ಎಂ.ಪಿ, ಜಿಂದ್‌ನಲ್ಲಿ ಸಾರ್ವಜನಿಕ ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತ ಹೇಳಿದರಂತೆ. 2009ರಲ್ಲಿ ಗೆದ್ದು ಸಂಸತ್ತಿಗೆ ಹೋದ ಎಂ.ಪಿ.ಗಳಲ್ಲಿ 360 ಮಂದಿ ಕೋಟ್ಯಾಧಿಪತಿಗಳು, ಒಂದು ಡಝನ್ ಮಂದಿಯಂತೂ 'ಬಿಲಿಯಾಧಿಪತಿಗಳು' ಎಂದು ಪತ್ರಿಕೆಗಳಲ್ಲಿ ಬಂದದ್ದನ್ನೂ ಅವರು ಉದ್ಧರಿಸಿದರು. ಸಂಸದೀಯ ಪ್ರಜಾಪ್ರಭುತ್ವದಲ್ಲಿ ಧನಬಲದ ಒಂದು ಹೊಸ ರಾಜಕೀಯ ವರ್ಗ ಬೆಳೆಯುತ್ತಿದೆ ಎಂದು ಅವರು ಹಲುಬಿದರು. ಆದರೆ ಇದನ್ನು ಬೆಳೆಸುತ್ತಿರುವವರು ಯಾರು ಎಂದು ಮಾತ್ರ ಅವರು ಹೇಳಲಿಲ್ಲ.


ಈ ವಾರ ಅದೇ ಹರ್ಯಾಣದ ಗುರ್‌ಗಾಂವ್‌ನ ಕಾಂಗ್ರೆಸ್ ಎಂ.ಪಿ. ಯುಪಿಎ ಮುಖಂಡರಿಗೆ ಇದಕ್ಕಿಂತಲೂ ದೊಡ್ಡ ಮುಜುಗರ ತಂದಿದ್ದಾರೆ.

ಕಳೆದ ಏಳೆಂಟು ವರ್ಷಗಳಲ್ಲಿ ಗುರ್‌ಗಾಂವ್‌ನಲ್ಲಿ 21000 ಎಕ್ರೆ ಜಮೀನಿಗೆ 'ಭೂಬಳಕೆ ಬದಲಾವಣೆ'ಯ ಪರವಾನಿಗೆ ನೀಡಲಾಗಿದೆ. ಇದರಲ್ಲಿ ಹರ್ಯಾಣ ಸರಕಾರ ತೃಪ್ತಿಕರ ಪಾತ್ರ ವಹಿಸಿಲ್ಲ, ಈ ಬಗ್ಗೆ ಸಿಬಿಐನಿಂದ ಅಥವ ಬೇರೆ ಸಂಸ್ಥೆಯಿಂದ ಒಂದು ಸ್ವತಂತ್ರ ತನಿಖೆ ಆಗಬೇಕು ಎಂದು ಆಗ್ರಹಿಸಿದ್ದಾರೆ. ಈ 21,000 ಎಕ್ರೆಯಲ್ಲಿ ಯುಪಿಎ ಅಧ್ಯಕ್ಷರ ಅಳಿಯನ ಭೂವ್ಯವಹಾರವೂ ಸೇರಿದೆ ಎಂಬುದು ಗಮನಾರ್ಹ.

ಗುರ್‌ಗಾಂವ್‌ನಲ್ಲಿ ಐದು ವರ್ಷಗಳ ಹಿಂದೆ ಇದ್ದದ್ದು ಕೇವಲ ನಾಲ್ಕೈದು ಬಿಲ್ಡರುಗಳು, ಈಗ ನಾಯಿಕೊಡೆಗಳಂತೆ ಹಬ್ಬಿಕೊಂಡಿದ್ದಾರೆ, ಮಳೆಗಾಲದಲ್ಲಿ ಕಪ್ಪೆಗಳು ವಟಗುಟ್ಟುವಂತೆ ಎಂದೂ ಅವರು ವರ್ಣಿಸಿದ್ದಾರೆ.

ಹಿರಿಯ ಐಎಎಸ್ ಅಧಿಕಾರಿ ಅಶೋಕ್ ಖೇಮ್ಕಾ ತನ್ನನ್ನು ವರ್ಗಾವಣೆ ಮಾಡಿದ ಹರ್ಯಾಣ ಸರಕಾರಕ್ಕೆ ಉತ್ತರವಾಗಿ ಎತ್ತಿರುವ ಅಕ್ರಮ ಭೂವ್ಯವಹಾರಗಳ ಬಗ್ಗೆ ಸರಕಾರ ನೀಡಿರುವ ಪ್ರತಿಯೊಂದು ಸ್ಪಷ್ಟೀಕರಣವೂ ಅದರ ಕೃತ್ಯಗಳನ್ನು ಹೆಚ್ಚೆಚ್ಚು ಅಸಮರ್ಥನೀಯಗೊಳಿಸಿದೆ ಎಂದು ಸಿಪಿಐ(ಎಂ) ಹರ್ಯಾಣ ರಾಜ್ಯಸಮಿತಿ ಹೇಳಿದೆ. ಯುಪಿಎ ಅಧ್ಯಕ್ಷರ ಅಳಿಯನ ಡಿಎಲ್‌ಎಫ್ ಭೂಹಗರಣ ಇವುಗಳಲ್ಲಿ ಒಂದು ಮಾತ್ರ ಎಂದು ಅದು ಹೇಳಿದೆ.

ಈ ಇಬ್ಬರೂ ಕಾಂಗ್ರೆಸ್ ಎಂಪಿಗಳು ತಂದಿರುವ ಮುಜುಗರ, ವಾಸ್ತವವಾಗಿ, ಅವರ ಪಕ್ಷ ಅನುಸರಿಸುತ್ತಿರುವ ನವ–ಉದಾರವಾದದ ಫಲಗಳೇ. ಗುರ್‌ಗಾಂವ್ ಭೂಹಗರಣಗಳಂತೂ ನವ–ಉದಾರವಾದ ಪೋಷಿಸುತ್ತಿರುವ ಚಮಚಾ ಬಂಡವಾಳಶಾಹಿಯ ಜ್ವಲಂತ ಉದಾಹರಣೆಗಳು.



ಯೋಜನಾ ವೆಚ್ಚಗಳ ಅಂಕಿ–ಅಂಶಗಳು ನಂಬಲರ್ಹವೇ?

ಈ ಸಂದೇಹ ದೇಶದ ಮಹಾಲೆಕ್ಕ ಪರಿಶೋಧಕ(ಸಿಎಜಿ)ರಿಗೇ ಬಂದಂತಿದೆ. ಕಳೆದ ವಾರ ಸಂಸತ್ತಿನಲ್ಲಿ ಮಂಡಿಸಿದ ಕೇಂದ್ರ ಸರಕಾರದ ಲೆಕ್ಕಪತ್ರಗಳನ್ನು ಕುರಿತಾದ ಸಿಎಜಿ ವರದಿ ಯೋಜನಾ ವೆಚ್ಚದ ಬಗ್ಗೆ ಪರಿಶೋಧನೆಗೆ ಸಲ್ಲಿಸಿದ ಮಾಹಿತಿಗಳು ಸಂದೇಹಾಸ್ಪದವಾಗಿವೆ ಎಂದಿದೆ.

ಹಣಕಾಸು ಲೆಕ್ಕಪತ್ರಗಳ ಪ್ರಕಾರ 2011–12ರಲ್ಲಿ ರೂ.2,41,668 ಕೋಟಿ ಯೋಜನಾ ಗ್ರಾಂಟ್ ಆಗಿ ಬಿಡುಗಡೆ ಮಾಡಲಾಗಿದೆ. ಇ–ಲೇಖಾ ಮಾಹಿತಿಯ ಪ್ರಕಾರ ನಿಜವಾದ ಖರ್ಚು ರೂ. 2,93,481 ಕೋಟಿ. ಇನ್ನು ಕೇಂದ್ರೀಯ ಯೋಜನಾ ಉಸ್ತುವಾರಿ ವ್ಯವಸ್ಥೆ(ಸಿಪಿಎಸ್‌ಎಂಎಸ್) ಪ್ರಕಾರ ರೂ.3,27,011 ಕೋಟಿ. ಈ ಮೂರೂ ಮಾಹಿತಿಗಳನ್ನು ಕಲೆ ಹಾಕಿರುವುದು ಹಣಕಾಸು ಇಲಾಖೆಯ ಅಡಿಯಲ್ಲಿರುವ 'ಲೆಕ್ಕಪತ್ರಗಳ ಮಹಾ ನಿಯಂತ್ರಣಾಧಿಕಾರಿ' (ಸಿಜಿಎ)ಗಳ ಕಚೇರಿ.

ಯೋಜನಾ ವೆಚ್ಚಗಳಿಗೆ ಸಂಬಂಧಿಸಿದಂತೆ ಒಟ್ಟು ಮಾಹಿತಿಗಳಲ್ಲಿ ಇಷ್ಟೊಂದು ವ್ಯತ್ಯಾಸಗಳು ಈ ಮಾಹಿತಿ ಕಲೆಹಾಕುವುದರಲ್ಲಿ ಗಂಭೀರ ಲೋಪಗಳಿರುವುದನ್ನು ತೋರಿಸುತ್ತದೆ ಎಂದು ಮಹಾಲೆಕ್ಕ ಪರಿಶೋಧಕರ ವರದಿ ಹೇಳಿದೆ. ಈ ಬಗ್ಗೆ ಹಣಕಾಸು ಇಲಾಖೆಯ ಸಿಜಿಎ ನೀಡಿರುವ ಸ್ಪಷ್ಟೀಕರಣ ಈ ಅಂಕಿ–ಅಂಶಗಳ ನಿಖರತೆಯ ಬಗ್ಗೆ ಯಾವ ಭರವಸೆಯನ್ನೂ ಕೊಡುವುದಿಲ್ಲ ಎಂದಿರುವ ಸಿಎಜಿ, ಇಂತಹ ಸಂದೇಹಾಸ್ಪದ ಮಾಹಿತಿಯ ಆಧಾರದಲ್ಲಿ ಸಾರ್ವಜನಿಕ ವೆಚ್ಚದ ನಿರ್ವಹಣೆ ಮತ್ತು ನಿರ್ಧಾರ ಗಂಭೀರ ಅಪಾಯಗಳಿಂದ ಕೂಡಿದೆ ಎಂದು ಹೇಳಿದೆ.


ಇದಲ್ಲದೆ ಈ ಎಲ್ಲ ಹಣ ನಿಜವಾಗಿಯೂ ಖರ್ಚಾಗಿದೆಯೇ ಎಂದು ಪರಿಶೋಧಿಸಲು ಯಾವ ದಾರಿಯೂ ಇಲ್ಲ, ಏಕೆಂದರೆ ಇವುಗಳಲ್ಲಿ ಬಹುಪಾಲು ನೇರವಾಗಿ ಜಿಲ್ಲಾ ಜಾರಿ ಸಂಸ್ಥೆಗಳಿಗೆ ಬಿಡುಗಡೆ ಮಾಡಿರುವಂತವುಗಳು ಎಂದೂ ಸಿಎಜಿ ಟಿಪ್ಪಣಿ ಮಾಡಿದೆ.

ಜಗದಗಲ

ಶರತ್‌ಚಂದ್ರ

ಈಜಿಪ್ಟಿನಲ್ಲಿ ಪ್ರಜಾಪ್ರಭುತ್ವಕ್ಕೆ ಮತ್ತೆ ಕಂಟಕ

ಈಜಿಪ್ಟಿನಲ್ಲಿ ಕಳೆದ ಕೆಲವು ದಿನಗಳಲ್ಲಿ ನಡೆದ ಮಾರಣ ಹೋಮ ಪ್ರಜಾಪ್ರಭುತ್ವಕ್ಕೆ ಕಂಟಕ ತಂದಿದೆ. ಈ ವರೆಗೆ ಗಟ್ಟಿಯಾಗುತ್ತಾ ನಡೆದಿದ್ದ ಪ್ರಜಾಪ್ರಭುತ್ವ ಚಳುವಳಿಗೆ ತೀವ್ರ ಹಿನ್ನಡೆಯಾಗುವ ಲಕ್ಷಣಗಳು ಕಂಡು ಬರುತ್ತಿವೆ. ಮಾಜಿ ಅಧ್ಯಕ್ಷ ಮೊರ್ಸಿಯವರ ಮುಸ್ಲಿಂ ಬ್ರದರ್ ಹುಡ್ ಬೆಂಬಲಿಗರು



ಮತ್ತು ಮಿಲಿಟರಿ ಘರ್ಷಣೆಯಲ್ಲಿ ಅಧಿಕೃತ ಸಂಖ್ಯೆಗಳ ಪ್ರಕಾರವೇ ಸತ್ತವರ ಸಂಖ್ಯೆ 600 ಮೀರಿದೆ. ತೀವ್ರವಾಗಿ ಗಾಯಗೊಂಡವರ ಸಂಖ್ಯೆ 3 ಸಾವಿರ ಮೀರಿದೆ. ನಿಜವಾದ ಸಂ–ಖ್ಯೆ ಇನ್ನೂ ಹೆಚ್ಚಿರಬಹುದು. ಘರ್ಷಣೆಯ ಹಿಂಸಾಚಾರದಿಂದ ಬೇಸತ್ತ ಉಪಾಧ್ಯಕ್ಷ ಎಲ್ ಬಾರಡೆಯಿ ರಾಜೀನಾಮೆ ಕೊಟ್ಟಿದ್ದಾರೆ. ಆದರೆ ಅವರು ಪ್ರತಿನಿಧಿಸಿದ ನೇಶನಲ್ ಸಾಲ್ವೇಶನ್ ಫ್ರಂಟ್ ಮಿಲಿಟರಿಯ ಹಿಂಸಾಚಾರವನ್ನು ಖಂಡಿಸಿಲ್ಲ. ಬದಲಾಗಿ ಸಮರ್ಥಿಸಿದೆ. ಅದೇ ರೀತಿ ಮೊರ್ಸಿ–ರಾಜಿನಾಮೆಗೆ ಸಹಿ ಸಂಗ್ರಹ ಮಾಡಿದ ತಮರೋದ್ ಸಹ ಮಿಲಿಟರಿ ಕ್ರಮವನ್ನು ಬೆಂಬಲಿಸಿದೆ. ತೆಹ್ರಿರ್ ಚೌಕದ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ ಎಡ ಒಲವಿನ ಮೂರನೇ ಶಕ್ತಿ 'ಎಪ್ರಿಲ್ 6ರ ಚಳುವಳಿ' ಮಾತ್ರ ಮಿಲಿಟರಿ ಮತ್ತು ಮೊರ್ಸಿ ಬೆಂಬಲಿಗರಿಬ್ಬರೂ ನಡೆಸಿದ ಹಿಂಸಾಚಾರವನ್ನು ಖಂಡಿಸಿದೆ. ಅದೇ ರೀತಿ ಇತರ ಇಸ್ಲಾಮಿಕ್ ರಾಜಕೀಯ ಶಕ್ತಿಗಳಾದ ಅಲ್–ನೌರ್ ಮತ್ತು ಜಮಾ–ಅಲ್–ಇಸ್ಲಾಮಿಯಗಳೂ ಎರಡೂ ಕಡೆಯ ಹಿಂಸಾಚಾರವನ್ನು ಖಂಡಿಸಿವೆ.

ಅಧ್ಯಕ್ಷ ಮೊರ್ಸಿ ತನ್ನ ಪ್ರಜಾಪ್ರಭುತ್ವ–ವಿರೋಧಿ ನಡೆಯಿಂದ ಕ್ರುದ್ಧರಾದ ಜನತೆಯ ಒತ್ತಡದಿಂದ ಅಧಿಕಾರ ಕಳೆದುಕೊಂಡಿದ್ದರು. ಮೊರ್ಸಿಯವರ ಮುಸ್ಲಿಂ ಬ್ರದರ್‌ಹುಡ್ ಮಧ್ಯಂತರ ಸರ್ಕಾರದ ಜತೆ ಪ್ರಜಾಪ್ರಭುತ್ವ ಸ್ಥಿತ್ಯಂತರ ಮತ್ತು ಹೊಸ ಸಂವಿಧಾನದ ಬಗ್ಗೆ ರಾಜಕೀಯ ಮಾತುಕತೆ ನಡೆಸುವ ಬದಲು ಘರ್ಷಣೆಗೆ ಇಳಿಯಿತು. ಮೊರ್ಸಿಯವರನ್ನು ಮತ್ತೆ ಅಧ್ಯಕ್ಷರಾಗಿ ನೇಮಿಸುವ ಪೂರ್ವ ಶರತ್ತಿಗೆ ಅಂಟಿಕೊಂಡಿತು. ಪ್ರಜಾಪ್ರಭುತ್ವ ಗಟ್ಟಿಗೊಳಿಸಲು ಬೇರೆ ಯಾವುದೇ ರಾಜಕೀಯ ಶಕ್ತಿಗಳ ಜತೆ ಸೇರಲು ನಿರಾಕರಿಸಿತು. ಮುಸ್ಲಿಂ ಬ್ರದರ್‌ಹುಡ್ ಮಿಲಿಟರಿ ಮೇಲೆ ಅಲ್ಲದೆ ಇತರ ಹಿಂಸಾಚಾರಗಳಲ್ಲೂ ತೊಡಗಿತ್ತು. ಹಲವು ಕ್ರಿಶ್ಚಿಯನ್ ಚರ್ಚ್‌ಗಳು, ಕಾಲೊನಿ ಮತ್ತಿತರ ಆಸ್ತಿ ಪಾಸ್ತಿಗಳ ಮೇಲೂ ಭಾರಿ ದಾಳಿ ನಡೆಸಿದರು. ಸರ್ಕಾರದ ಕಟ್ಟಡ ಮತ್ತು ಆಸ್ತಿಗಳ ಮೇಲೆ ದಾಳಿ ನಡೆಸಿದರು. ಮುಸ್ಲಿಂ ಬ್ರದರ್‌ಹುಡ್‌ನ ಹಿಂಸಾಚಾರ ಮಿಲಿಟರಿಯ ಹಿಂಸಾಚಾರದ ವಿರುದ್ಧ ಬರಿಯ ರಕ್ಷಣಾತ್ಮಕ ಕ್ರಮವಾಗಿರಲಿಲ್ಲ. ಮಸೀದಿಗಳಲ್ಲಿ ಪಕ್ಷದ ಕಚೇರಿಗಳಲ್ಲಿ ಶಸ್ತ್ರಾಸ್ತ್ರ ಸಂಗ್ರಹಿಸಿ ವ್ಯವಸ್ಥಿತವಾಗಿ ಸರ್ಕಾರ ಮತ್ತು ಮಿಲಿಟರಿ ಆಸ್ತಿ ಪಾಸ್ತಿಗಳ ಮೇಲೆ ದಾಳಿ ಮಾಡಲಾಗಿದೆ, ಮಿಲಿಟರಿ ಮತ್ತು ಪೊಲೀಸುಗಳಲ್ಲೂ ಭಾರಿ ಸಾವು–ನೋವು ಇದನ್ನು ಸ್ಪಷ್ಟ ಪಡಿಸಿದೆ.

ಈಜಿಪ್ಟಿನ ಮಿಲಿಟರಿ ಮತ್ತು ಮುಸ್ಲಿಂ ಬ್ರದರ್ ಹುಡ್ ಈ ಎರಡಕ್ಕೂ ಪ್ರಜಾಪ್ರಭುತ್ವ ಗಟ್ಟಿಗೊಳಿಸುವ ರಾಜಕೀಯ ಮಾತುಕತೆಗಳು ಬೇಕಾಗಿರಲಿಲ್ಲ. ಸಶಸ್ತ್ರ ಘರ್ಷಣೆಯೇ ಬೇಕಾಗಿದ್ದದ್ದು. ಈ ಘರ್ಷಣೆ ಬಳಸಿ ತಮ್ಮ ರಾಜಕೀಯ ಶಕ್ತಿ ಕ್ರೋಢಿಕರಿಸುವುದು ಮಾತ್ರ ಬೇಕಾಗಿತ್ತು. ಈಗ ದೇಶದ ರಾಜಕೀಯದಲ್ಲಿ ಸಂಘಟಿತವಾದ ಶಕ್ತಿಗಳಾಗಿರುವ ಇವಕ್ಕೆ ನಿಜವಾದ ಪ್ರಜಾಪ್ರಭುತ್ವ ಬೇಕಾಗಿಲ್ಲ. ಈ ಎರಡೂ ಪ್ರಜಾಪ್ರಭುತ್ವ–ವಿರೋಧಿ ಶಕ್ತಿಗಳಿಗೆ ಅಮೆರಿಕನ್ ಸಾಮ್ರಾಜ್ಯಶಾಹಿ ಮತ್ತು ಪ್ರಾದೇಶಿಕ ಶಕ್ತಿಗಳಾದ ಸೌದಿ ಅರೇಬಿಯಾ, ಕತಾರ್ ಮುಂತಾದ ಕೊಲ್ಲಿ ಶೇಕ್‌ಗಳು ಪ್ರತ್ಯಕ್ಷ ಪರೋಕ್ಷ ಬೆಂಬಲ ಕೊಡುತ್ತಿದ್ದಾರೆ. ಅಮೆರಿಕ ಮಿಲಿಟರಿ ಆಡಳಿತ ಮುಂದುವರೆಯುವುದು ಅಸಾಧ್ಯವೆಂದು ತಿಳಿದಾಗ, ಮುಸ್ಲಿಂ ಬ್ರದರ್‌ಹುಡ್ ಬೆಂಬಲ ಕೊಟ್ಟಿತು. ಮುಸ್ಲಿಂ ಬ್ರದರ್‌ಹುಡ್ ಮತ್ತು ಮಿಲಿಟರಿ ಅಧಿಕಾರ ಹಂಚಿಕೊಂಡು ಅವುಗಳ ಮಧ್ಯೆ ಸಮತೋಲ ಕಾಪಾಡಲು ಪ್ರಯತ್ನಿಸುತ್ತಿದೆ. ಕತಾರ್ ಮುಂತಾದ ಕೊಲ್ಲಿ ಶೇಕ್‌ಗಳು ಮಿಲಿಟರಿಗೆ ಬೆಂಬಲ ಕೊಡುತ್ತಿವೆ. ನಿಜವಾದ ಪ್ರಜಾಪ್ರಭುತ್ವ ಸ್ಥಾಪಿತವಾದರೆ ತಮಗೆ ಉಳಿಗಾಲವಿಲ್ಲ ಎಂದು ಅವರಿಗೆ ಗೊತ್ತು.

ಆದರೆ ಈ ಪ್ರಕರಣದಲ್ಲಿ ಇತರ ವಿರೋಧಿ ಶಕ್ತಿಗಳ ಎರಡು ವಿಭಾಗಗಳು ಈ ಎರಡು ಶಕ್ತಿಗಳ ಬಲೆಗೆ ಬಿದ್ದು ತಮ್ಮ ಶಕ್ತಿಯನ್ನು ಮತ್ತು ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸಿದ್ದಾರೆ. ಮಿಲಿಟರಿ ಮತ್ತು ಮುಸ್ಲಿಂ ಬ್ರದರ್‌ಹುಡ್ ಎರಡೂ ಪ್ರಜಾಪ್ರಭುತ್ವ–ವಿರೋಧಿ ಶಕ್ತಿಗಳಾಗಿದ್ದು ಅವೆರಡರ ವಿರುದ್ಧ ಜನರನ್ನು ಅಣಿ ನೆರೆಸಿ ಹೋರಾಡಿದ್ದು ಸರಿಯಾಗೇ ಇತ್ತು. ಒಂದರ ಜತೆ ಮೈತ್ರಿಕೂಟ ಬಳಸಿ ಇನ್ನೊಂದನ್ನು ಮಟ್ಟ ಹಾಕುವುದೂ ಸಹ ತಪ್ಪು ತಂತ್ರವೇನಲ್ಲ. ಮೊರ್ಸಿಯನ್ನು ಜನರ ಚಳುವಳಿ ಮತ್ತು ಮಿಲಿಟರಿ ಬೆಂಬಲದಿಂದ ಅಧಿಕಾರದಿಂದ ಕೆಳಗಿಳಿಸುವುದು ಸರಿಯಾಗಿ–ತ್ತು. ಆದರೆ ಸಾಕಷ್ಟು ಜನಬೆಂಬಲ ಇರುವ ಮುಸ್ಲಿಂ ಬ್ರದರ್‌ಹುಡ್‌ನ್ನು ಮಟ್ಟ ಹಾಕಲು ಮಿಲಿಟರಿ ಬಲಪ್ರಯೋಗ ಮತ್ತು ವ್ಯಾಪಕ ಹಿಂಸಾಚಾರ ಬಳಸುವುದಕ್ಕೆ ಒತ್ತಾಯ ಮಾಡುವುದು ಅಥವಾ ಬೆಂಬಲ ನೀಡುವುದು ತಪ್ಪು ಕ್ರಮವಾಗಿತ್ತು. ಜನಬೆಂಬಲದ ಬಲ ಬಳಸಿ ಮುಸ್ಲಿಂ ಬ್ರದರ್‌ಹುಡ್‌ನ ಸವಾಲನ್ನು ಎದುರಿಸಬೇಕಾಗಿತ್ತೇ ವಿನಃ ಮಿಲಿಟರಿ ಬಲಪ್ರಯೋಗದಿಂದಲ್ಲ. ಈ ಎರಡೂ ಶಕ್ತಿಗಳ ಹಿಂದಿರುವ ವಿದೇಶೀ ಶಕ್ತಿಗಳ ಹುನ್ನಾರವನ್ನೂ ಅವರು ಸರಿಯಾಗಿ ಅಂ–ದಾಜು ಮಾಡಿದಂತಿಲ್ಲ. ಈ ತಪ್ಪಿನಿಂದಾಗಿ ಮಿಲಿಟರಿ ಮತ್ತು ಮುಸ್ಲಿಂ ಬ್ರದರ್‌ಹುಡ್ ಎರಡರ ನೆಲೆಯನ್ನೂ ಗಟ್ಟಿಗೊಳಿಸಿದಂತಾಗಿ ವಿರೋಧಿ ಶಕ್ತಿಗಳಿಗೆ ಅವಕಾಶ ಕುಗ್ಗಿದಂತಾಗಿದೆ. ಸದ್ಯಕ್ಕೆ ಪ್ರಜಾಪ್ರಭುತ್ವದ ಮುನ್ನಡೆಗೆ ಕಂಟಕಪ್ರಾಯವಾಗಿದೆ. ಎಡ ಒಲವಿನ ಮೂರನೇ ಶಕ್ತಿ 'ಎಪ್ರಿಲ್ 6ರ ಚಳುವಳಿ' ಈ ತಪ್ಪು ಮಾಡಿಲ್ಲ. ತಮರೋದ್ ಮತ್ತು ನ್ಯಾಶನಲ್ ಸಾಲ್ವೇಶನ್ ಫ್ರಂಟ್ ಈ ತಪ್ಪಿನಿಂದ ಪಾಠ ಕಲಿತರೆ ಇನ್ನೂ ಈಜಿಪ್ಟಿನ ಪ್ರಜಾಪ್ರಭುತ್ವ ಚಳುವಳಿಯನ್ನು ಮುನ್ನಡೆಸಲು ಅವಕಾಶವಿದೆ. ●

ಅಂಧಶ್ರದ್ಧೆ, ಜಾತಿಬೇಧದ...

ಪುಟ 8 ರಿಂದ

ಆಡಿದ ಮಾತುಗಳು ಅನುಭವ ಜನ್ಯ, ಬದಲಾವಣೆ ಬಯಕೆಯ ಬದ್ಧತೆಯುಳ್ಳದ್ದು. ವಿಶೇಷವಾಗಿ,ಧಾರ್ಮಿಕಕ್ಷೇತ್ರದ ನಿಡುಮಾಮಿಡಿ ಶ್ರೀ ವೀರಭದ್ರ ಚನ್ನಮಲ್ಲ ಸ್ವಾಮೀಜಿಯವರು, ಸಾಣೆಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯಸ್ವಾಮೀಜಿರವರು, ಪಂಚಮಸಾಲಿ ಪೀಠದ ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ, ಹಿರಿಯ ಸಾಹಿತಿಗಳಾದ ಪ್ರೊ.ಚಂದ್ರಶೇಖರ ಪಾಟೀಲ್, ಡಾ. ಕೆ.ಮರುಳಸಿದ್ಧಪ್ಪ, ಪ್ರೊ ಎಸ್.ಜಿ.ಸಿದ್ಧರಾಮಯ್ಯ, ಪ್ರೊ.ಟಿ.ಆರ್. ಚಂದ್ರಶೇಖರ್, ಡಾ.ಜಿ.ರಾಮಕೃಷ್ಣ, ದಲಿತ ಹೋರಾಟಗಾರರಾದ ಮಾವಳ್ಳಿ ಶಂಕರ್, ವೈದ್ಯರೂ, ಬರಹಗಾರರೂ ಆದ ಡಾ.ವಸುಂದರಾ ಭೂಪತಿ, ಡಾ.ಪ್ರಕಾಶ್ ಸಿ. ರಾವ್, ವಿಜ್ಞಾನಿ ಡಾ ಚಟರ್ಜಿ, ಇತಿಹಾಸಕಾರ ಅರುಣಿ, ಲೋಕಸತ್ತಾದ ಕೃಷ್ಣಾರೆಡ್ಡಿ, ಆದಿಮದ ಶ್ರೀಪಾದಭಟ್, ವಿಚಾರವಾದಿ ಹುಲಿಕಲ್ ನಟರಾಜ್, ಮಲೆಕುಡಿಯ ಯುವ ಹೋರಾಟಗಾರ ವಿಠ್ಠಲ ಮಲೆಕುಡಿಯ ಮುಂತಾದವರು. ಮಾತ್ರವಲ್ಲ, ರಾಜ್ಯದ ಹಲವಾರು ಜಿಲ್ಲೆಗಳಿಂದ ಸಿಪಿಐ(ಎಂ) ಮತ್ತಿತರೆ ಸಂಘಟನೆಗಳ ಮುಖಂಡರು, ಹೋರಾಟಗಾರರು, ಚಿಂತಕರು ಭಾಗವಹಿಸಿದ್ದು ಮಹತ್ವಪೂರ್ಣ.

ಹರಿತಗೊಳ್ಳಲಿ ಆಂದೋಲನ

ಇಲ್ಲಿನ ಮಂಡಿತವಾದ ಅಭಿಪ್ರಾಯ, ಬಂದ ಚರ್ಚೆಗಳು ವಿಭಿನ್ನ ಬಗೆ–ಯಾದರೂ ವ್ಯಕ್ತಗೊಂಡ ಕಳಕಳಿ ಅನನ್ಯ. ಇದು ಕೇವಲ ವಿಮರ್ಶೆಗೆ ಮಾತ್ರ ಸೀಮಿತಗೊಳ್ಳದೇ ಸ್ವವಿಮರ್ಶೆಗೂ ಇಂಬು ನೀಡಿತು.ಹಾಗೇ ಆದ್ಯತೆಗಳನ್ನು ಗುರುತಿಸಿತು. ಸಮಾವೇಶದ ಉದ್ಘಾಟನೆ, ವಿಚಾರ ಗೋಷ್ಠಿಗಳು, ಸಮಾರೋಪ ಎಲ್ಲವೂ ಗಂಭೀರ. ಹೀಗಾಗಿಯೇ ಸಮಾವೇಶದ ಘೋಷಣೆ, ಮುಂದಿನ ಕಾರ್ಯಯೋಜನೆ ಮಂಡಿತವಾದಾಗ ಮೂಡಿದ ಒಮ್ಮತವೂ ಗಮನಾರ್ಹ.

ಈ ಸಮಾವೇಶದ ಸಂದೇಶ ಮತ್ತು ನಿರ್ಣಯವನ್ನು ಎಲ್ಲಾ ಕಡೆಗಳಲ್ಲಿಯೂ ಜಾರಿಗೊಳಿಸಬೇಕಿದೆ, ಆಂದೋಲನವನ್ನು ಇನ್ನಷ್ಟು ಹರಿತಗೊಳಿಸಬೇಕಿದೆ. ●

ಜನಶಕ್ತಿ
ಕನ್ನಡ ವಾರಪತ್ರಿಕೆ

ಷ್ಟ ಪಂಕ್ತಿಬೇಧ....

9 ರಿಂದ

ನ್ನು ಕೆಣಕುವ ಚಳುವಳಿ ನಿರಂತರವಾಗಿ
ಕು ಎಂದರು.

**ತಿವಾದ ಕೋಮುವಾದದ ವಿರುದ್ಧ
ಒಗ್ಗಟ್ಟಿನ ಹೋರಾಟ ಅಗತ್ಯ**

–ಮಾವಳ್ಳಿ ಶಂಕರ್

ುವ ಸರ್ಕಾರಗಳು ಜಾತಿತಾರತಮ್ಯ
ವಂಚಕ ವಿಚಾರಗಳಿಗೆ ಕುಮ್ಮಕ್ಕು
ತ್ತೀವೆ. ಹಿಂದಿನ ಬಿಜೆಪಿ ಸರ್ಕಾರ
ಕಾಲೇಜುಗಳಲ್ಲಿ ಭಗವತ್ ಗೀತೆ
ಾನದ ಮೂಲಕ ಜಾತಿವಾದಿ,
ುವಾದಿ ಪ್ರಚಾರಕ್ಕೆ ಬೆಂಬಲ ನೀಡಿತ್ತು.
ಾನದ ಪ್ರಗತಿಪರ ತತ್ವಗಳನ್ನು
ೀಲು ಮಾಡುವ ಸಂಚುಗಳು
ವೆ. ಈ ಸವಾಲನ್ನು ಪ್ರಗತಿಪರರೆಲ್ಲರು
ಡಿ ಎದುರಿಸಬೇಕು ಮತ್ತು
ಿಸಬೇಕು ಎಂದು ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ)ದ ರಾಜ್ಯ ಸಂಚಾಲಕರಾದ ಮಾವಳ್ಳಿಶಂಕರ್‌ರವರು ಹೇಳಿದರು.

'ಜಾತಿತಾರತಮ್ಯ ಸಂಬಂಧಿತ ಅಂಧಶ್ರದ್ಧೆಗಳು ಮೊದಲ ಗುರಿಯಾಗಲಿ'

– ಜಿ.ಎನ್.ನಾಗರಾಜ್

ಎಲ್ಲ ಬಗೆಯ ಸಾಮಾಜಿಕ ಅನಿಷ್ಟಗಳ ವಿರುದ್ಧವೂ ರಾಜ್ಯದಲ್ಲಿ ಬಲಿಷ್ಟ ಚಳುವಳಿ ಆಗಬೇಕಿದೆ. ರಾಜ್ಯದ ಎಲ್ಲಾ ಜಿಲ್ಲೆ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಪ್ರಗತಿಪರರನ್ನು ಒಳಗೊಂಡಂತೆ ಸಮಾವೇಶ ಹಾಗೂ ಚಳುವಳಿಗಳನ್ನು ರೂಪಿಸಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಎಲ್ಲ ಬಗೆಯ ಮೂಢನಂಬಿಕೆಗಳು, ಅಂಧಶ್ರದ್ಧೆಗಳ ವಿರುದ್ದ ಹೋರಾಟ ರೂಪಿಸಬೇಕೆಂಬ ಆಶಯ ಸರಿಯಾದದ್ದು. ಜಾತಿ ವಿರೋಧಿ ಚಳುವಳಿ ಸ್ವಾತಂತ್ರ್ಯ ಬಂದ ದಶಕಗಳಲ್ಲಿ ಇತ್ತು. ನಂತರ 70 ರ ದಶಕದಲ್ಲಿ ಮತ್ತೆ ಎದ್ದು ಬಂತು. ಆದರೆ ಇಂದು ಇದೆಲ್ಲ ಅಡಗಿ ಜಾತಿವಾದ ಮುಂದೆ ಬರುತ್ತಿದೆ. ಜಾತಿ ವ್ಯವಸ್ಥೆಯ ಭಾಗವಾಗಿ ಬೇರೆ ಬೇರೆ ಕೆಟ್ಟ ಆಚರಣೆಗಳು ನಡೆಯುತ್ತಿವೆ. ಈ ಹಂತದಲ್ಲಿ ಮುಂಚೂಣಿಗೆ ಬಂದಿರುವ ಜಾತಿ ಪ್ರಶ್ನೆಯನ್ನು ಕೇಂದ್ರವಾಗಿರಿಸಿಕೊಂಡು ಜಾತಿ ತಾರತಮ್ಯಕ್ಕೆ ಸಂಬಂಧಿಸಿದ ಅಂಧಶ್ರದ್ಧೆ, ಸಾಮಾಜಿಕ ಅನಿಷ್ಟಗಳ ವಿರುದ್ದ ಗಮನ ಕೇಂದ್ರೀಕರಿಸಿ ಚಳುವಳಿ ರೂಪಿಸುವ ಅಗತ್ಯವಿದೆ. ಒಂದೊಂದು ಜಾತಿ ಒಳಗಿನ ಅಂಧಶ್ರದ್ಧೆ ಪ್ರಶ್ನೆಗಳನ್ನು ಪ್ರತ್ಯೇಕವಾಗಿ ಎತ್ತಿಕೊಳ್ಳಬೇಕಾಗಿದೆ ಎಂದು ಪ್ರಸ್ತುತ ಈ ಚಳುವಳಿಗೆ ಬೇಕಾದ ಆದ್ಯತೆಯ ಕುರಿತು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್. ನಾಗರಾಜ್ ಹೇಳಿದರು.

'ಕೋಮುವಾದಿಗಳನ್ನು ಮಟ್ಟಹಾಕಲು'

– ಮಾರುತಿ ಮಾನ್ಪಡೆ

ಸಮಾರಂಭದ ಆಧ್ಯಕ್ಷತೆ ವಹಿಸಿದ್ದ ಮಾರುತಿ ಮಾನ್ಪಡೆಯವರು ತಮ್ಮ ಅಧ್ಯಕ್ಷೀಯ ಮಾತುಗಳನ್ನಾಡಿ ರಾಜ್ಯದಲ್ಲಿ ಕೋಮುವಾದಿ ಶಕ್ತಿಗಳನ್ನು ಮಟ್ಟಹಾಕಲು ಹಾಗೂ ಅವುಗಳ ಅಟ್ಟಹಾಸವನ್ನು ಮೆಟ್ಟಲು ಮುಂದಾಗಬೇಕು ಎಂದು ತಿಳಿಸಿದರು.

ಹಲವಾರು ಮಠಗಳಲ್ಲಿ ಜಾತಿ ವ್ಯವಸ್ಥೆ ಇದೆ. ದಲಿತರು ಇಂದು ಕ್ಷೌರ ಮಾಡಿಸಿಕೊಳ್ಳಲು ಸುಮಾರು 30 ಕಿಲೋಮಿಟರ್ ಗಟ್ಟಲೆ ದೂರ ಹೋಗಬೇಕಾದ ಪರಿಸ್ಥಿತಿ ಇಂದು ರಾಜ್ಯದ ನಾನಾ ಭಾಗಗಳಲ್ಲಿದೆ. ಅಲ್ಲದೆ ದಲಿತರನ್ನು ಅನೇಕ ಸ್ಥಳಗಳಲ್ಲಿ ಬಹಿಷ್ಕರಿಸಲಾಗುತ್ತಿದೆ. ಪರಿಶಿಷ್ಟ ಜಾತಿಗಳಲ್ಲಿ ಬರುವವರಲ್ಲೇ ಅಸ್ಪೃಶ್ಯನ್ನು ಮತ್ತು ಸ್ಪೃಶ್ಯರನ್ನೂ ಪರಸ್ಪರ ಎತ್ತಿಕಟ್ಟಿ ಒಡೆದು ಆಳುವ ನೀತಿಯನ್ನು ಹಿಂದೆ ಬಿಜೆಪಿ ಅನುಸರಿಸಿತ್ತು. ಇಂತಹ ನೀತಿಗಳ ವಿರುದ್ಧ ಹೋರಾಟ ನಡೆಸಬೇಕಿದೆ ಎಂದು ಮಾರುತಿ ಮಾನ್ಪಡೆ ಹೇಳಿದರು. ಆರಂಭದಲ್ಲಿ ಜನಶಕ್ತಿ ಸಂಗಾತಿ ಎಸ್.ವೈ. ಗುರುಶಾಂತರವರು ಪ್ರಾಸ್ತಾವಿಕ ಮಾತುಗಳನ್ನಾಡಿ ಸಮಾವೇಶ ನಡೆಯುತ್ತಿರುವ ಸಂದರ್ಭ ಹಾಗೂ ಇದರ ಆಶಯದ ಕುರಿತು ವಿವರಿಸಿದರು. ಸಮುದಾಯದ ಸಂಗಾತಿ ಟಿ. ಸುರೇಂದ್ರರಾವ್ ಸ್ವಾಗತಿಸಿದರು. ಗೋಪಾಲಕೃಷ್ಣ ಅರಳಹಳ್ಳಿ ವಂದಿಸಿದರು.

ರ ಪರ್ಯಾಯ ......

ಟ 7 ರಿಂದ)

ರಿಕ ಬೇಡಿಕೆ ಸಂಕುಚಿತಗೊಂಡಿದೆ
ುದು ಸ್ಪಷ್ಟ. ಇದರಲ್ಲಿ ಆಶ್ಚರ್ಯವೇನಿಲ್ಲ.
ರ ಹಣದುಬ್ಬರ ಮತ್ತು ಹಣಕಾಸು
ೀಕರಣದ ಹೆಸರಿನಲ್ಲಿ ಬಡವರಿಗಾಗಿ
ಸಬ್ಸಿಡಿಗಳಲ್ಲಿ ಗಮನಾರ್ಹ ಕಡಿತಗಳು
ನ್ನು ಉಂಟು ಮಾಡಿವೆ.
ೀಗೆ, ಮುಖ್ಯವಾಗಿ ವಿದೇಶಿ
ವಾಳದಿಂದಲೇ ಆರ್ಥಿಕ ವ್ಯವಸ್ಥೆಯಲ್ಲಿ
ತುಂಬುವ ಸದ್ಯದ ಕಾರ್ಯತಂತ್ರ
ಕೆಗಳನ್ನು ಹೆಚ್ಚಿಸುವುದರ ಮೇಲೆಯೇ
ಕೇಂದ್ರೀಕರಿಸುತ್ತದೆ. ನಮ್ಮ ಪ್ರಧಾನ
ಗಳು ಮತ್ತು ಹಣಕಾಸು ಮಂತ್ರಿಗಳು
ಕೇಳಿಕೊಂಡರೂ, ಸಾರ್ವಜನಿಕ
ುದ ಉದ್ದಿಮೆಗಳ ಮುಖ್ಯಸ್ಥರುಗಳು
ಲಕ್ಷಾಂತರ ಕೋಟಿ ರೂ.ಗಳಿಗೂ
ದ ನಗದು ಮಿಗುತಾಯಗಳನ್ನು
ಮಾಡುವಂತೆ ಒತ್ತಾಯ ಮಾಡಲು
ವಾಗಿಲ್ಲ ಎಂಬುದನ್ನು ನೆನೆಪಿಸಿಕೊಳ್ಳಿ.
ಹ ಹೂಡಿಕೆಗಳನ್ನು ಮಾಡಿದರೆ,
ಂದ ಉತ್ಪಾದಿಸುವ ಸರಕುಗಳನ್ನು
ಬಹುದಾದ ಮಾರುಕಟ್ಟೆ ಎಲ್ಲಿದೆ?
ಿಕ ವ್ಯಾಪಾರ ಸಂಕುಚಿತಗೊಳ್ಳುತ್ತಿದೆ,
ಂದಾಗಿ ಭಾರತೀಯ ರಫ್ತುಗಳು
ುತ್ತಿವೆ. ದೇಶದೊಳಗೆ ಭಾರತೀಯ
ಯ ಕೈಗಳಲ್ಲಿ ಖರೀದಿ ಸಾಮರ್ಥ್ಯ
ುಖಗೊಳ್ಳುತ್ತಿದೆ. ಅಂದರೆ ಆಂತರಿಕ
ಕೆಯೂ ಕುಸಿಯುತ್ತಿದೆ.

ತ್ಪಾದಕ ಹೂಡಿಕೆ

ಂತರಿಕ ಬೇಡಿಕೆಯನ್ನು ಹೆಚ್ಚಿಸದೆ,
ಲ ಹಣಕಾಸು ಲಭ್ಯತೆಯನ್ನು
, ವಿದೇಶಿ ಹೂಡಿಕೆಗಳಿಗೆ ಇನ್ನಷ್ಟು
ಗಳನ್ನು ತೆರೆದು ಕೊಟ್ಟರೆ, ಈ ಹಣಕಾಸು
ಹೂಡಿಕೆಗಳಾಗದೆ ಜೂಜುಕೋರ
ವಟಿಕೆಗಳತ್ತ ಹರಿಯುತ್ತದಷ್ಟೇ. ಇದಕ್ಕೆ
ಚೆಗೆ ರಿಯಲ್ ಎಸ್ಟೇಟ್ ಮತ್ತು ಚಿನ್ನದ ಬೆಲೆಗಳು ಆಕಾಶದೆತ್ತರಕ್ಕೆ ಏರಿರುವುದೇ ಸಾಕ್ಷಿ. ಶ್ರೀಮಂತರು ತಮ್ಮ ಹಣವನ್ನು 'ಅಮೂಲ್ಯ ಆಸ್ತಿಗಳು' ಎನ್ನಲಾದ ಇಂತಹ ದಾರಿಗಳಲ್ಲಿ, ತೊಡಗಿಸುತ್ತಿದ್ದಾರೆ. ಒಂದು ಸರ್ವೆಯ ಪ್ರಕಾರ ಇಂತಹ 'ಅಮೂಲ್ಯ ಆಸ್ತಿಗಳು' ಎಂದರೆ ಕಲಾಕೃತಿಗಳು, ಪ್ರಶಸ್ತ ಲೋಹಗಳು, ಅಂತಹ ಲೋಹಗಳು ಮತ್ತು ಪ್ರಶಸ್ತ ಶಿಲೆಗಳಿಂದ ಮಾಡಿದ ಆಭರಣಗಳು ಇತ್ಯಾದಿಗಳಲ್ಲಿ ಅವರು ಹಣ ತೊಡಗಿಸುತ್ತಿದ್ದಾರೆ. 2007–12 ರ ಅವಧಿಯಲ್ಲಿ ಈ "ಅಮೂಲ್ಯ' ಸ್ವರೂಪದ ಹೂಡಿಕೆಗಳ ಮೌಲ್ಯ ಸದ್ಯದ ಬೆಲೆಗಳಲ್ಲಿ 4.5 ಪಟ್ಟು ಹೆಚ್ಚಿದೆ. ಸ್ಥಿರ ಬೆಲೆಗಳಲ್ಲೂ, ಒಟ್ಟು ಹೂಡಿಕೆಗಳಲ್ಲಿ ಇಂತಹ 'ಅಮೂಲ್ಯ' ಹೂಡಿಕೆಗಳ ಪ್ರಮಾಣ 2.9ಶೇ ದಿಂದ 6.2ಶೇ.ಕ್ಕೆ ಏರಿದೆ. ಇದರ ಜೊತೆಗೆ, ಅವರು ತಮ್ಮ ಹಣವನ್ನು ವೈಭವೋಪೇತ ವಿವಾಹ ಮಹೋತ್ಸವಗಳಂತಹ ಅಸಹ್ಯ ದುಂದುವೆಚ್ಚಗಳಿಗೆ ಬಳಸುತ್ತಿದ್ದಾರೆ.

ಅನುತ್ಪಾದಕ 'ಅಮೂಲ್ಯ ಆಸ್ತಿ'ಗಳಲ್ಲಿ ತಮ್ಮ ಮಿಗುತಾಯಗಳನ್ನು ಇಡುವ ಈ ಪ್ರವೃತ್ತಿ ಅಮೆರಿಕನ್ ಡಾಲರುಗಳು ಮತ್ತಿತರ ವಿದೇಶಿ ಕರೆನ್ಸಿಗಳ ಬೇಡಿಕೆಗಳು ವಿಪರೀತವಾಗಿ ಹೆಚ್ಚಲು ಕೂಡಾ ಕಾರಣವಾಗಿದೆ. ಶ್ರೀಮಂತರು ಸದ್ಯದ ಆರ್ಥಿಕ ನಿಧಾನಗತಿಯ, ಅನಿಶ್ಚಿತತೆಗಳ ಮತ್ತು ಲಾಭಗಳನ್ನು ಗರಿಷ್ಟಗೊಳಿಸಿಕೊಳ್ಳುವ ದಾರಿಗಳು ತೀವ್ರವಾಗಿ ಮುಚ್ಚಿಕೊಳ್ಳುತ್ತಿರುವ ಸಂದರ್ಭದಲ್ಲಿ ಭಾರತೀಯ ರೂಪಾಯಿಗಳ ಬದಲು ವಿದೇಶಿ ಕರೆನ್ಸಿಗಳಲ್ಲಿ ತಮ್ಮ ಉಳಿತಾಯಗಳನ್ನು ಮಾಡಲಾರಂಭಿಸಿದ್ದಾರೆ. ಸದ್ಯದ ವಿಪರೀತ ಹಣದುಬ್ಬರ ದರಗಳು ಮತ್ತು ಕಡಿಮೆ ಬಡ್ಡಿದರಗಳಿಂದಾಗಿ ಶ್ರೀಮಂತರಿಗೆ ಭಾರತೀಯ ರೂಪಾಯಿಗಳಲ್ಲಿ ತಮ್ಮ ಉಳಿತಾಯಗಳನ್ನು ಮಾಡುವುದರಲ್ಲಿ ಏನೇನೂ ಅರ್ಥವಿಲ್ಲ ಎಂದನಿಸಿದೆ. ಅಮೆರಿಕನ್ ಡಾಲರುಗಳಿಗೆ ಹೀಗೆ ವಿಪರೀತವಾಗಿ ಏರಿರುವ ಬೇಡಿಕೆ ವಿದೇಶಿ ಕರೆನ್ಸಿಗಳ ಬೆಲೆಗಳು ಏರುವುದರಲ್ಲಿ ಮತ್ತು ರೂಪಾಯಿಯ ಬೆಲೆ ಕುಸಿಯುವುದರಲ್ಲಿ ಒಂದು ಪ್ರಧಾನ ಅಂಶವಾಗಿದೆ.

ಇತ್ತೀಚೆಗೆ, ಪ್ರಧಾನ ಮಂತ್ರಿಗಳು, ನಾವು ಅನುತ್ಪಾದಕ ಆಸ್ತಿಗಳಲ್ಲಿ ಬಹಳಷ್ಟು ಹೂಡಿಕೆಗಳನ್ನು ಮಾಡುವಂತೆ ಕಾಣುತ್ತಿದೆ ಎಂದಿದ್ದರು. ಆದರೂ, ಇದಕ್ಕೆ ಉತ್ತೇಜನೆ ನೀಡುವ ಅಂಶಗಳನ್ನು ಸರಿಪಡಿಸುವ ಬದಲು ಅವರು ಹೆಚ್ಚೆಚ್ಚು ಎಫ್‌ಡಿಐ ಹರಿದು ಬರುವಂತೆ ಮಾಡುವ ಒಂದು ಕಾರ್ಯತಂತ್ರವನ್ನೇ ಅನುಸರಿಸುತ್ತಿದ್ದಾರೆ. ಇದು, ಜಾಗತಿಕ ಆರ್ಥಿಕ ನಿಧಾನಗತಿಯ ಸನ್ನಿವೇಶದಲ್ಲಿ, ವಿದೇಶಿ ಮತ್ತು ದೇಶೀ ಬಂಡವಾಳಗಳಿಗೆ ನಮ್ಮ ದೇಶದಲ್ಲಿ ತಮ್ಮ ಲಾಭಗಳನ್ನು ಗರಿಷ್ಟ ಮಟ್ಟಕ್ಕೆ ಏರಿಸಿಕೊಳ್ಳಲು ಹೆಚ್ಚೆಚ್ಚು ಅವಕಾಶಗಳನ್ನು ಕಲ್ಪಿಸಿಕೊಟ್ಟು ಶ್ರೀಮಂತರನ್ನು ಮತ್ತಷ್ಟು ಶ್ರೀಮಂತರಾಗಿಸುತ್ತದೆ ಮತ್ತು ಬಡವರನ್ನು ಇನ್ನಷ್ಟು ದಾರಿದ್ರ್ಯಕ್ಕೆ ತಳ್ಳುತ್ತದೆ. ಈ ಮೂಲಕ ಇದು ದೇಶದೊಳಗಿನ ಬೇಡಿಕೆಯನ್ನು ಮತ್ತಷ್ಟು ಕುಂಠಿತಗೊಳಿಸುವ ಮತ್ತು ಎರಡು ಭಾರತಗಳ ನಡುವಿನ ಕಂದರವನ್ನು ಮತ್ತಷ್ಟು ಹೆಚ್ಚಿಸುವ ಒಂದು ಕಾರ್ಯತಂತ್ರವಾಗುತ್ತದೆ. ಹಣಕಾಸು ಮಂತ್ರಿಗಳು ತಮ್ಮ ಇತ್ತೀಚಿನ ಭಾಷಣದಲ್ಲಿ, ವಾಸ್ತವವಾಗಿ ಇದನ್ನೇ ಹೇಳಿದ್ದರು– ನಾನು ಮುಚ್ಚುಮರೆಯಿಲ್ಲದೆ ಹೇಳುವುದಾದರೆ, ವಿದೇಶಿ ಹೂಡಿಕೆ ಒಂದು ಅನಿವಾರ್ಯತೆ.

ಕಾರ್ಪೊರೇಟ್ ಬಯಕೆ

ಈ ಆರ್ಥಿಕ ಧೋರಣೆಯ ದಿಕ್ಕಿಗೆ ಸಂಬಂಧಪಟ್ಟಂತೆ, ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ವ್ಯತ್ಯಾಸ ಬಹಳ ಕಡಿಮೆ. ಆದ–ರೆ ನಮ್ಮ ಈಗಿನ ಆರ್ಥಿಕ ನಿಧಾನಗತಿ ಬದಲಾಗುವ ಲಕ್ಷಣಗಳೇನೂ ಇಲ್ಲದಿರುವಾಗ, ಜಾಗತಿಕ ಆರ್ಥಿಕ ವ್ಯವಸ್ಥೆ ಕುಂಟುತ್ತಲೇ ಸಾಗಿರುವಾಗ, ತಮ್ಮ ಲಾಭಗಳನ್ನು ಗರಿಷ್ಟ ಲಾಭ ಗಿಟ್ಟಿಸಿಕೊಳ್ಳುವ ಭಾರತೀಯ ಕಾರ್ಪೊರೇಟ್ ವಲಯದ ಆಕಾಂಕ್ಷೆಗಳಿಗೆ ಒಬ್ಬ ಪ್ರವಾದಿಯ ಆವಶ್ಯಕತೆಯಿದೆ. ಜಾಗತಿಕ ದೊಡ್ಡ ಬಂಡವಾಳಿಗರು, ಅದರಲ್ಲೂ ಅಮೆರಿಕನ್ ಕಾರ್ಪೊರೇಟ್ ದೈತ್ಯರು, 1930ರ ದಶಕದ 'ಮಹಾಕುಸಿತ'ದ ಪರಿಣಾಮವಾಗಿ ಹಿಟ್ಲರ್ ಮತ್ತು ಫ್ಯಾಸಿಸಂ ಬೆಳೆದು ಬರುವಲ್ಲಿ ಒಂದು ಮಹತ್ವದ ಪಾತ್ರ ವಹಿಸಿದ್ದರು ಎನ್ನುವುದಕ್ಕೆ ಬಹಳಷ್ಟು ಚಾರಿತ್ರಿಕ ಪುರಾವೆಗಳಿವೆ.

ತೀವ್ರ ಆರ್ಥಿಕ ಬಿಕ್ಕಟ್ಟಿನ ಅವಧಿಗಳಲ್ಲಿ ತಮ್ಮ ಲಾಭವನ್ನು ಗರಿಷ್ಟಗೊಳಿಸಿಕೊಳ್ಳುವ ಭಾರತೀಯ ಕಾರ್ಪೊರೇಟ್ ಜಗತ್ತಿನ ಕೂಗು ತಾರಕಕ್ಕೆ ಏರುತ್ತದೆ. ಅವರು ಒಬ್ಬ 'ಬಲಿಷ್ಟ' ಮುಖಂಡ, ಪ್ರಜಾಪ್ರಭುತ್ವ, ಮಾನವ ಹಕ್ಕುಗಳು ಮತ್ತು ನಾಗರಿಕ ಹಕ್ಕುಗಳನ್ನು ಬಲಿಗೊಟ್ಟಾದರೂ ತಮ್ಮ ಹಿತಗಳಿಗೆ ಅನುಕೂಲಕರವಾದ ಕ್ರಮಗಳನ್ನು ಕೈಗೊಳ್ಳುವಲ್ಲಿ 'ನಿರ್ಣಾಯಕ' ಪ್ರವೃತ್ತಿ ಹೊಂದಿರುವ ಒಬ್ಬ ಮುಖಂಡ ಸಿಗುತ್ತಾನೋ ಎಂದು ಹುಡುಕಾಡುತ್ತಾರೆ. ಆದ್ದರಿಂದ, ಕಾರ್ಪೊರೇಟ್ ಭಾರತದ ಕೆಲವು ವಿಭಾಗಗಳು, ಬಿಜೆಪಿ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ನೇತೃತ್ವದ ಜಾಗತೀಕರಣಕ್ಕೆ ಮತ್ತು ಅದರ ನವ–ಉದರವಾದಿ ಧೋರಣೆಗಳಿಗೆ ಬದ್ಧವಾಗಿರುವುದರಿಂದಾಗಿ, ಬಿಜೆಪಿಯ ಸದ್ಯದ ಪ್ರದರ್ಶನದ ಹುಡುಗನ ಅಡಿಯಲ್ಲಿ ತಮ್ಮ ಅದೃಷ್ಟ ಖುಲಾಯಿಸಬಹುದು ಎಂದು ನಿರೀಕ್ಷಿಸುವಂತೆ ಕಾಣುತ್ತದೆ.

ಭಾರತೀಯ ಕಾರ್ಪೊರೇಟ್ ಮಾಧ್ಯಮದ ವಿಭಾಗಗಳು ಇಂತಹ ಭ್ರಮೆಗಳನ್ನು ಹೊಂದಿದ್ದರೂ, ಮೇಲೆ ಪರಿಶೀಲಿಸಿದ ಪರ್ಯಾಯ ಧೋರಣೆಯ ದಿಕ್ಕು–ದಾರಿಯ ಮೂಲಕ ಭಾರತೀಯ ಜನಸಮೂಹಗಳಿಗೆ ಪರಿಹಾರವನ್ನು ಕಾಂಗ್ರೆಸ್ ಆಗಲೀ, ಬಿಜೆಪಿಯಾಗಲೀ ಕೊಡಲು ಸಾಧ್ಯವಿಲ್ಲ. ದೇಶಕ್ಕೆ ಬೇಕಾಗಿರುವುದು ಪರ್ಯಾಯ ರಾಜಕೀಯ ನೇತಾರರುಗಳಲ್ಲ, ದೇಶಕ್ಕೆ ಈಗ ಬೇಕಾಗಿರುವುದು ಪರ್ಯಾಯ ಜನಪರ ಧೋರಣೆಗಳು. ಮುಂಬರುವ ತಿಂಗಳುಗಳಲ್ಲಿ ಜನತೆಯ ಹೋರಾಟಗಳನ್ನು ತೀವ್ರಗೊಳಿಸುವ ಮೂಲಕ ಇಂತಹ ಒಂದು ಪರ್ಯಾಯ ಮೂಡಿ ಬರುವಂತೆ ಮಾಡಬೇಕಾಗಿದೆ.

RNI No. KARKAN/2...
JANASHAKTHI KANNADA VARA PATRIKE , SEP 01, 2013 Price : Rs. 10/-
Licensed to Post without prepayment License No. W
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO

ಧಾರವಾಡ ಜಿಲ್ಲಾಧಿಕಾರಿಗಳ ಕಚೇರಿ ಎದುರು ಬಡ ರೈತರ ಧರಣಿ
ಬಗರಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ನೀಡಲು ಒತ್ತಾಯ

ಧಾರವಾಡ ಜಿಲ್ಲೆಯ ಧಾರವಾಡ, ಹುಬ್ಬಳ್ಳಿ ಹಾಗೂ ಕಲಘಟಗಿ ತಾಲೂಕುಗಳ ಬಡ ರೈತರು, ಕೃಷಿಕೂಲಿಕಾರರು, ಭೂಮಿ ಇಲ್ಲದ ಬಡವರು, ದಲಿತರು ಸರಕಾರಿ ಹಾಗೂ ಅರಣ್ಯ ಜಮೀನುಗಳನ್ನು ಹಲವು ದಶಕಗಳಿಂದ ಉಳುಮೆ ಮಾಡುತ್ತಿದ್ದು ಈ ಜಮೀನುಗಳಿಗೆ ಹಕ್ಕು ಪತ್ರ ನೀಡಬೇಕು. ಗ್ರಾಮೀಣ ಪ್ರದೇಶದ ಸರಕಾರಿ ಪಡಾ ಜಮೀನಿನಲ್ಲಿ ಮನೆ ಕಟ್ಟಿಕೊಂಡಿರುವವರ ಮನೆ, ನಿವೇಶನವನ್ನು ಸಕ್ರಮಗೊಳಿಸಬೇಕು ಮತ್ತು ಭಯೋಮೆಟ್ರಿಕ್ ಪದ್ಧತಿಯಲ್ಲಿ ನೀಡಲಾಗುತ್ತಿರುವ ಪಡಿತರ ಚೀಟಿ ವಿತರಣೆಯಲ್ಲಾಗುತ್ತಿರುವ ಗ' ಊ ಂ ದ' ಲ ಗ' ಳ' ನ' ್ನ ಸ' ರಿ ಪ' ಡಿ ಸ' ು ವ' ಂ ತ' ಜಿಲ್ಲಾಡಳಿತವನ್ನು ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘದಿಂದ ಆಗಸ್ಟ್-21 2013 ರಂದು ಬಡ ರೈತರು ಧರಣಿ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಬಗರಹುಕುಂ ಸಾಗುವಳಿದಾರರು ನಿಗದಿತ ನಮೂನೆಯಲ್ಲಿ ಅರ್ಜಿಸಲ್ಲಿಸಿದ್ದರೂ ಸರಿಯಾದ ಪರಿಶೀಲನೆ ನಡೆಸದೆ ಅರ್ಜಿಗಳನ್ನು ತಿರಸ್ಕರಿಸಲಾಗುತ್ತಿದೆ. ಅವರಿಗೆ ಭೂಮಿಯ ಹಕ್ಕುಪತ್ರ ನೀಡದೇ ಇರುವುದರಿಂದ ಯಾವುದೇ ಪರಿಹಾರಗಳನ್ನು ಹಾಗೂ ಸಾಲ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಕಲಘಟಗಿ ತಾಲೂಕಿನ ನೆಲ್ಲಿಹರವಿ ಗ್ರಾಮವೂ ಸೇರಿದಂತೆ ಹಲವು ಗ್ರಾಮಗಳಲ್ಲಿ ಕೃಷಿಯೋಗ್ಯ ಫಲವತ್ತಾದ ಭೂಮಿಯನ್ನು



ಸರಕಾರ ಅರಣ್ಯ ಎಂದು ಘೋಷಣೆ ಮಾಡಿ ಅಲ್ಲಿ ಉಳುಮೆ ಮಾಡುತ್ತಿರುವವರನ್ನು ಒಕ್ಕಲೆಬ್ಬಿಸುವುದರೊಂದಿಗೆ ಬಡ ರೈತರನ್ನು ಬೀದಿಪಾಲು ಮಾಡಲಾಗುತ್ತಿದೆ. ಹೀಗಾಗಿ ಅರಣ್ಯ ಭೂಮಿ ಸಾಗುವಳಿ ಮಾಡುತ್ತಿರುವ ರೈತರಿಗೆ 2006ರ ಅರಣ್ಯ ಹಕ್ಕುಗಳ ಕಾಯ್ದೆ ಅಡಿಯಲ್ಲಿ ಅರ್ಜಿಸಲ್ಲಿಸಲು ಅವಕಾಶ ನೀಡಬೇಕು ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಮನೆ ನಿವೇಶನ ಒಂದು ದೊಡ್ಡ ಪ್ರಶ್ನೆಯಾಗಿದ್ದು ಹೆಚ್ಚಿನ ಸಂಖ್ಯೆಯ ಬಡವರು, ಕೂಲಿಕಾರರು ದಲಿತರು ಮನೆ ನಿವೇಶನಕ್ಕಾಗಿ ಪರದಾಡುತ್ತಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಈಗಾಗಲೇ ಸರಕಾರಿ ಪಡಾ ಜಾಗೆಯಲ್ಲಿ ಅನಧಿಕೃತವಾಗಿ ಮನೆ ಕಟ್ಟಿಕೊಂಡವರಿಗೆ ಮನೆ ಸಕ್ರಮಗೊಳಿಸಿ ಹಕ್ಕು ಪತ್ರ ನೀಡಬೇಕು. ಮನೆ ನಿವೇಶನ ಅಥವಾ ಮನೆ ಇಲ್ಲದ ಗ್ರಾಮೀಣ ಪ್ರದೇಶದ ಬಡವರಿಗೆ ಮನೆ ನಿವೇಶನ ನೀಡಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಬಿ.ಎಸ್.ಸೊಪ್ಪಿನ ಈ ಸಂದರ್ಭದಲ್ಲಿ ಮಾತನಾಡಿ ಜಿ ಲ್ಲಾ ಡ' ಳಿ ತ' ವ' ನ' ್ನ ಒತ್ತಾಯಿಸಿದರು.

ಜಿಲ್ಲೆಯಲ್ಲಿ ಬಯೋಮೆಟ್ರಿಕ್ಸ್ ಪದ್ಧತಿ ಮೂಲಕ ನೀಡಲಾಗುತ್ತಿರುವ ಪಡಿತರ ಚೀಟಿ ವಿತರಣೆ ಗೊಂದಲದಿಂದ ಕೂಡಿದ್ದು ಪಂಚಾಯತ ಕಾರ್ಯಾಲಯಗಳಲ್ಲಿ ಸರ್ವರ್ ಹಾಗೂ ಕಂಪ್ಯೂಟರ್ ತಾಂತ್ರಿಕ ತೊಂದರೆಯಿಂದಾಗಿ ಪಡಿತರ ಚೀಟಿ ವಿತರಣೆ ಸಮರ್ಪಕವಾಗಿ ನಡೆಯುತ್ತಿಲ್ಲ. ಕುಟುಂಬದ ಸದಸ್ಯರು ಹಲವು ಪಡಿತರ ಚೀಟಿಗಾಗಿ ಅಲೆದಾಡುವ ಆದ್ದರಿಂದ ಕಂಪ್ಯೂಟರ್ ತೊಂದರೆಗಳನ್ನು ಸರಿಪಡಿಸಿ ಸ ಪಡಿತರ ಚೀಟಿ ವಿತರಣೆಯಾ ಎಲ್ಲರಿಗೂ ಪಡಿತರ ಚೀಟಿ ಸಿಗುವ ಪಡಿತರ ಚೀಟಿ ನೀಡುವ ಅವಧಿ ವಿಸ್ತರಿಸಬೇಕೆಂದು ಇದೇ ಸಂದ ಒತ್ತಾಯಿಸಲಾಯಿತು.

ಧರಣಿ ನಡೆದ ಸ್ಥಳಕ್ಕೆ ಆಗಮಿಸಿ ಸ್ವೀಕರಿಸಿದ ಅಪರ ಜಿಲ್ಲಾಧಿಕಾರಿ ಶಿ ಕಾಪಸೆ ತಮ್ಮ ಸಮಸ್ಯೆಗಳನ್ನು ಸಮ ಚರ್ಚಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷ ಸಭೆ ಕರೆಯುವುದಾಗಿ ಭರವಸೆ ನೀ

ರೈತರ ಧರಣಿಯನ್ನು ಬೆ ಸಿಪಿಐ(ಎಂ) ಪಕ್ಷದ ಮುಖಂಡ ಎಚ್.ಆಯಿ, ಲೋಕಸತ್ತಾ ಪಕ್ಷದ ನಾ ತಿಗಡಿ, ರೈತ ಮುಖಂಡ ಬಿ.ಎಂ ಸಿಐಟಿಯು ಜಿಲ್ಲಾಧ್ಯಕ್ಷ ಬಿ.ಐ.ಈ ವಿಮಾ ನೌಕರರ ಸಂಘದ ಮು ಬಿ.ಎನ್.ಪೂಜಾರಿ, ಮಹೇಶ ಮಾತನಾಡಿದರು. ಮುಖಂ ಕೆ.ಎಚ್.ಪಾಟೀಲ, ಮಂಜುನಾಥ ನೀಲಕಂಠಪ್ಪ ಶಿಂಪಗೇರ, ರಮೇಶ ಶೇಖಪ್ಪ ದಳವಾಯಿ, ವಿಠ್ಠಲ ಬ ಭೀಮಪ್ಪ ಪೂಜಾರಿ ಸೇರಿದಂತೆ ಮದನಭಾವಿ, ನೆಲ್ಲಿಹರವಿ, ಕಂ ಮುಂತಾದ ಗ್ರಾಮಗಳ ರೈತರು ಧರ ಪಾಲ್ಗೊಂಡಿದ್ದರು.

ವರದಿ: ಮಹೇಶ ಪತ್ತಾರ,

ಬಿಸಿಯೂಟ ಖಾಸಗೀಕರಣ ಪ್ರಸ್ತಾವನ್ನು ಕೈಬಿಡಲು ಆಗ್ರಹ

ಗದಗ:- ಬಿಸಿಯೂಟ ಖಾಸಗೀಕರಣದ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರ ಕೈಬಿಡುವಂತೆ ಬಿಸಿಯೂಟ ನೌಕರರ 3ನೇಯ ಜಿಲ್ಲಾ ಸಮ್ಮೇಳನ ಒಕ್ಕೊರಲಿನ ಆಗ್ರಹ ಮಾಡಿತು.

ಸಮ್ಮೇಳನವನ್ನು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯಾಧ್ಯಕ್ಷರಾದ ನಿತ್ಯಾನಂದಸ್ವಾಮಿ ಉದ್ಘಾಟಿಸಿ ಮಾತನಾಡಿ ಕೇಂದ್ರ-ರಾಜ್ಯ ಸರ್ಕಾರದ ಯೋಜನೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬಿಸಿಯೂಟದ ಮಹಿಳೆಯರಿಗೆ ಕೆಲಸದ ಭದ್ರತೆ, ಕನಿಷ್ಠ ಕೂಲಿ ಇಲ್ಲದಿರುವುದು ತುಂಬಾ ವಿಷಾದನೀಯ ಹಾಗೂ ರಾಜ್ಯದಲ್ಲಿ 10 ವರ್ಷಗಳಿಂದ ಯೋಜನೆ ತುಂಬಾ ಯಶಸ್ವಿಯಾಗಿ ನಡೆಯುತ್ತಿದ್ದು ಅದರಲ್ಲಿ ಕೆಲಸ ಮಾಡುವವರು ನಿರ್ಲಕ್ಷ್ಯಕ್ಕೆ ಒಳಗಾಗಿದ್ದಾರೆ ಎಂಬ ಅಸಮಾಧಾನ ವ್ಯಕ್ತಪಡಿಸಿದರು. ಈ ನಡುವೆ ಬಿಹಾರದ ಘಟನೆಯನ್ನು ಮುಂದಿಟ್ಟುಕೊಂಡು ಯೋಜನೆಯನ್ನು ಖಾಸಗೀಕರಣ ಮಾಡಲು ಸರ್ಕಾರ ಮುಂದಾಗುತ್ತಿದೆ. ಇದರ ವಿರುದ್ಧ ಬೀದಿಗಿಳಿದು ಹೋರಾಟ ಮಾಡಬೇಕೆಂದು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ರಾಜ್ಯ ಉಪಾಧ್ಯಕ್ಷ ಶರಣಬಸವ ಮರದ ಮಾತನಾಡಿ ರಾಜ್ಯ ಸರ್ಕಾರ ಮಹಿಳೆಯರ ಸಬಲೀಕರಣದ ಮಾತನ್ನು ಆಡುತ್ತಿದ್ದು ಮಹಿಳೆಯರ ಬಗ್ಗೆ ಗೌರವವಿದ್ದರೆ ಈ



ಮಾತನಾಡುತ್ತಿರುವರು ನಿತ್ಯಾನಂದಸ್ವಾಮಿಯವರು

ಯೋಜನೆಯಲ್ಲಿ ಕೆಲಸ ಮಾಡುತ್ತಿರುವ 90 ಸಾವಿರ ಮಹಿಳೆಯರಿಗೆ ಕನಿಷ್ಠ ಕೂಲಿ ನಿಗದಿ ಮಾಡಿ ಸೇವಾ ನಿಯಮಾವಳಿ ರೂಪಿಸುವಂತೆ ಆಗ್ರಹಿಸಿದರು.

ನಗರದ ಕೆ.ಎಚ್.ಪಾಟೀಲ ಸಭಾಭವನದಲ್ಲಿ ನಡೆದ ಸಮ್ಮೇಳನವು 25 ಜನರ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿತು. ಅಧ್ಯಕ್ಷರಾಗಿ ಯಶೋಧಾ ಬೆಟಗೇರಿಯವರು ಪುನರಾಯ್ಕೆಯಾದರು, ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಮಹೇಶ ಹಿರೇಮಠವರನ್ನು ಆಯ್ಕೆ ಮಾಡಲಾಯಿತು.

ಸಮ್ಮೇಳನದ ವೇದಿಕೆಯಲ್ಲಿ ಬಿ.ಎಸ್. ಸೊಪ್ಪಿನ ರೈತ ಮುಖಂಡರು, ಕ ಮುಖಂಡರಾದ ಎಂ.ಎಸ್.ಹಡಪದ, ನಾಯ್ಕ ಹಾಗೂ ತಾಲೂಕಿನ ಅ ಧ್ಯಕ್ಷರು ಉಪಸ್ಥಿತರಿದ್ದರು. ಅಧ್ಯಕ್ಷತೆ ಯಶೋಧಾ ಬೆಟಗೇರಿ ವಹಿಸಿದ್ದರು, ಹೀರಣ್ಣವರ ನಿರೂಪಿಸಿದರು, ಶಿವ ಭೋಸ್ಲೆ ಸ್ವಾಗತಿಸಿದರು. ಬಾಲು ರಾ ವಂದಿಸಿದರು.

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout BANGALORE-560086 Editor : **NITHYANANDASWAMI**